ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಸೆಪ್ಟೆಂಬರ್ 6 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 140 | ಪುಟಗಳು: 12 ₹4
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಶಿಕ್ಷಣ ನಮ್ಮ ಆದ್ಯತಾ ವಲಯ; ವಾರ್ಷಿಕ 65 ಸಾವಿರ ಕೋಟಿ ವೆಚ್ಚ

- ಶಿಕ್ಷಕರ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ
- ನನಗೆ ರಾಜಪ್ಪ ಮೇಷ್ಟ್ರಿಂದ ಶಾಲಾ ಪಾಠ; ಪ್ರೊ. ನಂಜುಂಡಸ್ವಾಮಿಯವರಿಂದ ರಾಜಕೀಯ ಪಾಠ!
- ತಮ್ಮದೇ ಬದುಕಿನ ಸಂಕಷ್ಟಗಳ ಪ್ರಸ್ತಾಪಿಸಿ ಸುಧಾರಣೆ ಮಂತ್ರ ಜಪಿಸಿದ ಸಿಎಂ

ಬೆಂಗಳೂರು, ಸೆ.5(ಕೆಎಂಶಿ)– ನಮ್ಮ ಸರ್ಕಾರದ ಆದ್ಯತಾ ಕಾರ್ಯಕ್ರಮವಾದ ಶಿಕ್ಷಣಕ್ಕೆ, ವರ್ಷಕ್ಕೆ 65 ಸಾವಿರ ಕೋಟಿ ರೂ. ಖರ್ಚು ಮಾಡುತ್ತಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಪ್ರತಿಪಾದಿಸಿದ್ದಾರೆ.

ಶಿಕ್ಷಕರ ದಿನಾಚರಣೆ ವೇಳೆ ಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ನಾನು ರಾಜಪ್ಪ ಮೇಸ್ಟ್ರಿಂದ ಶಾಲಾ ಶಿಕ್ಷಣ ಹಾಗೂ ಪ್ರೊ. ನಂಜುಂಡಸ್ವಾಮಿ ಅವರಿಂದ ರಾಜಕೀಯ ಪಾಠ ಕಲಿತೆ ಎನ್ನುವ ಮೂಲಕ ತಮ್ಮ ಶಿಕ್ಷಕರನ್ನು ಸ್ಮರಿಸಿದರು.

ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ ಮನಸ್ಥಿತಿ ರೂಪಿಸುವುದು ವೈಚಾರಿಕ ಶಿಕ್ಷಣ, ಕೇವಲ ಪಾತ್ರೆ ತುಂಬಿಸುವುದು ಶಿಕ್ಷಣ ಅಲ್ಲ. ಮಕ್ಕಳಲ್ಲಿ ಅರಿವಿನ ಕಿಡಿ ಹೊತ್ತಿಸುವುದೇ ಶಿಕ್ಷಣದ ಉದ್ದೇಶ ಮತ್ತು ಮಹತ್ವ, ಇಂಥ ಶಿಕ್ಷಣ ನಮ್ಮ ಸರ್ಕಾರದ ಗುರಿ.

ಈ ಹಿಂದೆ ಶೂದ್ರರಿಗೆ ವಿದ್ಯೆ ಕಲಿಯುವ ಅವಕಾಶ ಇರಲಿಲ್ಲ. ಸಂವಿಧಾನ, ಎಲ್ಲರಿಗೂ ಕಡ್ಡಾಯ ಶಿಕ್ಷಣದ ಹಕ್ಕು ನೀಡಿದೆ. ನಮ್ಮ ಸರ್ಕಾರ ಸಂವಿಧಾನದ ಪೀಠಿಕೆಯನ್ನು ಅರ್ಥೈಸುವ ಕೆಲಸ ಮಾಡುತ್ತಿದೆ.

ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಸಂವಿಧಾನದ ಮೌಲ್ಯಗಳಾಗಿದ್ದು, ಬದುಕಿನಲ್ಲಿ ಅಳವಡಿಸಿಕೊಂಡರೆ ಸಮಾಜದಲ್ಲಿ ಮನುಷ್ಯತ್ವ ಹೊಂದಿರುವ ಅತ್ಯುನ್ನತ ನಾಗರಿಕರನ್ನು ಸೃಷ್ಟಿಸಬಹುದಾಗಿದೆ. ಶಿಕ್ಷಕರು ಇದನ್ನು ಅರ್ಥ ಮಾಡಿಕೊಂಡು ನಾಗರಿಕ ಸಮಾಜ ರೂಪಿಸಬೇಕು.

ಜಾತಿ ವ್ಯವಸ್ಥೆ ಇರುವ ಸಮಾಜದಲ್ಲಿ ಮಾನವೀಯ ವ್ಯವಸ್ಥೆ ರೂಪುಗೊಳ್ಳಬೇಕು. ಶಿಕ್ಷಣ ಕಲಿತೂ ಜಾತಿ, ಕಂದಾಚಾರ, ಮೌಢ್ಯ ಆಚರಿಸುವುದು ಶಿಕ್ಷಣಕ್ಕೆ ಬಗೆಯುವ ದ್ರೋಹ, ವೈಚಾರಿಕತೆ, ವೈಜ್ಞಾನಿಕತೆ, ಪರಧರ್ಮ ಸಹಿಷ್ಣುತೆ ಮೈಗೂಡಿಸಿಕೊಳ್ಳುವ ಶಿಕ್ಷಣ ನೀಡುವ ನೈತಿಕ ಮತ್ತು ವೃತ್ತಿಪರ ಹೊಣೆಗಾರಿಕೆ ಶಿಕ್ಷಕರ ಮೇಲಿದೆ.

ವೈದ್ಯರು, ಪ್ರೊಫೆಸರ್‌ಗಳು, ಉಪನ್ಯಾಸಕರು ಹಣೇಬರಹ ನಂಬಿಕೊಂಡಿದ್ದಾರೆ. ಎಂಜಿನಿಯರಿಂಗ್ ಓದಿದವರೂ ಜಾತಿ, ಮೌಢ್ಯ ಆಚರಿಸುವುದನ್ನು ನೋಡಿದ್ದೇನೆ. ಹಾಗಿದ್ದರೆ ಇವರಿಗೆ ಸಿಕ್ಕ ಶಿಕ್ಷಣ ಎಂತಹುದು ಎಂದು ಪ್ರಶ್ನಿಸಿದರು.

ಜಾತಿ ವ್ಯವಸ್ಥೆಯಿಂದ ಅಸಮಾನ ಸಮಾಜ ನಿರ್ಮಾಣವಾಗಿ ಅವಕಾಶಗಳು ಎಲ್ಲರಿಗೂ ಸಿಗುತ್ತಿಲ್ಲ. ಶೂದ್ರರ ಜೊತೆ ಮಹಿಳೆಯರನ್ನೂ ಶಿಕ್ಷಣದಿಂದ ಹೊರಗಿಡಲಾಗಿತ್ತು. ಶಿಕ್ಷಣ ಹಕ್ಕಿನಿಂದಾಗಿ ಅವಕಾಶ ಪಡೆದು ರ್‍ಯಾಂಕ್ ಪಡೆಯುತ್ತಿರುವವರಲ್ಲಿ ಹೆಣ್ಣು ಮಕ್ಕಳೇ ಹೆಚ್ಚಾಗಿದ್ದಾರೆ. ವಿದ್ಯಾರ್ಥಿ ದೆಸೆಯಲ್ಲಿ ನನಗೆ ಮನೆಯಲ್ಲಿ ಊಟ ಮಾಡುವ ಶಕ್ತಿ ಇರಲಿಲ್ಲ. ▶ 6ನೇ ಪುಟಕ್ಕೆ



ಶಿಕ್ಷಕರ ದಿನಾಚರಣೆ ಅಂಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಿದರು. ಈ ವೇಳೆ ಸಚಿವರಾದ ಮಧು ಬಂಗಾರಪ್ಪ, ಡಾ. ಸುಧಾಕರ್ ಇನ್ನಿತರರಿದ್ದರು.

ಶಾಲೆ ನಿರ್ಮಾಣ ಮಾಡಿದವರ ಹೆಸರನ್ನೇ ಆ ಶಾಲೆಗಿಡುವ ತೀರ್ಮಾನ



ಕೆಪಿಸಿಸಿ ಕಚೇರಿಯಲ್ಲಿ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಶಿಕ್ಷಕರನ್ನು ಸನ್ಮಾನಿಸಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಇಡೀ ಪ್ರಪಂಚ ಭಾರತವನ್ನು, ಕರ್ನಾಟಕ ಹಾಗೂ ಬೆಂಗಳೂರಿನ ಮೂಲಕ ನೋಡುತ್ತಿದೆ. ಇದಕ್ಕೆ ಶಿಕ್ಷಕರೇ ಮೂಲ ಕಾರಣ, ಶಿಕ್ಷಣದಿಂದಲೇ ಪ್ರಗತಿ ಎಂದು ಬಣ್ಣಿಸಿದರು. ನಮ್ಮ ಹಿರಿಯರು ಶಿಕ್ಷಣದ ಮೂಲಕ ಕೊಟ್ಟಿರುವ ಕೊಡುಗೆ ಮಹತ್ವದ್ದಾಗಿದೆ. ಸಿ.ವಿ.ರಾಮನ್, ಸರ್ವಪಲ್ಲಿ ರಾಧಾಕೃಷ್ಣನ್‌ರಂತಹ ಶ್ರೇಷ್ಠ ವ್ಯಕ್ತಿಗಳು ಕರ್ನಾಟಕದ ನೆಲದಲ್ಲಿ ಬೋಧನೆ ಮಾಡಿದ್ದಾರೆ. ನಮ್ಮ ರಾಜ್ಯ, ಹೆಚ್ಚು ಎಂಜಿನಿಯರ್, ವೈದ್ಯರು, ನರ್ಸ್‌ಗಳನ್ನು ದೇಶಕ್ಕೆ ಕೊಡುಗೆ ನೀಡುತ್ತಿದೆ. ಜವಾಹರ ಲಾಲ್ ನೆಹರೂ ಕಾಲದಲ್ಲೂ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ದೊರೆಯಿತು. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಸಿಎಸ್‌ಆರ್ ಅನುದಾನದಿಂದ ಶಾಲೆಗಳ ನಿರ್ಮಾಣದ ಬಗ್ಗೆ ಮಹತ್ವದ ತೀರ್ಮಾನ ಮಾಡಲಾಗುವುದು. ಯಾರು ಶಾಲೆ ನಿರ್ಮಾಣ ಮಾಡುತ್ತಾರೋ ಅವರ ಕಂಪೆನಿ ಹೆಸರನ್ನೇ ಇಟ್ಟುಕೊಳ್ಳಬಹುದು. ಅತ್ಯುತ್ತಮ ಕಟ್ಟಡ ▶ 6ನೇ ಪುಟಕ್ಕೆ

ಧರ್ಮಸ್ಥಳ ಅಪಪ್ರಚಾರದ ಬಗ್ಗೆ ಎನ್‌ಐಎ ತನಿಖೆಗೆ ಧರ್ಮ ಜಾಗೃತಿ ಸಮಾವೇಶ ಆಗ್ರಹ

ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾಗೆ ಮನವಿ ಸಲ್ಲಿಸಲು ನಿರ್ಧಾರ

ಧರ್ಮಸ್ಥಳ, ಸೆ.5– ಧರ್ಮಸ್ಥಳ ಪ್ರಕರಣ ಇದೀಗ ದೆಹಲಿ ಮಟ್ಟದಲ್ಲೂ ಭಾರೀ ಚರ್ಚೆಯಾಗುತ್ತಿದೆ. ಕರ್ನಾಟಕದ ಕೆಲ ಸ್ವಾಮೀಜಿಗಳು ಕೇಂದ್ರ ಗೃಹ ಸಚಿವ ಅಮಿತ್ ಶಾ ಭೇಟಿ ಮಾಡಿ ಪ್ರಕರಣವನ್ನು ಎನ್‌ಐಎಗೆ ವಹಿಸುವಂತೆ ಮನವಿ ಮಾಡಿದ್ದಾರೆ. ಈ ನಡುವೆ ಇಂದು (ಸೆ.5) ಧರ್ಮಸ್ಥಳದಲ್ಲಿ ಧಾರ್ಮಿಕ ಕ್ಷೇತ್ರಗಳ ಮುಖಂಡರ 'ಧರ್ಮ ಜಾಗೃತಿ ಸಮಾವೇಶ' ನಡೆದಿದ್ದು, ಈ ವೇಳೆ ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸುವಂತೆ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವರಿಗೆ ಮನವಿ ಸಲ್ಲಿಸಲು ನಿರ್ಣಯಿಸಿದ್ದಾರೆ. ಇದರ ಜೊತೆಗೆ ಸಮಾವೇಶದಲ್ಲಿ ಪ್ರಮುಖವಾಗಿ 8 ನಿರ್ಣಯಗಳನ್ನು ಕೈಗೊಳ್ಳಲಾಗಿದೆ.

- ಪ್ರಕರಣವನ್ನು ರಾಷ್ಟ್ರೀಯ ತನಿಖಾ ದಳದ ಮೂಲಕ ತನಿಖೆ ನಡೆಸುವಂತೆ ಪ್ರಧಾನ ಮಂತ್ರಿಗಳು ಮತ್ತು ಕೇಂದ್ರದ ಗೃಹ ಸಚಿವರಿಗೆ ಮನವಿ ಮಾಡುವ ನಿರ್ಧಾರ.
- ಅಪಪ್ರಚಾರ ಮತ್ತು ಸುಳ್ಳು ಸುದ್ದಿಯನ್ನು ಹಬ್ಬಿಸಿ ಸಮಾಜದ ಶಾಂತಿ ನೆಮ್ಮದಿಗೆ ಭಂಗ ತರುತ್ತಿರುವ ಯೂ ಟ್ಯೂಬರ್‌ಗಳ ವಿರುದ್ಧ ಮತ್ತು ಯೂಟ್ಯೂಬ್ ಚಾನಲ್‌ಗಳ ವಿರುದ್ಧ ನಿರ್ದಾಕ್ಷಿಣ್ಯ ಕಾನೂನು ಕ್ರಮವನ್ನು ಕೈಗೊಳ್ಳುವಂತೆ ಸರ್ಕಾರಕ್ಕೆ ಆಗ್ರಹ.
- ಎಸ್‌ಐಟಿ ರಚಿಸಿದ್ದಕ್ಕೆ ಮುಖ್ಯಮಂತ್ರಿಗಳಿಗೆ, ಗೃಹ ಸಚಿವರಿಗೆ ಮತ್ತು ಅಧಿಕಾರಿಗಳಿಗೆ ಧನ್ಯವಾದ ಸಲ್ಲಿಸಲು ನಿರ್ಣಯ. ▶ 6ನೇ ಪುಟಕ್ಕೆ

ಧರ್ಮಸ್ಥಳ ಬುರುಡೆ ಪ್ರಕರಣಕ್ಕೆ ಕೇರಳ ಲಿಂಕ್; ಯೂಟ್ಯೂಬರ್ ಮನಾಫ್‌ಗೆ ಎಸ್‌ಐಟಿ ನೋಟಿಸ್

ಬೆಳ್ತಂಗಡಿ, ಸೆ.5– ಧರ್ಮಸ್ಥಳದ ಸುತ್ತಮುತ್ತ ನೂರಾರು ಯುವತಿಯರ ಕೊಲೆ ಮಾಡಲಾಗಿದೆ, ಅವರ ಬುರುಡೆಗಳು ದೊರೆತಿವೆ ಎಂದು ಸುಳ್ಳು ಸುದ್ದಿ ಹರಡಿದ ಬುರುಡೆ ಪ್ರಕರಣ ತನಿಖೆ ತೀವ್ರಗೊಂಡಿದೆ. ಈ ಪ್ರಕರಣದ ಹಿಂದೆ ಕೇರಳದ ಯೂಟ್ಯೂಬರ್ ಮನಾಫ್ ಪಾತ್ರವಿದೆ ಎಂದು ಎಸ್‌ಐಟಿ ತಂಡ ಶಂಕೆ ವ್ಯಕ್ತಪಡಿಸಿದ್ದು, ಮನಾಫ್‌ಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿದೆ.



ಮನಾಫ್

ಮನಾಫ್ ವಿರುದ್ಧ ಆರೋಪ: ಕೇರಳ ಮೂಲದ ಯೂಟ್ಯೂಬರ್ ಮನಾಫ್ ಈ ಪ್ರಕರಣದ ಆರಂಭದಿಂದಲೂ ತನ್ನ ಯೂಟ್ಯೂಬ್ ಚಾನೆಲ್‌ನಲ್ಲಿ ಸುಳ್ಳು ಕಥೆಗಳನ್ನು ಹಬ್ಬಿಸಿದ್ದ. ಜಯಂತ್.ಟಿ ಎಂಬ ವ್ಯಕ್ತಿಯ ಮೂಲಕ ಈ ಕಥೆಯನ್ನು ಕೇರಳದ ಮಾಧ್ಯಮಗಳಿಗೂ ತಲುಪಿಸಿ, ಸುಳ್ಳು ಕಥೆಯನ್ನು ನಂಬುವಂತೆ ಮಾಡಿದ್ದ. ಮನಾಫ್ ಧರ್ಮಸ್ಥಳಕ್ಕೆ ಬಂದು ಸುಜಾತ ಭಟ್ ಮತ್ತು ಇತರ ಪ್ರಕರಣಗಳ ಬಗ್ಗೆ ಕಟ್ಟುಕಥೆಗಳನ್ನು ಹೇಳಿ, ಧರ್ಮಸ್ಥಳದ ಸುತ್ತಮುತ್ತ ನೂರಾರು ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ನಡೆಸಿ, ಕೊಲೆ ಮಾಡಿ ಹೂಳಲಾಗಿದೆ ಎಂದು ಸುಳ್ಳು ಪ್ರಚಾರ ಮಾಡಿದ್ದ. ▶ 6ನೇ ಪುಟಕ್ಕೆ

ಬುರುಡೆ ಕೊಟ್ಟಿದ್ದೇ ಗಿರೀಶ್ ಮಟ್ಟಣ್ಣನವರ್!

ಬೆಳ್ತಂಗಡಿ, ಸೆ.5– ವಿಶೇಷ ತನಿಖಾ ತಂಡದ (ಎಸ್‌ಐಟಿ) ತನಿಖೆಯ ವೇಳೆ ಬುರುಡೆಯನ್ನು ನಮಗೆ ಕೊಟ್ಟಿದ್ದು ಗಿರೀಶ್ ಮಟ್ಟಣ್ಣನವರ್ ಎಂದು ಜಯಂತ್ ಹೇಳಿರುವುದಾಗಿ ಮೂಲಗಳು ತಿಳಿಸಿವೆ. ಧರ್ಮಸ್ಥಳ ಬುರುಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ತನಿಖೆಯನ್ನು ಚುರುಕುಗೊಳಿಸಿದೆ. ಎಸ್‌ಐಟಿ ಜಯಂತ್ ಮತ್ತು ಯೂಟ್ಯೂಬರ್ ಅಭಿಷೇಕ್‌ನನ್ನು ವಿಚಾರಣೆಗೆ ಒಳಪಡಿಸುತ್ತಿದೆ. ಈ ವೇಳೆ ಬುರುಡೆ ಸಿಕ್ಕಿದ್ದು ಎಲ್ಲಿ ಎಂಬ ಪ್ರಶ್ನೆಗೆ ಮಟ್ಟಣ್ಣನವರ್ ಹೆಸರನ್ನು ಜಯಂತ್ ಹೇಳಿರುವುದಾಗಿ ತಿಳಿದುಬಂದಿದೆ.



ಗಿರೀಶ್ ಮಟ್ಟಣ್ಣನವರ್



ಜಯಂತ್

ನ್ಯಾಯಾಲಯಕ್ಕೆ ಹಾಜರುಪಡಿಸಿದ ಬುರುಡೆ ಜೊತೆ ಇದ್ದ ಮಣ್ಣನ್ನು ವಿಧಿ–ವಿಜ್ಞಾನ ಪ್ರಯೋಗಾಲಯಕ್ಕೆ ಪೊಲೀಸರು ಕಳುಹಿಸಿದ್ದರು. ಎಫ್‌ಎಸ್‌ಎಲ್ ಲ್ಯಾಬ್‌ನಲ್ಲಿ ಧರ್ಮಸ್ಥಳದ ಆಸುಪಾಸಿನಲ್ಲಿ ಇರುವ ಮಣ್ಣಿಗೂ ಬುರುಡೆಯಲ್ಲಿರುವ ಮಣ್ಣಿಗೂ ಸಾಮ್ಯತೆ ಇಲ್ಲ ಎಂಬ ವಿಚಾರ ದೃಢಪಟ್ಟಿತ್ತು.

ಈ ವಿಚಾರ ಬೆಳಕಿಗೆ ಬಂದ ಬೆನ್ನಲ್ಲೇ ತಿಮರೋಡಿ ನಿವಾಸಕ್ಕೆ ಮಹಜರು ಮಾಡಲು ಬಂದಿದ್ದಾಗ ಚಿನ್ನಯ್ಯ ರಬ್ಬರ್ ತೋಟದ ಒಂದು ಜಾಗವನ್ನು ತೋರಿಸಿ ಇಲ್ಲಿಂದ ಬುರುಡೆ ತೆಗೆದಿರುವುದಾಗಿ ತಿಳಿಸಿದ್ದ. ಈತನ ಹೇಳಿಕೆಯಂತೆ ಪೊಲೀಸರು ರಬ್ಬರ್ ತೋಟದಿಂದ ಮಣ್ಣುಗಳನ್ನು ತೆಗೆದು ಎಫ್‌ಎಸ್‌ಎಲ್‌ಗೆ ▶ 6ನೇ ಪುಟಕ್ಕೆ

ಮುಂಬೈಗೆ 400 ಕೆಜಿ ಆರ್‌ಡಿಎಕ್ಸ್‌ನೊಂದಿಗೆ 14 ಪಾಕಿಸ್ತಾನಿ ಉಗ್ರರು ಎಂಟ್ರಿ!

ಉಗ್ರ ಬೆದರಿಕೆ; ತೀವ್ರ ಕಟ್ಟೆಚ್ಚರ



ಮುಂಬೈ, ಸೆ.5– ಹಿಂದೆಂದಿಗಿಂತಲೂ ಕಂಡು ಕೇಳರಿಯದ ದಾಳಿ ನಡೆಸುವುದಾಗಿ ಮುಂಬೈ ಸಂಚಾರ ಪೊಲೀಸ್ ಠಾಣೆಗೆ ಉಗ್ರರ ವಾಟ್ಸಪ್ ಬೆದರಿಕೆ ಸಂದೇಶ ಬಂದಿದೆ. ಅನಾಮಿಕ ವ್ಯಕ್ತಿಯೊಬ್ಬನಿಂದ ಬೆದರಿಕೆ ಸಂದೇಶ ಬಂದಿದ್ದು, ನಗರದಾದ್ಯಂತ ಭಾರೀ ಕಟ್ಟೆಚ್ಚರ ವಹಿಸಲಾಗಿದೆ.

ಪಾಕಿಸ್ತಾನ ಮೂಲದ ಜಿಹಾದಿ ಗುಂಪಿನ ಸದಸ್ಯನಿಂದ ಬೆದರಿಕೆ ಬಂದಿದೆ ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ. ಪಾಕಿಸ್ತಾನ ಲಷ್ಕರ್–ಎ–ಜಿಹಾದಿ ಸಂಘಟನೆಯ 14 ಉಗ್ರರು ಭಾರತ ಪ್ರವೇಶಿಸಿದ್ದಾರೆ. 400 ಕೆಜಿ ಆರ್‌ಡಿಎಕ್ಸ್ ಸ್ಫೋಟಿಸಿ ಜನರನ್ನು ಕೊಲ್ಲಲಿದ್ದಾರೆ. ಅಲ್ಲದೇ ನಗರಾದ್ಯಂತ 34 ವಾಹನಗಳಲ್ಲಿ ಮಾನವ ಬಾಂಬ್ ಸ್ಫೋಟಿಸಲಾಗುವುದು ಎಂದು ಎಚ್ಚರಿಕೆ ಸಂದೇಶ ಕಳಿಸಿರುವುದಾಗಿ ▶ 6ನೇ ಪುಟಕ್ಕೆ

ಒಳಮೀಸಲಾತಿ ಜಾರಿಯ ಬೆನ್ನಲ್ಲೇ 80 ಸಾವಿರ ಹುದ್ದೆ ನೇರ ನೇಮಕಾತಿ ರದ್ದು

ಬೆಂಗಳೂರು, ಸೆ.5– ಒಳಮೀಸಲಾತಿ ಜಾರಿಗೆ ಬಂದ ಬೆನ್ನಲ್ಲೇ ರಾಜ್ಯದ ವಿವಿಧ ಇಲಾಖೆಗಳ ನೇಮಕಾತಿ ಪ್ರಕ್ರಿಯೆ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ಸೆ.4 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಲಾಗಿದ್ದು, ಈಗಾಗಲೇ ಹೊರಡಿಸಲಾಗಿದ್ದ ಸುಮಾರು 80 ಸಾವಿರ ಹುದ್ದೆಗಳ ನೇಮಕಾತಿ ಅಧಿಸೂಚನೆಗಳನ್ನು ರದ್ದುಪಡಿಸುವ ತೀರ್ಮಾನ ಕೈಗೊಳ್ಳಲಾಗಿದೆ. ಹಾಗಾಗಿ 28.10.2024ರ ನಂತರ ಸರ್ಕಾರದ ವಿವಿಧ ಇಲಾಖೆ/ಮಂಡಳಿ/ನಿಗಮ/ಸ್ವಾಯತ್ತ ಸಂಸ್ಥೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ಹಿಂದಿನ ದಿನಗಳಲ್ಲಿ ಹೊರಡಿಸಲಾಗಿದ್ದ ಅಧಿಸೂಚನೆ ಗಳನ್ನು ರದ್ದುಪಡಿಸುವಂತೆ ಸೂಚಿಸಲಾಗಿದೆ.

ಪರಿಶಿಷ್ಟ ಜಾತಿ ಒಳಮೀಸಲಾತಿ ಜಾರಿಗೆ ತಂದ ನಂತರ, ಹೊಸದಾಗಿ ನೇಮಕಾತಿ ಅಧಿಸೂಚನೆಗಳನ್ನು ಕಾಲಬದ್ಧವಾಗಿ ಹೊರಡಿಸಲು ಸಂಬಂಧಿತ ನೇಮಕಾತಿ ಪ್ರಾಧಿಕಾರಗಳಿಗೆ ನಿರ್ದೇಶನ ನೀಡಲಾಗಿದೆ.

28.10.2024ರ ಹಿಂದೆಯೇ ನೇರ ನೇಮಕಾತಿ ಅಧಿಸೂಚನೆ ಹೊರಡಿಸಿದ್ದರೂ ಅದರ ನಂತರ ತಿದ್ದುಪಡಿ ಅಧಿಸೂಚನೆಗಳು ಹೊರಬಿದ್ದಿದ್ದರೆ, ಅಂತಹ ಅಧಿಸೂಚನೆಗಳನ್ನೂ ರದ್ದುಪಡಿಸಬೇಕೆಂದು ಸರ್ಕಾರ ಸ್ಪಷ್ಟಪಡಿಸಿದೆ. ರದ್ದುಗೊಂಡ ಅಧಿಸೂಚನೆಗಳ ಬದಲು, ಪರಿಶಿಷ್ಟ ಜಾತಿ ಒಳಮೀಸಲಾತಿಯನ್ನು ಅನ್ವಯಿಸಿ ಹೊಸ ಅಧಿಸೂಚನೆಗಳನ್ನು ಹೊರಡಿಸುವುದು ಕಡ್ಡಾಯವಾಗಿರುತ್ತದೆ.

ಸಚಿವ ಸಂಪುಟ ಸಭೆಯಲ್ಲಿ ಕೈಗೊಳ್ಳಲಾದ ಈ ತೀರ್ಮಾನವು ರಾಜ್ಯದಲ್ಲಿ ಸಮಾನತೆ, ನ್ಯಾಯಸಮ್ಮತ ಮೀಸಲು ಹಂಚಿಕೆ ಹಾಗೂ ಸಮ ಸಮಾಜ ನಿರ್ಮಾಣವನ್ನು ಸಾಧಿಸಲು ತೆಗೆದು ಕೊಳ್ಳಲಾದ ಮಹತ್ವದ ಹೆಜ್ಜೆ ಎಂದು ಸರ್ಕಾರ ತಿಳಿಸಿದೆ. ಎಲ್ಲಾ ನೇಮಕಾತಿ ಪ್ರಾಧಿಕಾರಗಳು ಹಾಗೂ ಆಯ್ಕೆ ಮಂಡಳಿಗಳು ಈ ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಸೂಚಿಸಲಾಗಿದೆ ▶ 6ನೇ ಪುಟಕ್ಕೆ

ರಾಷ್ಟ್ರಪತಿಗಳ ಪ್ರವಾಸದ ಬಳಿಕ ಮತ್ತೆ ಲಲಿತಮಹಲ್ ಬಳಿ ಬಿಡಾರ ಹೂಡಿದ ಫಾಸ್ಟ್‌ಫುಡ್‌ಗಳು

ಸ್ವಚ್ಛತೆಯಿಂದ ಸಂಭ್ರಮಪಟ್ಟ ಸ್ಥಳೀಯ ನಿವಾಸಿಗಳ ಭ್ರಮನಿರಸನ



ರಾಷ್ಟ್ರಪತಿ ದ್ರೌಪತಿ ಮುರ್ಮು ಅವರ ಮೈಸೂರು ಭೇಟಿ ಹಿನ್ನೆಲೆಯಲ್ಲಿ ಲಲಿತ ಮಹಲ್ ಬಳಿ ಫಾಸ್ಟ್‌ಫುಡ್ ಅಂಗಡಿಗಳನ್ನು ನಗರಪಾಲಿಕೆ ತೆರವುಗೊಳಿಸಿದ್ದ ದೃಶ್ಯ



ಮೈಸೂರಿನ ಲಲಿತಮಹಲ್ ಬಳಿ ಹೆದ್ದಾರಿ ಆಜುಬಾಜಲ್ಲಿ ಮತ್ತೆ ಫಾಸ್ಟ್‌ಫುಡ್‌ಗಳು ತಲೆ ಎತ್ತುತ್ತಿರುವುದು.

ಮೈಸೂರು, ಸೆ.5(ಎಂಟಿವೈ)– ಮೈಸೂರಿನ ಲಲಿತಮಹಲ್ ಮೈದಾನದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮತ್ತೆ ಯಥಾ ಪ್ರಕಾರ ಫಾಸ್ಟ್‌ಫುಡ್‌ಗಳು ತಲೆ ಎತ್ತಿದ್ದು, ಮಹಾನಗರ ಪಾಲಿಕೆ ವೈಫಲ್ಯಕ್ಕೆ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಮೈಸೂರು ಪ್ರವಾಸದ ಹಿನ್ನೆಲೆಯಲ್ಲಿ ಸುರಕ್ಷತೆ ಹಾಗೂ ಸ್ವಚ್ಛತೆ ದೃಷ್ಟಿಯಿಂದ ಐದಾರು ದಿನ ಮುಂಚೆಯೇ ಲಲಿತಮಹಲ್ ಮೈದಾನದ ಬಳಿಯ 50ಕ್ಕೂ ಹೆಚ್ಚು ಫಾಸ್ಟ್‌ಫುಡ್‌ಗಳನ್ನು ತೆರವುಗೊಳಿಸಲಾಗಿತ್ತು. ಫಾಸ್ಟ್‌ಫುಡ್‌ಗಳಿದ್ದ ಸ್ಥಳದಲ್ಲಿ ಮಣ್ಣು ಸುರಿದು ಸಮತಟ್ಟು ಮಾಡಿ ಸ್ವಚ್ಛಗೊಳಿಸಲಾಗಿತ್ತು. ಮೈಸೂರು ಮಹಾನಗರ ಪಾಲಿಕೆಯ ಆ ಕಾರ್ಯಕ್ಕೆ ಸ್ಥಳೀಯರು ಭಾರೀ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಮುಂದೆಯೂ ಇದೇ ರೀತಿ ನಿರ್ವಹಣೆ ಮಾಡುತ್ತಾರೆ ಎಂದು ಅಚಲ ವಿಶ್ವಾಸ ಹೊಂದಿದ್ದರು. ಇನ್ನೆಂದೂ ಈ ಹೆದ್ದಾರಿಯಲ್ಲಿ ಫಾಸ್ಟ್‌ಫುಡ್ ಇನ್ನಿತರ ವ್ಯಾಪಾರಕ್ಕೆ ಅವಕಾಶ ಮಾಡಿಕೊಡಬಾರದು ಎಂದು ಪತ್ರಿಕೆ ಮೂಲಕವೂ ಪಾಲಿಕೆಗೆ ಒತ್ತಾಯಿಸಿದ್ದರು. ಆದರೆ ಸಾರ್ವಜನಿಕರ ನಿರೀಕ್ಷೆಯನ್ನು ಪಾಲಿಕೆ ಸುಳ್ಳಾಗಿಸಿದೆ.

ರಾಷ್ಟ್ರಪತಿಯವರು ಮೈಸೂರಿನಿಂದ ತೆರಳಿ ಮೂರೇ ದಿನದಲ್ಲಿ ಸುರಕ್ಷತೆ ಹಾಗೂ ಸ್ವಚ್ಛತೆಯ ಕಲ್ಪನೆಯೇ ಮಾಯವಾಗಿದೆ. ಗುರುವಾರದಿಂದ ಮತ್ತೆ ಫಾಸ್ಟ್‌ಫುಡ್‌ಗಳು ತಲೆ ಎತ್ತಲಾರಂಭಿಸಿದ್ದು, ಈಗಾಗಲೇ 15ಕ್ಕೂ ಹೆಚ್ಚು ಗಾಡಿಗಳಲ್ಲಿ ವ್ಯಾಪಾರ ಶುರು ಮಾಡಿದ್ದಾರೆ. ದಿನ ಕಳೆದಂತೆ ಗಾಡಿಗಳ ಸಂಖ್ಯೆ ಹೆಚ್ಚಾಗುತ್ತವೆ. ಮತ್ತೆ ಫಾಸ್ಟ್‌ಫುಡ್ ಗಾಡಿಗಳು ಸಾಲುಗಟ್ಟಿ ಫುಡ್ ಸ್ಟ್ರೀಟ್ ಮಾದರಿ ನಿರ್ಮಾಣವಾಗುತ್ತದೆ. ಪೈಪೋಟಿ ವ್ಯಾಪಾರದ ಅಬ್ಬರ ಜೋರಾಗುತ್ತದೆ ಎಂದು ಸ್ಥಳೀಯರು ಕಳವಳ ವ್ಯಕ್ತಪಡಿಸಿದ್ದಾರೆ.

ಒಂದು ರೀತಿಯಲ್ಲಿ ರಾಷ್ಟ್ರಪತಿ ಅವರು ಬಂದು ಹೋಗಿದ್ದರಿಂದ ವ್ಯಾಪಾರಿಗಳಿಗೆ ಅನುಕೂಲವೇ ಆಗಿದೆ. ಪಾಲಿಕೆ ವತಿಯಿಂದಲೇ ಜನರ ತೆರಿಗೆ ಹಣದಿಂದ ವ್ಯಾಪಾರದ ಸ್ಥಳವನ್ನು ಸಮತಟ್ಟು ಮಾಡಿಸಿ ಕೊಡಲಾಗಿದೆ. ಈಗ ತಮ್ಮದೇ ಜಾಗ ಎಂಬಂತೆ ಗಡಿ ಗುರುತಿಸಿಕೊಂಡು ಬೇಕು ಬೇಕಾದಲ್ಲಿ ಗಾಡಿ ನಿಲ್ಲಿಸಿಕೊಂಡಿದ್ದಾರೆ. ಈ ಬಗ್ಗೆ ವ್ಯಾಪಾರಿಗಳು ಹಾಗೂ ಪಾಲಿಕೆ ಅಧಿಕಾರಿಗಳು ಏನಾದರೂ ಮೊದಲೇ ಮಾತುಕತೆ ಮಾಡಿಕೊಂಡಿದ್ದರೇನೋ ಎಂಬ ಅನುಮಾನವಿದೆ ಎಂದು ಜನ ಆಕ್ರೋಶದಿಂದ ಪ್ರಶ್ನಿಸಿದ್ದಾರೆ.

ಹುಸಿ ಅಬ್ಬರ: ರಾಷ್ಟ್ರಪತಿಗಳ ಪ್ರವಾಸದ ಹಿನ್ನೆಲೆಯಲ್ಲಿ ಜೆಸಿಬಿಗಳ ಜೊತೆಗೆ ಪಾಲಿಕೆ ಅಧಿಕಾರಿಗಳೂ ಘರ್ಜಿಸಿದರು. ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿದ್ದ ಒಂದೂ ಅಂಗಡಿಯನ್ನೂ ಬಿಡದಂತೆ ತೆರವುಗೊಳಿಸಿದರು. ಸಮತಟ್ಟು ಮಾಡಿ, ಸುಂದರಗೊಳಿಸಿದರು. ಅಂದಿನ ಕಾರ್ಯಾಚರಣೆ ನಿಜಕ್ಕೂ ಅಧಿಕಾರಿಗಳ ಮೇಲಿನ ಗೌರವ ಹಾಗೂ ವಿಶ್ವಾಸವನ್ನು ಇಮ್ಮಡಿಗೊಳಿಸಿತ್ತು. ಆದರೆ ಮೂರೇ ದಿನಗಳಲ್ಲಿ ಅದೆಲ್ಲಾ ಹುಸಿ ಅಬ್ಬರ ಎಂಬುದು ಸಾಬೀತಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಜನರ ಜೀವಕ್ಕೆ ಬೆಲೆ ಇಲ್ಲವೇ?: ಲಲಿತಮಹಲ್‌ಗೆ ಸಾಕಷ್ಟು ಗ್ರಾಹಕರು ಹಾಗೂ ಪ್ರವಾಸಿಗರು ಭೇಟಿ ▶ 6ನೇ ಪುಟಕ್ಕೆ

ಅಭಿನಂದನೆ...



ನಿಖಿಲ್ ಕುಮಾರಸ್ವಾಮಿ ಅಭಿಮಾನಿಗಳ ಬಳಗದ ವತಿಯಿಂದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹೊಸಹುಂಡಿ ರಿಂಗ್ ರಸ್ತೆಯಲ್ಲಿ ಸ್ಥಾಪಿಸಿರುವ ಡಿಜಿಟಲ್ ಸೇವಾ ಕೇಂದ್ರವನ್ನು ಹುಣಸೂರು ಶಾಸಕ ಜಿ.ಡಿ. ಹರೀಶ್‌ಗೌಡ ಉದ್ಘಾಟಿಸಿದರು. ಇದೇ ವೇಳೆ ಅವರನ್ನು ಸನ್ಮಾನಿಸಲಾಯಿತು. ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ಬೀಡನಹಳ್ಳಿ ಕುಮಾರ್, ಪ್ರತಾಪ್, ಬಾಬು, ಶ್ರೀನಿವಾಸ್, ಬಾಲು, ವಿವೇಕ, ಮಹೇಶ್, ಮಾದೇಶ್‌ಸ್ವಾಮಿ, ಚೇತು, ನಾಗರಾಜು ಉಪಸ್ಥಿತರಿದ್ದರು.

ದಸರಾ ವೆಬ್‌ಸೈಟ್‌ಗೆ ಚಾಲನೆ

ಮೈಸೂರು, ಸೆ.5(ಎಂಕೆ)– ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವ–2025 ರ ಅಧಿಕೃತ ವೆಬ್‌ಸೈಟ್ ಅನ್ನು ಸಾರ್ವಜನಿಕರ ಅನುಕೂಲಕ್ಕೆ ಬಿಡುಗಡೆಗೊಳಿಸಲಾಗಿದೆ. ಸೆ.22 ರಿಂದ ಅ.2 ರವರೆಗೆ ಅತ್ಯಂತ ವಿಜೃಂಭಣೆಯಿಂದ ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಜರುಗಲಿದ್ದು, ಅಗತ್ಯ ಪೂರ್ವಸಿದ್ಧತೆಯೊಂದಿಗೆ ದಸರಾ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ನಾಡಹಬ್ಬ ಮೈಸೂರು ದಸರಾ ಕುರಿತಾದ ಮಾಹಿತಿಗಳನ್ನು ಸಾರ್ವಜನಿಕರಿಗೆ ಒದಗಿಸುವ ಉದ್ದೇಶಕ್ಕಾಗಿ ಮೈಸೂರು ದಸರಾ ಕುರಿತ ಅಧಿಕೃತ ವೆಬ್‌ಸೈಟ್ https://mysoredasara.gov.in/ ವನ್ನು ಸೆ.4 ರಂದು ಜಿಲ್ಲಾ ಉಸ್ತುವಾರಿ ಸಚಿವರು ಅನಾವರಣಗೊಳಿಸಿದ್ದು, 2025ನೇ ಸಾಲಿನ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಸಂಬಂಧ ದಸರಾ ಕಾರ್ಯಕಾರಿ ಸಮಿತಿ, ದಸರಾ ಉಪಸಮಿತಿಗಳು, ದಸರಾ ಕಾರ್ಯಕ್ರಮಗಳ ವಿವರ ಮತ್ತು ಜಂಬೂಸವಾರಿ, ಪಂಜಿನ ಕವಾಯತು ಕಾರ್ಯಕ್ರಮಗಳ ಟಿಕೆಟ್ ಖರೀದಿಗಾಗಿ ಸಾರ್ವಜನಿಕರು ಅಧಿಕೃತ ದಸರಾ ಜಾಲತಾಣಕ್ಕೆ ಭೇಟಿ ನೀಡಿ ಸದುಪಯೋಗ ಪಡೆದುಕೊಳ್ಳುವಂತೆ ದಸರಾ ವಿಶೇಷಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ಪತ್ರಿಕಾ ಪ್ರಕಟಣೆಯಲ್ಲಿ ಕೋರಿದ್ದಾರೆ.

ಅಭಿನಂದನೆ...



ವಿಶ್ವ ಪತ್ರಿಕಾ ವಿತರಕರ ದಿನದ ಪ್ರಯುಕ್ತ ಕಳೆದ 35 ವರ್ಷಗಳಿಂದ ಪತ್ರಿಕೆಗಳನ್ನು ವಿತರಿಸುತ್ತಿರುವ ಕುವೆಂಪುನಗರದ ಪಿ ವೆಂಕಟೇಶ್ ನಾಯಕ್ ಹಾಗೂ ಶಿವಲಿಂಗು ಅವರನ್ನು ಸನ್ಮಾನಿಸಲಾಯಿತು. ಮೈಸೂರು ನಗರ ಕಾಂಗ್ರೆಸ್ ಉಪಾಧ್ಯಕ್ಷರಾದ ವಿಕ್ರಾಂತ್ ಪಿ.ದೇವೇಗೌಡ, ಜಯನಗರ ಶ್ರೀನಿವಾಸ ದೇವಸ್ಥಾನದ ಕೆಂಪಣ್ಣ, ಚನ್ನಪ್ಪ, ಗಂಗೆ ಮರಿಯಪ್ಪನವರ ನಾಗಣ್ಣ, ಕಜ್ಜಪ್ಪ, ಕೃಷ್ಣಪ್ಪ, ನಿಖಿಲೇಶ್, ಪ್ರದೀಪ್ (ದೇವು) ಇತರರು ಚಿತ್ರದಲ್ಲಿದ್ದಾರೆ.

ಮುಂಬೈ ವಂಚಕನೊಂದಿಗೆ ವ್ಯವಹಾರದ ಬೆದರಿಕೆ ಹಾಕಿ ಮೈಸೂರು ಮಹಿಳೆಗೆ 27.49 ಲಕ್ಷ ವಂಚನೆ

ಮೈಸೂರು, ಸೆ.5– ಮನಿ ಲಾಂಡರಿಂಗ್‌ನಲ್ಲಿ ಅರೆಸ್ಟ್ ಆಗಿರುವ ನರೇಶ್ ಗೋಯಲ್ ಅವರಿಂದ ನಿಮಗೆ ಕಮಿಷನ್ ಬಂದಿದೆ ಎಂದು ಮಹಿಳಾ ಸರ್ಕಾರಿ ಉದ್ಯೋಗಿಯನ್ನು ಬೆದರಿಸಿ, ಪರಿಶೀಲನೆ ನೆಪದಲ್ಲಿ ಲಕ್ಷಾಂತರ ಹಣ ಲಪಟಾಯಿಸಿರುವ ಘಟನೆ ಮೈಸೂರಿನಲ್ಲಿ ಬೆಳಕಿಗೆ ಬಂದಿದೆ.

ನಗರದ ಬೃಂದಾವನ ಬಡಾವಣೆ ಮೊದಲ ಹಂತದ 59 ವರ್ಷದ ಮಹಿಳೆ ಸೈಬರ್ ವಂಚಕರ ಸಂಚಿಗೆ ಬಲಿಯಾಗಿ ತಮ್ಮ ಹಾಗೂ ಪತಿಯ ಖಾತೆಯಿಂದ ಒಟ್ಟು 27,49,999 ರೂ. ವರ್ಗಾವಣೆ ಮಾಡಿ, ಕಳೆದುಕೊಂಡಿದ್ದಾರೆ.

ಅಪರಿಚಿತ, ಆ.27ರಂದು ಕರೆ ಮಾಡಿ ತಾವು ಮುಂಬೈ ಕ್ರೈಂ ಪೊಲೀಸ್ ಎಂದು ಹೇಳಿಕೊಂಡಿದ್ದಾನೆ. ನಂತರ ವಾಟ್ಸಾಪ್ ವಿಡಿಯೋ ಕಾಲ್ ಮಾಡಿ, ಮುಂಬೈ ನರೇಶ್ ಗೋಯಲ್ ಅವರು ಮನಿ ಲಾಂಡರಿಂಗ್‌ನಲ್ಲಿ ಅರೆಸ್ಟ್ ಆಗಿದ್ದು, ಅವರ ಬಳಿ ಹಲವಾರು ಎಟಿಎಂ ಕಾರ್ಡ್‌ಗಳು ಸಿಕ್ಕಿರುವುದಲ್ಲದೆ, ಆತ ನಿಮಗೆ ಶೇ.20ರಷ್ಟು ಕಮಿಷನ್ ನೀಡಿದ್ದಾನೆ. ಆದ್ದರಿಂದ ನಿಮ್ಮ ಎಲ್ಲಾ ಖಾತೆಗಳನ್ನೂ ಪರಿಶೀಲಿಸಬೇಕು. ನಮ್ಮ ತನಿಖೆಗೆ ಸಹಕರಿಸದಿದ್ದರೆ ನಿಮ್ಮನ್ನು ಅರೆಸ್ಟ್ ಮಾಡುವುದಾಗಿ ಬೆದರಿಸಿದ್ದಾನೆ.

ಮುಂಬೈ ಪೊಲೀಸರೇ ಇರಬಹುದೆಂದು ನಂಬಿದ ಮಹಿಳೆ, ಮೊದಲು ತಮ್ಮ ಖಾತೆಯಿಂದ 99,999 ರೂ.ಗಳನ್ನು ವಂಚಕರು ತಿಳಿಸಿದ ಖಾತೆಗೆ ವರ್ಗಾವಣೆ ಮಾಡಿದ್ದಾರೆ. ಬಳಿಕ ನಿಮ್ಮ ಬ್ಯಾಲೆನ್ಸ್ ಶೀಟ್‌ನ ಸ್ಕ್ರೀನ್ ಶಾಟ್ ಕಳುಹಿಸಿ ಎಂದು ತಿಳಿಸಿದ್ದಾರೆ. ಸ್ಕ್ರೀನ್ ಶಾಟ್ ಕಳುಹಿಸಿದಾಗ ನಿಮ್ಮ ಖಾತೆಯಲ್ಲಿರುವ ಎಲ್ಲಾ ಹಣದ ಆರ್‌ಟಿಜಿಎಸ್ ಟ್ರ್ಯಾಕ್ ಮಾಡಬೇಕಿದೆ ಎಂದಿದ್ದಾನೆ. ಇದನ್ನೂ ನಂಬಿದ ಮಹಿಳೆ, ಮತ್ತೆ 4.50 ಲಕ್ಷ ರೂ. ವರ್ಗಾಯಿಸಿದ್ದಾರೆ.

ಇಷ್ಟಕ್ಕೇ ಬಿಡದ ವಂಚಕರು ಡಿಜಿಟಲ್ ಅರೆಸ್ಟ್ ಮಾಡುತ್ತಿದ್ದೇವೆ ಎಂದು ಬೆದರಿಸಿ, ನಿಮ್ಮ ಪತಿಯ ಖಾತೆಯಲ್ಲಿರುವ ಹಣವನ್ನೂ ಪರಿಶೀಲಿಸಬೇಕೆಂದು ಹೇಳಿದ್ದಾರೆ. ಮತ್ತಷ್ಟು ಹೆದರಿದ ಮಹಿಳೆ, ತಮ್ಮ ಪತಿಯ ಖಾತೆಯಿಂದ 22 ಲಕ್ಷ ರೂ. ಹಣವನ್ನು ವಂಚಕರು ತಿಳಿಸಿದ ಖಾತೆಗೆ ವರ್ಗಾಯಿಸಿದ್ದಾರೆ. ಕಡೆಗೆ ಪಿಎಫ್ ಹಣವನ್ನೂ ವರ್ಗಾವಣೆ ಮಾಡುವಂತೆ ಸೂಚಿಸಿದಾಗ ಅವರು ಪೊಲೀಸರಲ್ಲ, ವಂಚಕರೆಂಬುದು ಗೊತ್ತಾಗಿದೆ. ವಂಚಕರ ಬಲೆಗೆ ಬಿದ್ದು, ಹಣ ಕಳೆದುಕೊಂಡ ಬಗ್ಗೆ ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.


ನಿಧನ

ಆದರ್ಶ್ ಅಜಯ್ ಕುಮಾರ್



ಮೈಸೂರು, ಸೆ. 5– ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆ ಅಧ್ಯಕ್ಷರು ಮತ್ತು ಹೆಚ್‌ಸಿಜಿ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಬಿ.ಎಸ್. ಅಜಯ್ ಕುಮಾರ್ ಅವರ ಪುತ್ರ ಆದರ್ಶ್ ಅಜಯ್ ಕುಮಾರ್ (35) ಶುಕ್ರವಾರ ಬೆಂಗಳೂರಿನಲ್ಲಿ ನಿಧನರಾದರು. ನಜರ್‌ಬಾದ್ ನಿವಾಸಿಯಾದ ಇವರು, ತಂದೆ–ತಾಯಿ, ಅಜ್ಜಿ, ಸಹೋದರಿಯರು, ಬಾವ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕೆ.ಆರ್.ಎಸ್. ಹಿನ್ನೀರಿನ ಸಮೀಪದಲ್ಲಿರುವ ಕುಟುಂಬದ ತೋಟದಲ್ಲಿ ಶನಿವಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೊದಲನೇ ವರ್ಷದ ಪುಣ್ಯಸ್ಮರಣೆ



ಎನ್.ಎ. ಅಂತೋಣಿ ಫಿಲೋಮಿನ್ ರಾಜ್

ಜನನ: 14.12.1955 — ನಿಧನ : 6.9.2024

ದುಃಖಿತರು: ಪತ್ನಿ, ಮಕ್ಕಳು ಮತ್ತು ಕುಟುಂಬವರ್ಗ

ಎನ್.ಆರ್. ಮೊಹಲ್ಲಾ, ಮೈಸೂರು–570007

ವಿಶೇಷ ವಧು–ವರರ ಸಮಾವೇಶ

ಮೈಸೂರು, ಸೆ.5–ಜೆಎಸ್‌ಎಸ್ ವಿವಾಹ ವೇದಿಕೆ ಆಶ್ರಯದಲ್ಲಿ ಇದೇ ಮೊದಲ ಬಾರಿಗೆ ವಿಧುರ/ವಿಧವೆ ಹಾಗೂ ವಿಚ್ಛೇದಿತ ವಧು–ವರರ ಸಮಾವೇಶವನ್ನು ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದ ಸಭಾಂಗಣದಲ್ಲಿ ಸೆ.14ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಏರ್ಪಡಿಸಲಾಗಿದೆ. ಮಾಹಿತಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿರುವ ವಿವಾಹ ವೇದಿಕೆ ಕಚೇರಿಯಲ್ಲಿ ಅಥವಾ 8310121328, 0821-2430322, ಸಂಪರ್ಕಿಸಬಹುದು.

ಮೈಸೂರು ದಸರಾ ಮಹೋತ್ಸವ–2025

ಕುಶಾಲ ತೋಪು ಸಿಡಿಸುವ ಫಿರಂಗಿಗಳಿಗೆ ಪೂಜೆ; ಸುರಕ್ಷಿತ ಪ್ರಯೋಗಕ್ಕೆ ಸಿಬ್ಬಂದಿಗೆ ತರಬೇತಿಗೂ ಚಾಲನೆ

ಮೈಸೂರು, ಸೆ.5(ಎಂಟಿವೈ)– ದಸರಾ ಮಹೋತ್ಸವದ ಅತ್ಯಂತ ಆಕರ್ಷಣೀಯ ಪ್ರಮುಖ ಕಾರ್ಯಕ್ರಮಗಳಾದ ಜಂಬೂಸವಾರಿ ಹಾಗೂ ಪಂಜಿನ ಕವಾಯತು ವೇಳೆ 21 ಕುಶಾಲ ತೋಪು ಸಿಡಿಸಲು ಬಳಸುವ 7 ಫಿರಂಗಿಗಳಿಗೆ ಶುಕ್ರವಾರ ಸಾಂಪ್ರದಾಯಿಕ ಪೂಜೆ ಸಲ್ಲಿಸಿ, ಫಿರಂಗಿ ದಳಕ್ಕೆ ತರಬೇತಿ ನೀಡುವ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು.

ಮೈಸೂರು ಅರಮನೆಯ ಆನೆ ಬಾಗಿಲು ಬಳಿ ನಿಲ್ಲಿಸಲಾಗಿದ್ದ, 7 ಫಿರಂಗಿಗಳನ್ನು ಶುಕ್ರವಾರ ಬೆಳಗ್ಗೆ ತೊಳೆದು, ಅದಕ್ಕೆ ಅರ್ಚಕ ಎಸ್.ವಿ.ಪ್ರಹ್ಲಾದರಾವ್ ನೇತೃತ್ವದಲ್ಲಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಮೂಲಕ ಪೂಜೆ ಸಲ್ಲಿಸಲಾಯಿತು. ಕುಶಾಲ ತೋಪು ಸಿಡಿಸಲು 7 ಫಿರಂಗಿಗಳನ್ನು ಮಾತ್ರ ಬಳಸಲಾಗುತ್ತಿದ್ದು, ನಾಳೆಯಿಂದ ಒಣ ತಾಲೀಮು ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಇಂದು ಬೆಳಗ್ಗೆ 11.30ರಿಂದ ಫಿರಂಗಿಗಳ ಮುಂದೆ ಚಾಮುಂಡೇಶ್ವರಿ ದೇವಿ ಫೋಟೋ ಇಟ್ಟು ಅಲಂಕಾರ ಮಾಡಿ, ವಿಜಯ ಗಣಪತಿ ಪೂಜೆ, ಷೋಡಶೋಪಚಾರ ಪೂಜೆ, ಆಯುಧ(ಫಿರಂಗಿ)ಗಳಿಗೆ ವಿಶೇಷ ಪೂಜೆ ನೆರವೇರಿಸಲಾಯಿತು. ಬಳಿಕ ಮೃತ್ಯುಂಜಯ ಪೂಜೆ ನಂತರ ಫಿರಂಗಿ ದಳದ ಸಿಬ್ಬಂದಿ ಸೇರಿದಂತೆ ಪೊಲೀಸ್ ಅಧಿಕಾರಿಗಳಿಂದ ಮೃತ್ಯುಂಜಯ ಮಂತ್ರ ಪಠಿಸಲಾಯಿತು. ಬೂದುಕುಂಬಳ ಕಾಯಿ ಒಡೆದು, ಎಲ್ಲಾ ಫಿರಂಗಿಗಳ ಗಾಡಿ ಚಕ್ರಗಳಿಗೆ ನಿಂಬೆಹಣ್ಣು ಇಟ್ಟು ಚಾಮುಂಡೇಶ್ವರಿ ಸ್ಮರಿಸಿ, ಚಲಿಸಲಾಯಿತು.

ಫಿರಂಗಿ ಪೂಜೆ ಬಳಿಕ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಮಾತನಾಡಿ, ಜಂಬೂಸವಾರಿ ಮೆರವಣಿಗೆಯಲ್ಲಿ ಆನೆ, ಕುದುರೆ ಪಾಲ್ಗೊಳ್ಳಲಿದ್ದು, ಜಂಬೂಸವಾರಿ ದಿನ ಅಂಬಾರಿಗೆ ಪುಷ್ಪಾರ್ಚನೆ ಹಾಗೂ ಪಂಜಿನ ಕವಾಯತು ವೇಳೆ 21 ಬಾರಿ ಕುಶಾಲ ತೋಪು ಸಿಡಿಸಲಾಗುತ್ತದೆ. ಆ ಶಬ್ದಕ್ಕೆ ಆನೆ, ಕುದುರೆ ಕದಲದಂತೆ ಸಜ್ಜುಗೊಳಿಸಲು 2–3 ಬಾರಿ ತಾಲೀಮು ನಡೆಸಲಾಗುತ್ತದೆ. ಅದರಂತೆ ಇಂದು 7 ಫಿರಂಗಿಗಳಿಗೆ ಪೂಜೆ ಸಲ್ಲಿಸಲಾಗಿದೆ. ನಗರ ಸಶಸ್ತ್ರ ಮೀಸಲು ಪಡೆಯ 35ಕ್ಕೂ ಹೆಚ್ಚು ಸಿಬ್ಬಂದಿಯನ್ನು ಫಿರಂಗಿ ದಳಕ್ಕೆ ನಿಯೋಜಿಸಲಾಗಿದೆ ಎಂದರು.

ಅರಮನೆ ಆವರಣದಲ್ಲಿ ಗಜಪಡೆ, ಅಶ್ವಪಡೆಯ ಮುಂದೆ ನಡೆಸುವ ಸಿಡಿಮದ್ದು ಸಿಡಿಸುವ ತಾಲೀಮಿನ ದಿನಾಂಕ ಮತ್ತು ಸ್ಥಳವನ್ನು ಇನ್ನು ನಿರ್ಧರಿಸಿಲ್ಲ. ಫಿರಂಗಿ ದಳದ ಸುರಕ್ಷತೆಯ ದೃಷ್ಟಿಯಿಂದ ಈ ಬಾರಿಯೂ ವಿಮೆ ಮಾಡಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಡಿಸಿಪಿ ಆರ್.ಎನ್. ಬಿಂದುಮಣಿ, ಸಿಎಆರ್ ಡಿಸಿಪಿ ಸಿದ್ದನಗೌಡ ವೈ.ಪಾಟೀಲ್, ಮೌಂಟೆಂಡ್ ಕಮಾಂಡೆಂಟ್ ಎ.ಮಾರುತಿ, ಡಿಸಿಎಫ್ ಡಾ.ಐ.ಬಿ. ಪ್ರಭುಗೌಡ, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಎಸಿಪಿ ಚಂದ್ರಶೇಖರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ಅರಮನೆ ಆವರಣದಲ್ಲಿ ಶುಕ್ರವಾರ ಕುಶಾಲತೋಪು ಸಿಡಿಸುವ ಫಿರಂಗಿಗಳಿಗೆ ಪೂಜೆ ಸಲ್ಲಿಸಲಾಯಿತು.



ಪೂಜೆ ಸಲ್ಲಿಸಿದ ಬಳಿಕ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿ ಬಿಂದುಮಣಿ, ಫಿರಂಗಿ ಗಾಡಿಯನ್ನು ಎಳೆಯುತ್ತಿರುವುದು.

ಫಿರಂಗಿ ಸಿಬ್ಬಂದಿಗೆ ಕಾಶಿಯಿಂದ ಸ್ಫಟಿಕ ಲಿಂಗ

ಫಿರಂಗಿ ಪೂಜೆ ವೇಳೆ ವಿಜಯ ಗಣಪತಿ ಪೂಜೆ, ಷೋಡಶೋಪಚಾರ ಪೂಜೆ, ಆಯುಧ(ಫಿರಂಗಿ)ಗಳಿಗೆ ವಿಶೇಷ ಪೂಜೆ ನೆರವೇರಿಸಿ, ಮೃತ್ಯುಂಜಯ ಸ್ಮರಣೆ ಮಾಡಲಾಗಿದೆ. ಆ ಮೂಲಕ ಸಿಡಿಮದ್ದು ಸಿಡಿಸುವ ಕಾರ್ಯ ಸುಲಲಿತವಾಗಿ ನಡೆಯಲೆಂದು ಪ್ರಾರ್ಥಿಸಲಾಗಿದೆ. ಎಲ್ಲಾ ಸಿಬ್ಬಂದಿ ಮೃತ್ಯುಂಜಯ ಮಂತ್ರ ಜಪಿಸಿದರು. ಕಾಶಿಯಿಂದ ತಂದಿದ್ದ ಸ್ಫಟಿಕ ಲಿಂಗವನ್ನು ಅವರಿಗೆ ನೀಡಲಾಗಿದೆ.

- ಎಸ್.ವಿ.ಪ್ರಹ್ಲಾದರಾವ್, ಅರ್ಚಕ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

06.09.2025 ಶನಿವಾರ, ಮಳೆ ನಕ್ಷತ್ರ: ಪುಬ್ಬ 31.08.2025 ರಿಂದ 13.09.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಯಕೃತ್ತಿನ ಸಮಸ್ಯೆಗಳು ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯೂನಿವರ್ಸಿಟಿ, ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್** : ವಿಟಿಯು ಅಂತರ ಕಾಲೇಜು ಪುರುಷರ ಮತ್ತು ಮಹಿಳೆಯರ ಮೈಸೂರು ವಿಭಾಗದ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್, ಉದ್ಘಾಟನೆ : ಎನ್‌ಐಇ ನಿವೃತ್ತ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಹೆಚ್.ಎನ್. ಶಂಕರನಾರಾಯಣ, ಅಧ್ಯಕ್ಷತೆ : ಎನ್‌ಐಇ ಪ್ರಿನ್ಸಿಪಾಲ್ ಡಾ. ರೋಹಿಣಿ ನಾಗಪದ್ಮ, ಉಪಸ್ಥಿತರು : ಉಪ ಪ್ರಿನ್ಸಿಪಾಲ್ ಡಾ. ಕೆ.ಸಿ. ಮಂಜುನಾಥ್, ಸ್ಥಳ: ಎನ್‌ಐಇ ಡೈಮಂಡ್ ಜ್ಯೂಬಿಲಿ ಇಂಡೋರ್ ಕ್ರೀಡಾಂಗಣ, ಮಾನಂದವಾಡಿ ರಸ್ತೆ, ಬೆಳಗ್ಗೆ 9.30 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಕಣ್ಣಿನ ಸೋಂಕು ಮತ್ತು ಕಣ್ಣಿನಲ್ಲಿ ಮಾಂಸ ಬೆಳವಣಿಗೆ ಶಿಬಿರ– ಕಣ್ಣು ಕೆಂಪಾಗುವುದು, ಕಣ್ಣಿನಲ್ಲಿ ಏನೋ ಇರುವ ಅನುಭವ, ಕಣ್ಣಿನಿಂದ ಸೋರುವುದು, ಕಣ್ಣು ತುರಿಸುವುದು, ಶುಷ್ಕ ನೇತ್ರ, ಆಭರಣ ಮತ್ತು ಸೌಂದರ್ಯ ವರ್ಧಕಗಳಿಂದ ಆಗಿರುವ ಚರ್ಮದ ಅಲರ್ಜಿ ಮತ್ತು ಚರ್ಮಕ್ಕೆ ಸಂಬಂಧಪಟ್ಟ ಕಾಯಿಲೆಗೆ ಚಿಕಿತ್ಸೆ, ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ರಾಮಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಗೋಲ್ಡನ್ ಕ್ರೇಪರ್ ಸಂಸ್ಥೆ :** ವಿನೂತನ ಆಭರಣಗಳ ಪ್ರದರ್ಶನ ಮತ್ತು ಮಾರಾಟದ ಜ್ಯುವೆಲರಿ ಶೋ, ಸ್ಥಳ: ರ್‍ಯಾಡಿಸನ್ ಬ್ಲೂ ಹೋಟೆಲ್, ಬೆಳಗ್ಗೆ 10 ರಿಂದ.

■ **ಕರ್ನಾಟಕ ಏಕೀಕರಣ ಟ್ರಸ್ಟ್ :** ಕರ್ನಾಟಕ ಏಕೀಕರಣ ಹೋರಾಟಗಾರರ ಉಪನ್ಯಾಸ ಮಾಲೆ, ಕರ್ನಾಟಕ ಏಕೀಕರಣ ಹೋರಾಟದಲ್ಲಿ ಪಾಟೀಲ್ ಪುಟ್ಟಪ್ಪ ಅವರ ಪಾತ್ರ, ಉಪನ್ಯಾಸ : ಸಾಹಿತಿ ನಾ. ದಿವಾಕರ, ಮುಖ್ಯ ಅತಿಥಿಗಳು : ನೃಪತುಂಗ ವಿದ್ಯಾಸಂಸ್ಥೆ ಕಾರ್ಯದರ್ಶಿ ಹೆಚ್.ಜಿ. ಕೃಷ್ಣಪ್ಪ, ಕಾರ್ಯದರ್ಶಿ ಶ್ರೀಮತಿ ಸವಿತಾ ಪ. ಮಲ್ಲೇಶ್, ಅಧ್ಯಕ್ಷತೆ : ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷೆ ಡಾ. ಸುಜಾತ ಅಕ್ಕಿ, ಸ್ಥಳ: ನೃಪತುಂಗ ಶಾಲೆ, ರಾಮಕೃಷ್ಣನಗರ, ಬೆಳಗ್ಗೆ 10.30 ರಿಂದ.

■ **ಶಾಲಾ ಶಿಕ್ಷಣ ಇಲಾಖೆ :** ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನಾಚರಣೆಯ ಅಂಗವಾಗಿ ನಿವೃತ್ತ ಶಿಕ್ಷಕರಿಗೆ ಸನ್ಮಾನ ಹಾಗೂ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕಾರ ಸಮಾರಂಭ, ಉಪಸ್ಥಿತರು : ಮುಖ್ಯಮಂತ್ರಿ ಸಿದ್ದರಾಮಯ್ಯ, ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ ಮಹದೇವಪ್ಪ, ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಅತಿಥಿಗಳು : ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ರವಿಶಂಕರ್ ಡಿ., ಟಿ.ಎಸ್. ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಸ್ಥಳ: ಕಲಾಮಂದಿರ, ಬೆಳಗ್ಗೆ 10ಕ್ಕೆ.

■ **ಕನ್ನಡಾಂಬೆ ರಕ್ಷಣಾ ವೇದಿಕೆ :** ಶಿಕ್ಷಕರ ದಿನಾಚರಣೆ ಅಂಗವಾಗಿ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ, ಉದ್ಘಾಟನೆ : ಕವಿ ಡಾ. ಜಯಪ್ಪ ಹೊನ್ನಾಳಿ, ಅಧ್ಯಕ್ಷತೆ : ಕಾಂಗ್ರೆಸ್ ಮುಖಂಡ ಎಂ. ಸ್ವಾಮಿ, ಪ್ರಶಸ್ತಿ ಪ್ರದಾನ ಮಾಡುವವರು : ಯೋಗ ನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಎನ್. ಶ್ರೀನಿವಾಸನ್, ಪ್ರಾಸ್ತಾವಿಕ ನುಡಿ : ವೇದಿಕೆ ರಾಜ್ಯಾಧ್ಯಕ್ಷ ರಾಜಶೇಖರ್, ಮುಖ್ಯ ಅತಿಥಿಗಳು : ಶ್ರೀಮತಿ ಎಂ. ಪ್ರಭ, ಭೈರೇಗೌಡ, ಸ್ಥಳ: ಕರ್ನಾಟಕ ಪಬ್ಲಿಕ್ ಶಾಲೆ, ಇಲವಾಲ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ** : ಶಿಕ್ಷಕರ ದಿನಾಚರಣೆ, ಮುಖ್ಯ ಅತಿಥಿಗಳು : ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವಿಶ್ರಾಂತ ಮಕ್ಕಳ ಹೃದಯಶಾಸ್ತ್ರ ಪ್ರಾಧ್ಯಾಪಕರಾದ ಡಾ. ವಿಜಯಲಕ್ಷ್ಮಿ ಈಶ್ವರಪ್ಪ ಬಾಳೇಕುಂದ್ರಿ, ಸ್ಥಳ: ವಿಜ್ಞಾನ ಭವನ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ :** ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಹೆಚ್.ವಿ. ರಾಜೀವ್, ಸ್ಥಳ: ಸಹಕಾರ ಭವನ, ಚಾಮರಾಜ ಜೋಡಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ಸಂಘದ ಕಾರ್ಯಕಾರಿ ಸಮಿತಿ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ. ದೀಪಕ್, ಸ್ಥಳ: ಸಂಘದ ಆವರಣ, ಬೆಳಗ್ಗೆ 11ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಸಂಸ್ಕೃತಿ ಬುಕ್ ಏಜೆನ್ಸೀಸ್ :** ರಾಷ್ಟ್ರೀಯ ಒಂದು ಪುಸ್ತಕ ಓದು ದಿನ ಆಚರಣೆ ಅಂಗವಾಗಿ ಪುಸ್ತಕ ಪ್ರದರ್ಶನ ಮತ್ತು ಮಾರಾಟ, ಉದ್ಘಾಟನೆ : ಸಾಹಿತಿ ಡಾ.ಬಿ.ಎಸ್. ಪ್ರಣತಾರ್ತಿಹರನ್, ಡಾ. ಎಂ.ಎಸ್. ವಿಜಯಾಹರನ್, ಮುಖ್ಯ ಅತಿಥಿಗಳು : ಡಾ. ವಿ. ಲಕ್ಷ್ಮೀನಾರಾಯಣ, ಸಂಸ್ಕೃತಿ ಸುಬ್ರಹ್ಮಣ್ಯ, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ, ಬೆಳಗ್ಗೆ 11ಕ್ಕೆ.

■ **ದಸರಾ ಲಲಿತಕಲೆ ಮತ್ತು ಕರಕುಶಲ ಕಲೆ ಉಪಸಮಿತಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು :** ಟೆರಾಕೋಟಾ ಭಿತ್ತಿ ಶಿಲ್ಪಕಲಾ ಶಿಬಿರ, ಸ್ಥಳ: ಕಾವಾ ಕಾಲೇಜು ಆವರಣ, ಬೆಳಗ್ಗೆ 11.30 ರಿಂದ.

■ **ಶಾರದಾ ವಿಲಾಸ ಕಾಲೇಜು :** ವಾರ್ಷಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಶಾರದೆ ವಾರ್ಷಿಕ ಸಂಚಿಕೆ ಬಿಡುಗಡೆ, ಶಿಕ್ಷಕರ ದಿನಾಚರಣೆ – ಗುರುವಂದನೆ, ಉದ್ಘಾಟನೆ : ಮೈಸೂರು ವಿವಿ ಜೆನೆಟಿಕ್ಸ್ ವಿಭಾಗದ ಮುಖ್ಯಸ್ಥರಾದ ಪ್ರೊ. ಸುತ್ತೂರು ಎಸ್. ಮಾಲಿನಿ, ಮುಖ್ಯ ಅತಿಥಿಗಳು : ದಿವ್ಯದೀಪ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಎಂ.ಆರ್. ಅನಂತಕುಮಾರ್, ಉಪಸ್ಥಿತರು : ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಆರ್. ನರಸಿಂಹ, ಅಧ್ಯಕ್ಷತೆ : ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೀವಿಕಾ, ಸ್ಥಳ: ಶಾರದಾ ವಿಲಾಸ ಕಾಲೇಜು ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಮಧ್ಯಾಹ್ನ 12ಕ್ಕೆ.

■ **ದೀಪಾ ಶಿಕ್ಷಣ ಮತ್ತು ಸೇವಾ ಟ್ರಸ್ಟ್ :** ಶಿಕ್ಷಕರ ದಿನಾಚರಣೆ, ಮುಖ್ಯ ಅತಿಥಿಗಳು : ಪ್ರೊ. ಚಿದಾನಂದ ಪರಸಪ್ಪ ಸಿದ್ಧಾಶ್ರಮ, ಉದ್ಘಾಟನೆ : ಕೆ.ಎಂ. ಮುನಿಗೋಪಾಲ ರಾಜ್, ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷ ಎಂ. ರಾಮಪ್ಪ, ಸ್ಥಳ: ವಿವೇಕಾನಂದ ಸಭಾಂಗಣ, ಮಧ್ಯಾಹ್ನ 12ಕ್ಕೆ.

■ **ವಿದ್ಯಾವರ್ಧಕ ಪದವಿಪೂರ್ವ ಕಾಲೇಜು :** ಶಿಕ್ಷಕರ ದಿನಾಚರಣೆ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಮಿಟಿ ಸದಸ್ಯ ಎಸ್. ಶಿವಲಿಂಗಯ್ಯ, ಸ್ಥಳ: ಕಾಲೇಜು ಆವರಣ, ಮಧ್ಯಾಹ್ನ 3.30ಕ್ಕೆ.

■ **ಅದಮ್ಯ ರಂಗಶಾಲೆ :** ಕರ್ನಾಟಕ ರತ್ನ ನಾಡೋಜ ಡಾ. ದೇಜಗೌ ಸಂಸ್ಮರಣೆ, ಕುವೆಂಪು ಶಿಕ್ಷಣ ಚೇತನ ಪ್ರಶಸ್ತಿ ಪ್ರದಾನ, ಉದ್ಘಾಟನೆ : ಸಾಹಿತಿ ಪ್ರೊ. ಎಂ.ಎಸ್. ಶೇಖರ್, ಅಧ್ಯಕ್ಷತೆ : ಸಾಹಿತಿ ಡಾ. ಡಿ.ಕೆ. ರಾಜೇಂದ್ರ, ಆಶಯ ನುಡಿ : ಸಾಹಿತಿ ಟಿ. ಸತೀಶ್ ಜವರೇಗೌಡ, ಪ್ರಶಸ್ತಿ ಪ್ರದಾನ : ಅಪರ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು, ದೇಜಗೌ ಕುರಿತು : ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ, ಮುಖ್ಯ ಅತಿಥಿಗಳು : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ, ಸಂಜೆ 4ಕ್ಕೆ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 896, ಕಥೆ ಹೇಳುವವರು: ನಟರಾಜು ಕೆ ಆರ್, ನಿವೃತ್ತ ಮುಖ್ಯೋಪಾಧ್ಯಾಯರು, ಕೀಳನಪುರ ಸರ್ಕಾರಿ ಪ್ರೌಢಶಾಲೆ, ಮೈಸೂರು ತಾಲೂಕು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ

■ **ವ್ಯವಸ್ಥಾಪಕರು :** ವಿ. ಜಾರ್ಜ್ ಪ್ರಭಾಕರ್ ಆರ್ಕೆಸ್ಟ್ರಾ ಮತ್ತು ಗಜಲ್ ಪಾರ್ಟಿ, ಏಕ್‌ಶಾಮ್ ಮ್ಯೂಸಿಕ್ ಕೆ ನಾಮ್ ವಾರ್ಷಿಕೋತ್ಸವ ಸಂಭ್ರಮ, ಹಳೆಯ ಕನ್ನಡ ಮತ್ತು ಹಿಂದಿ ಚಲನಚಿತ್ರಗಳ ಹಿಟ್ ಹಾಡುಗಳು, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5.30ಕ್ಕೆ.

■ **ಮಿತ್ರ ಸಿಂಧು ವೃಂದ :** ಕನ್ನಡ ಹಳೆಯ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್ :** 64ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30 ರಿಂದ ಗಮಕ ವಾಚನ ಕಾರ್ಯಕ್ರಮ, ಕಾವ್ಯ : ಆದಿಪುರಾಣ – ಭರತ ಬಾಹುಬಲಿ ಯುದ್ಧ ಪ್ರಸಂಗ, ವಾಚನ : ವಿದುಷಿ ತನುಶ್ರೀ, ವ್ಯಾಖ್ಯಾನ ವಿದುಷಿ ಡಾ. ಸಂಧ್ಯಾ ಎನ್. ದೀಪಕ್, ಸಂಜೆ 6.45 ರಿಂದ ವಿದ್ವಾನ್ ಸುನೀಲ್ ಗಾರ್ಗ್ಯಾನ್ ಅವರಿಂದ ಗಾಯನ, ವಿದ್ವಾನ್ ರಾಘುಲ್–ಪಿಟೀಲು, ವಿದ್ವಾನ್ ಉಮಾಯಾಳಪುರಂ ಕೆ. ಶಿವರಾಮನ್–ಮೃದಂಗ, ವಿದ್ವಾನ್ ಬಿ.ಎಸ್. ಪುರುಷೋತ್ತಮ್–ಖಂಜಿರ, ಸ್ಥಳ: 8ನೇ ಕ್ರಾಸ್, ವಿವಿ ಮೊಹಲ್ಲಾ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಲಿವಿಂಗ್ ಅಟ್ ದಿ ಸೋರ್ಸ್ ಯೋಗಾ ಟೀಚಿಂಗ್ಸ್ ಆಫ್ ವಿವೇಕಾನಂದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ :** ರಂಗಭೂಮಿ ಮತ್ತು ಜನಪದ ಕಲಾಪ್ರಕಾರಗಳ ಉಚಿತ ತರಬೇತಿ ಶಿಬಿರದ ಸಮಾರೋಪ ಸಮಾರಂಭ, ಉದ್ಘಾಟನೆ : ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಮುಖ್ಯ ಅತಿಥಿಗಳು : ಮಾಜಿ ಮೇಯರ್ ಪುರುಷೋತ್ತಮ್, ಅಹಿಂದ ಚಿಕ್ಕಜವರಪ್ಪ, ಎಂ.ಸಿ. ಶಿವಪ್ರಸಾದ್, ಕೃಷ್ಣಮೂರ್ತಿ ತಲಕಾಡು, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ ಆವರಣ, ಸಂಜೆ 6ಕ್ಕೆ

■ **ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ :** ಪ್ರತಿ ಹುಣ್ಣಿಮೆಯಂದು ನಡೆಯಲಿರುವ ಉಪನ್ಯಾಸ ಕಾರ್ಯಕ್ರಮ ತಿಂಗಳ ತಿಳಿವು, ಸಂಚಿಕೆ–19, ದಿವ್ಯ ಆಶೀರ್ವಾದ : ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ತಿಂಗಳ ಅತಿಥಿ : ಜಾನಪದ ವಿದ್ವಾಂಸ ಡಾ. ಅಮ್ಮ ರಾಮಚಂದ್ರಜೀ, ವಿಷಯ : ಜಾನಪದ ಸಾಹಿತ್ಯ ಮತ್ತು ಜಾನಪದ ಸಂಗೀತ ಹಾಡುಗಾರಿಕೆ ಮತ್ತು ಉಪನ್ಯಾಸ, ಉಪಸ್ಥಿತರು : ಮಾಜಿ ಎಂಎಲ್‌ಸಿ ಡಿ. ಮಾದೇಗೌಡ, ಡಾ. ಎಸ್.ಪಿ. ಯೋಗಣ್ಣ, ಬಸವಣ್ಣ, ಕೆ. ಕೆಂಪಲಿಂಗರಾಜು, ಪ್ರೊ. ಜಿ. ಚಂದ್ರಶೇಖರ್, ಎಸ್. ಪುರುಷೋತ್ತಮ್, ಸ್ಥಳ: ಪರಮಹಂಸ ಧ್ಯಾನ ಕೇಂದ್ರ, ರಾಮಕೃಷ್ಣ ವೃತ್ತದ ನೆಲಮಹಡಿ, ಸಂಜೆ 6 ರಿಂದ.

■ **ದೀಕ್ಷಿತ್ ಆರೋಗ್ಯ ಧಾಮ :** ಆನಂದ ಆರೋಗ್ಯ ಚಿತ್ತಾ ಹುಣ್ಣಿಮೆ ವಿಶೇಷ ಮಾಸದ ಕಾರ್ಯಕ್ರಮ, ಡಾ. ಡಿ.ಆರ್. ಕಿರಣ್ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಬೆಂಗಳೂರು ಎಸ್. ಮಧುಸೂದನ್ –ವಯೋಲಿನ್, ವಿದ್ವಾನ್ ಹರಿಕುಮಾರ್–ಮೃದಂಗ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ, ಸಂಜೆ 6ಕ್ಕೆ.

■ **ವ್ಯವಸ್ಥಾಪಕರು :** ಸಂಗೀತ ಕಾರ್ಯಕ್ರಮ, ವಿದುಷಿ ವೈಷ್ಣವಿ ಕಲಂಭಟ್ಟಿ ಪ್ರಶಾಂತ್ ಅವರಿಂದ ಗಾಯನ, ವಿದ್ವಾನ್ ಅರ್ಜುನ್ ದಿನಕರ್ –ವಯೋಲಿನ್, ವಿದುಷಿ ಪೃಥ್ವಿ ಕೃಷ್ಣ – ಮೃದಂಗ, ಸ್ಥಳ: ಮೈಸೂರು ವಾಸುದೇವಾಚಾರ್ಯ ಭವನ, ಅಗ್ರಹಾರ, ಸಂಜೆ 6ಕ್ಕೆ.

■ **ನಾದವಿದ್ಯಾ ಅಕಾಡೆಮಿ ಆಫ್ ಮ್ಯೂಸಿಕ್ ಅಂಡ್ ಡ್ಯಾನ್ಸ್, ಹೆಬ್ಬಾಳು :** ಅಕಾಡೆಮಿ ವಿದ್ಯಾರ್ಥಿಗಳಿಂದ ನಾದೋಪಸನ ಸಂಗೀತ ಸಂಭ್ರಮ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸ್ಥಳ: ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿ ಮಠ :** ಚಾತುರ್ಮಾಸ್ಯ ಕಾರ್ಯಕ್ರಮ, ವಿದುಷಿ ಭಾರ್ಗವಿ ವಿನೋದ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಶುಭಾಂಗ್ ಬಿ.ಎಸ್.–ಮೃದಂಗ, ವಿದುಷಿ ಪ್ರೇರಣಾ ಪ್ರವೀಣ್–ಪಿಟೀಲು, ಸ್ಥಳ: ಪರಕಾಲ ಮಠ, ಜಗನ್ಮೋಹನ ಅರಮನೆ ಸಮೀಪ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ತತ್ವ ದರ್ಪಣ ಕೊರಡು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ: ಪ್ರೊ.ವಿ.ಎನ್.ಶೇಷಗಿರಿರಾವ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರೀ ಹಾಗೂ ಕೆ. ಟಿ. ಉದಯ ಕಿರಣ್, ವ್ಯಾಖ್ಯಾನ–ಡಾ. ಹೆಚ್. ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ–ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು –ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಪಂಪನ ಪೆಂಪು–ಪಂಪ ಭಾರತದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ–ಜಿ. ಶಾಂತಕುಮಾರ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ. ಜಿ. ಶ್ರೀಧರ್ ಮತ್ತು ಸಂಗಡಿಗರಿಂದ – ನಾದಸ್ವರ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿಹಾಡು, 3.30 ಮಕ್ಕಳ ಮಂಟಪ, 4.00 ನಾಟಕ–ಹಳೆಬೇರು, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ–ಜೇನು ಸಾಕಾಣಿಕೆ ಕುರಿತು ಸಂವಾದ, ಭಾಗವಹಿಸುತ್ತಾರೆ–ಮಂಡ್ಯ ತಾಲೂಕು ಮಾರಗೌಡನಹಳ್ಳಿಯ ಕೃಷಿಕ ದಂಪತಿ ಎಂ. ಸಿ. ಕಾಂತರಾಜು ಮತ್ತು ಹೆಚ್. ಬಿ. ಸುಧಾ, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಕೃಷ್ಣ ಪವನ್‌ಕುಮಾರ್ – ಹಾಡುಗಾರಿಕೆ

ಮಹೇಂದ್ರನಿಗೆ ಭಾರ ಹೊರುವ ತಾಲೀಮು



ದಸರಾ ಗಜಪಡೆಯ ಮಹೇಂದ್ರನಿಗೆ ಶುಕ್ರವಾರ ಭಾರ ಹೊರಿಸುವ ತಾಲೀಮು ಯಶಸ್ವಿಯಾಗಿ ನಡೆಯಿತು.

ಮೈಸೂರು, ಸೆ.5(ಎಂಟಿವೈ)– ದಸರಾ ಗಜಪಡೆಯನ್ನು ಜಂಬೂಸವಾರಿಗೆ ಸಜ್ಜುಗೊಳಿಸುವ ಪ್ರಕ್ರಿಯೆ ಮುಂದುವರೆದಿದೆ. ಶುಕ್ರವಾರ ಮಹೇಂದ್ರ ಆನೆಗೆ ಭಾರ ಹೊರಿಸುವ ತಾಲೀಮು ನಡೆಸಲಾಯಿತು.

ದಸರಾ ಗಜಪಡೆಯ ನಾಯಕ ಅಭಿಮನ್ಯುವಿನೊಂದಿಗೆ ಇನ್ನೆರಡು ಪರ್ಯಾಯ ಆನೆಗಳಿಗೆ ಭಾರ ಹೊರುವ ತರಬೇತಿ ನೀಡುವ ಅನಿವಾರ್ಯತೆಯಿದ್ದು, ಈ ಹಿನ್ನೆಲೆಯಲ್ಲಿ ಇಂದು ಮಹೇಂದ್ರನಿಗೆ ಮರಳು ಮೂಟೆ ಹೊರಿಸಿ ಭಾರ ಹೊರುವ ತಾಲೀಮು ನಡೆಸಲಾಯಿತು.

ಅರಮನೆ ಆವರಣದಲ್ಲಿರುವ ಕೋಡಿ ಸೋಮೇಶ್ವರ ದೇವಾಲಯದ ಮುಂಭಾಗ ಇಂದು ಬೆಳಗ್ಗೆ ಮಹೇಂದ್ರ ಆನೆಗೆ ಗಾದಿ, ನಮ್ದಾ ಹಾಗೂ ತೊಟ್ಟಿಲು ಕಟ್ಟಿ 300 ಕೆಜಿ ತೂಕದ ಮರಳು ಮೂಟೆ ಇಟ್ಟು ತಾಲೀಮಿಗೆ ಕರೆದೊಯ್ಯಲಾಯಿತು. ಒಟ್ಟು 500 ಕೆಜಿ ಭಾರ ಹೊತ್ತು ಬೆಳಗ್ಗೆ 7.30ಕ್ಕೆ ಅರಮನೆ ಆವರಣದಿಂದ ಹೊರಟ ಮಹೇಂದ್ರ, ಕುಮ್ಕಿ ಆನೆಗಳಾದ ಲಕ್ಷ್ಮೀ ಹಾಗೂ ಹೇಮಾವತಿಯೊಂದಿಗೆ ಕೆ.ಆರ್.ವೃತ್ತ, ಸಯ್ಯಾಜಿ ರಾವ್ ರಸ್ತೆ, ಸರ್ಕಾರಿ ಆಯುರ್ವೇದ ವೃತ್ತ, ಆರ್‌ಎಂಸಿ, ಬಂಬೂಬಜಾರ್, ಹೈವೇ ವೃತ್ತದಿಂದ ನೆಲ್ಸನ್ ಮಂಡೇಲಾ ರಸ್ತೆ ಮೂಲಕ ಬೆಳಗ್ಗೆ 9 ಗಂಟೆಗೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನ ತಲುಪಿತು.

5 ಕಿ.ಮಿ ಅಂತರವನ್ನು 500 ಕೆಜಿ ಬಾರ ಹೊತ್ತು 1.30 ಗಂಟೆಯಲ್ಲೇ ಸಾಗುವ ಮೂಲಕ ಮಹೇಂದ್ರ ಭರವಸೆ ಮೂಡಿಸಿದ್ದಾನೆ. ಪ್ರಸ್ತುತ ಗಜಪಡೆ ನಾಯಕ ಅಭಿಮನ್ಯುವಿನೊಂದಿಗೆ ಹಿರಿಯ ಆನೆ ಪ್ರಶಾಂತ ಹಾಗೂ ಮಹೇಂದ್ರ ಆನೆಗೂ ಭಾರ ಹೊರಿಸಿ ಸಜ್ಜುಗೊಳಿಸಲಾಗುತ್ತದೆ. ಪ್ರತಿದಿನ ಒಂದೊಂದು ಆನೆಗೆ ಭಾರ ಹೊರಿಸುವ ತಾಲೀಮು ನಡೆಸಲಾಗುತ್ತದೆ. ಸೆ.22ರಂದು ದಸರಾ ಮಹೋತ್ಸವ ಆರಂಭವಾಗಲಿದ್ದು, ಅಷ್ಟರೊಳಗೆ ಅಭಿಮನ್ಯು ಸೇರಿದಂತೆ ಪರ್ಯಾಯ ಆನೆಗಳಿಗೆ ಮರದ ಅಂಬಾರಿ ಹೊರಿಸಿ, ಜಂಬೂಸವಾರಿಗೆ ಸಜ್ಜುಗೊಳಿಸುವ ಸವಾಲು ಅರಣ್ಯ ಇಲಾಖೆ ಮುಂದೆ ಇದೆ. ಹಾಗಾಗಿ ಹಲವು ಆನೆಗಳಿಗೆ ಬಾರ ಹೊರಿಸುವ ತಾಲೀಮು ನಡೆಸಲಾಗುತ್ತಿದೆ.


ಬನ್ನಿಮಂಟಪದಲ್ಲಿ ವಿರಾಮ: ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಕ್ರೇನ್ ಸಹಾಯದಿಂದ ಮಹೇಂದ್ರನ ಮೇಲಿದ್ದ ಮರಳು ಮೂಟೆಯನ್ನು ಕೆಳಗಿಳಿಸಲಾಯಿತು. ನಂತರ ಎಲ್ಲಾ ಆನೆಗಳಿಗೂ ನೀರು ಕುಡಿಸಿ, ಕೆಲ ಕಾಲ ವಿಶ್ರಾಂತಿ ನೀಡಲಾಯಿತು. ಮಾವುತ, ಕಾವಾಡಿಗಳಿಗೆ ಉಪಹಾರ ನೀಡಲಾಯಿತು. ನಂತರ ಮತ್ತೆ ಬೆಳಗ್ಗೆ 10 ಗಂಟೆಗೆ ಆನೆಗಳನ್ನು ವಾಪಸ್ಸು ಅರಮನೆಯತ್ತ ಕರೆದೊಯ್ಯಲಾಯಿತು.

ಈ ಸಂದರ್ಭದಲ್ಲಿ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಆರ್‌ಎಫ್‌ಓ ನದೀಮ್, ಪಶುವೈದ್ಯ ಡಾ.ಆದರ್ಶ್, ಸಹಾಯಕರಾದ ರಂಗರಾಜು, ಅಕ್ರಮ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಗಜಪಡೆ ತಾಲೀಮು ಮಾರ್ಗದಲ್ಲಿ ವಾಹನ ಸಂಚಾರಕ್ಕೆ ನಿರ್ಬಂಧ



ಆ.28ರಂದು ವಾಹನಗಳ ನಡುವೆ ದಸರಾ ಗಜಪಡೆ ನಡೆ.



ವಾಹನ ಸಂಚಾರದ ಕಿರಿಕಿರಿ ಇಲ್ಲದೆ ನಿರಾಳವಾಗಿ ಸಾಗಿ ಬರುತ್ತಿರುವ ಗಜಪಡೆ.

ಮೈಸೂರು, ಸೆ.5(ಎಂಟಿವೈ)– ದಸರಾ ಗಜಪಡೆ ತಾಲೀಮಿನ ವೇಳೆ ಆ ಮಾರ್ಗದಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದ್ದು, ಆ ಮೂಲಕ ಆನೆಗಳ ಸುರಕ್ಷತೆಗೆ ಹೆಚ್ಚಿನ ಗಮನ ಹರಿಸಲಾಗುತ್ತಿದೆ.

ದಸರಾ ಗಜಪಡೆಯ ಎರಡನೇ ತಂಡ ಮೈಸೂರಿಗೆ ಆಗಮಿಸಿದ ಬಳಿಕ ಆ.28 ರಿಂದ ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ಗಜಪಡೆ ತಾಲೀಮು ನಡೆಯುತ್ತಿದೆ. ಈ ವೇಳೆ ಆನೆಯ ಹಿಂದೆ, ಮುಂದೆ ಹಾಗೂ ಪಕ್ಕದಲ್ಲೇ ವಾಹನ ಸವಾರರು ಸಂಚರಿಸುವ ಮೂಲಕ ಆನೆಗಳ ಸುರಕ್ಷಿತ ನಡಿಗೆಗೆ ಅಡ್ಡಿಪಡಿಸುತ್ತಿದ್ದರು. ಅಲ್ಲದೆ, ಆನೆಗಳ ಪಕ್ಕದಲ್ಲೇ ಬಂದು ಹಾರನ್ ಹೊಡೆಯುವ ಮೂಲಕ ಕೆಲವರು ಚೇಷ್ಟೆ ಮಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಆ.29ರ 'ಮೈಸೂರು ಮಿತ್ರ' ಸಂಚಿಕೆಯಲ್ಲಿ, ತಾಲೀಮು ವೇಳೆ ಆನೆಗಳ ಸುತ್ತಮುತ್ತ ವಾಹನಗಳಿರುವ ಚಿತ್ರ ಪ್ರಕಟವಾಗಿತ್ತು. ಆ.30ರ 'ಸ್ಟಾರ್ ಆಫ್ ಮೈಸೂರ್' ಸಂಚಿಕೆಯಲ್ಲಿ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾದ

ಸುರಕ್ಷತೆ ದೃಷ್ಟಿಯಿಂದ ಈ ಕ್ರಮ

ವಿಕ್ರಮ್ ಮುತ್ತಣ್ಣನವರು ತಮ್ಮ 'ಬ್ಲಾಕ್ ಅಂಡ್ ವೈಟ್' ಅಂಕಣದ ಲೇಖನದಲ್ಲಿ ದಸರಾ ಗಜಪಡೆ ತಾಲೀಮಿನ ವೇಳೆ ಟ್ರಾಫಿಕ್ ಕಿರಿಕಿರಿ ಬಗ್ಗೆ ಪ್ರಸ್ತಾಪಿಸಿದ್ದರು.

ಈ ನಡುವೆ ಗಜಪಡೆಗೆ ಬಾರ ಹೊರಿಸುವ ತಾಲೀಮು ಆರಂಭವಾಗಿರುವುದು ಹಾಗೂ ಬಾರ ಹೊತ್ತ ಆನೆಯ ಇಕ್ಕೆಲಗಳಲ್ಲಿ ಕುಮ್ಕಿ ಆನೆಗಳು ಸಾಗಬೇಕಾಗಿರುವುದರಿಂದ ಅವುಗಳು ಸಾಗುವ ಪಥದಲ್ಲಿ ವಾಹನ ಸಂಚಾರ ನಿರ್ಬಂಧಿಸಲು ಉದ್ದೇಶಿಸಲಾಗಿದೆ. ಅರಮನೆಯಿಂದ ಗಜಪಡೆ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣಕ್ಕೆ ಬರುತ್ತಿದ್ದಂತೆಯೇ ಚಾಮರಾಜ ವೃತ್ತದಿಂದ ಕೆ.ಆರ್.ವೃತ್ತದ ಕಡೆಗೆ ವಾಹನ ಸಂಚಾರ ನಿರ್ಬಂಧಿಸಲಾಗುತ್ತದೆ. ಅಲ್ಲದೆ, ಕೆ.ಆರ್. ವೃತ್ತದಿಂದ ಸಯ್ಯಾಜಿರಾವ್ ರಸ್ತೆ ಪ್ರವೇಶಿಸುತ್ತಿದ್ದಂತೆಯೇ ಚಿಕ್ಕಗಡಿಯಾರ ಮುಂಭಾಗದಿಂದ ಸರ್ಕಾರಿ ಆಯುರ್ವೇದ ವೃತ್ತದವರೆಗೆ ವಾಹನ ಸಂಚಾರ ಬಂದ್ ಮಾಡಲಾಗುತ್ತಿದೆ. ಸರ್ಕಾರಿ ಆಯುರ್ವೇದ ಕಾಲೇಜಿನಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೂ ಆನೆಗಳು ತೆರಳುವ ವೇಳೆ ಸೀಮಿತವಾಗಿ ವಾಹನ ಸಂಚಾರ ನಿಷೇಧಿಸಿ, ಗ್ರೀನ್ ಕಾರಿಡಾರ್ ನಿರ್ಮಿಸಲಾಗುತ್ತಿದೆ. ತಾಲೀಮು ಮುಗಿಸಿ ವಾಪಸ್ಸಾಗುವ ವೇಳೆಯೂ ವಾಹನ ಸಂಚಾರ ನಿರ್ಬಂಧಿಸಿ, ಆನೆಗಳ ಸುಗಮ ನಡಿಗೆಗೆ ವಿಶೇಷ ಗಮನ ಹರಿಸಲಾಗಿದೆ.

ಜನ ಸಾಮಾನ್ಯರು ನೆಮ್ಮದಿ–ಸಂಭ್ರಮದಿಂದ ದಸರಾ ವೀಕ್ಷಿಸಲು ಅವಕಾಶ ಮಾಡಿಕೊಡಿ

ಮೈಸೂರು ಜಿಲ್ಲಾಡಳಿತಕ್ಕೆ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮನವಿ

ಮೈಸೂರು, ಸೆ.5– ಪಾರಂಪರಿಕ ಹಾಗೂ ಐತಿಹಾಸಿಕ ಮೈಸೂರು ದಸರಾ ಮಹೋತ್ಸವದ ಅತ್ಯಾಕರ್ಷಕ ಜಂಬೂ ಸವಾರಿ ಮೆರವಣಿಗೆಯನ್ನು ಜನ ಸಾಮಾನ್ಯರು ನೆಮ್ಮದಿಯಾಗಿ ವೀಕ್ಷಿಸಲು ಜಿಲ್ಲಾಡಳಿತ ಸೂಕ್ತ ವ್ಯವಸ್ಥೆ ಕಲ್ಪಿಸಬೇಕೆಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಮನವಿ ಮಾಡಿದ್ದಾರೆ.



ವಿಜಯದಶಮಿಯಂದು ಅರಮನೆ ಆವರಣದಲ್ಲಿ ತಾಯಿ ಚಾಮುಂಡೇಶ್ವರಿ ಮೂರ್ತಿ ಹೊತ್ತ ಜಂಬೂ ಸವಾರಿ ಮೆರವಣಿಗೆಗೆ ಮುಖ್ಯಮಂತ್ರಿಗಳು ವೈಭವದ ಚಾಲನೆ ನೀಡುವರು. ಅಲ್ಲಿಯವರೆಗೆ ಶಿಸ್ತುಬದ್ಧ ಉಸ್ತುವಾರಿ ವಹಿಸುವ ಅಧಿಕಾರಿಗಳು, ಮೆರವಣಿಗೆ ಅರಮನೆ ಆವರಣದಿಂದ ಹೊರಬಂದ ನಂತರ ಉಂಟಾಗುವ ಅಶಿಸ್ತು ತಪ್ಪಿಸುವಲ್ಲಿ ನಿರ್ಲಕ್ಷ್ಯ ತೋರುತ್ತಾರೆ. ಈ ಬಗ್ಗೆ ದಸರಾ ವಿಶೇಷಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿಗಳು ಹೆಚ್ಚು ಗಮನ ವಹಿಸಬೇಕು.

ಅರಮನೆ ಆವರಣಕ್ಕಷ್ಟೇ ಸೀಮಿತಗೊಳಿಸದೆ ಬನ್ನಿಮಂಟಪ ತಲುಪುವವರೆಗೂ ಜಂಬೂ ಸವಾರಿ ಮೆರವಣಿಗೆ ಶಿಸ್ತುಬದ್ಧವಾಗಿ, ಸೂಕ್ತ ಭದ್ರತೆಯಲ್ಲಿ ನಡೆಯುವಂತೆ ನೋಡಿಕೊಳ್ಳಬೇಕು. ಜಂಬೂಸವಾರಿ ಸುತ್ತ ಸ್ವಯಂ ಸೇವಕರೂ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿ ಅಶಿಸ್ತು ಮೂಡಿಸುವುದನ್ನು ತಪ್ಪಿಸಬೇಕು. ಅಂಬಾರಿ ಹೊತ್ತು ಸಾಗುವ ಆನೆಯ ಸುತ್ತ ಹೆಚ್ಚಿನ ಭದ್ರತೆ ಕಲ್ಪಿಸಬೇಕು. ಮೆರವಣಿಗೆಯುದ್ದಕ್ಕೂ ಅಂಬಾರಿ ಆನೆ ಬಳಿ ಜನ ಸೇರದಂತೆ ಸುತ್ತಲೂ ಹಗ್ಗ ಹಿಡಿದು ಕ್ರಮ ವಹಿಸಲು ಕಮಾಂಡೋ ಪಡೆಯನ್ನು ನಿಯೋಜಿಸಬೇಕು.

ಪ್ರತಿವರ್ಷ ದಸರಾ ಜಂಬೂ ಸವಾರಿ ವೀಕ್ಷಿಸಲು ನಾಲ್ಕೈದು ಲಕ್ಷ ಮಂದಿ ಸೇರುತ್ತಾರೆ. ದೇಶ ವಿದೇಶದ ಪ್ರವಾಸಿಗರೂ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಆದರೆ ಜಂಬೂ ಸವಾರಿ ಮೆರವಣಿಗೆಗೆ ಹೊಸ ಸ್ಪರ್ಶ ನೀಡಿ, ಜನರು ಯಾವುದೇ ಆತಂಕವಿಲ್ಲದೆ ವೀಕ್ಷಿಸುವ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಿಲ್ಲ. ದೆಹಲಿಯ ಕೆಂಪುಕೋಟೆಯಲ್ಲಿ ನಡೆಯುವ ಸ್ವಾತಂತ್ರ್ಯೋತ್ಸವ ವೀಕ್ಷಿಸಲು ಎರಡು ಬದಿಯಲ್ಲಿ ಸಾರ್ವಜನಿಕರಿಗೆ ಆಸನಗಳ ವ್ಯವಸ್ಥೆ ಕಲ್ಪಿಸುವ ಮಾದರಿಯಲ್ಲಿ ದಸರಾ ಮೆರವಣಿಗೆ ವೀಕ್ಷಣೆಗೂ ವ್ಯವಸ್ಥೆ ಮಾಡಬೇಕು. ವ್ಯವಸ್ಥಿತ ಆಸನದೊಂದಿಗೆ ಭದ್ರತೆ, ಕುಡಿಯುವ ನೀರು, ಸಂಚಾರಿ ಶೌಚಾಲಯ ಹಾಗೂ ವೈದ್ಯಕೀಯ ಸೇವೆ ಕಲ್ಪಿಸಬೇಕು.

ಅರಮನೆ ಆವರಣದಲ್ಲಿ ಜಂಬೂಸವಾರಿ ಮೆರವಣಿಗೆ ವೀಕ್ಷಣೆಗೆ 40ರಿಂದ 50 ಸಾವಿರ ಆಸನ ವ್ಯವಸ್ಥೆ ಮಾಡಿ, ಅದಕ್ಕಿಂತ ಮೂರ್ನಾಲ್ಕು ಪಟ್ಟು ಹೆಚ್ಚು ಪಾಸ್ ವಿತರಣೆ ಮಾಡಲಾಗುತ್ತದೆ. ಪರಿಣಾಮ ನೂಕುನುಗ್ಗಲು, ಗಲಾಟೆ, ಗದ್ದಲದಿಂದ ಅರಮನೆ ಅಂಗಳ ಅದ್ವಾನದ ಗೂಡಾಗುತ್ತದೆ ಎಂಬ ದೂರುಗಳು ಪ್ರತಿ ಬಾರಿ ಕೇಳಿ ಬರುತ್ತವೆ. ಈ ವರ್ಷವಾದರೂ ಕಟ್ಟುನಿಟ್ಟಿನ ಕ್ರಮವಹಿಸಿ ದಸರಾ ಮಹೋತ್ಸವದ ಪಾವಿತ್ರ್ಯತೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕಿದೆ.

ಸಾಮಾನ್ಯರಿಗೆ ಮೆರವಣಿಗೆ ಸಾಗುವ ಮಾರ್ಗದಲ್ಲಾದರೂ ಕುಳಿತು ನೆಮ್ಮದಿಯಿಂದ ಜಂಬೂಸವಾರಿ ನೋಡಲಾಗದು. ಅದರಲ್ಲೂ ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರು, ವಿಶೇಷಚೇತನರು ನೂಕುನುಗ್ಗಲಲ್ಲಿ ಬೆಳಗ್ಗೆಯಿಂದಲೇ ಕಾದು ನಿಲ್ಲುತ್ತಾರೆ. ಅಂಬಾರಿ ಆನೆ ಹತ್ತಿರ ಬರುತ್ತಿದ್ದಂತೆ ಒಬ್ಬರ ಮೇಲೊಬ್ಬರು ಬೀಳುತ್ತಾರೆ. ಇದರಿಂದ ಮಹಿಳೆಯರು ಹಾಗೂ ಮಕ್ಕಳು ನರಕಯಾತನೆ ಅನುಭವಿಸುತ್ತಾರೆ. ಕಳ್ಳತನ, ಜಗಳ, ಹೊಡೆದಾಟಗಳಾಗುತ್ತವೆ. ರಸ್ತೆ ಭಾಗದಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸರೂ ಅಸಹಾಯಕರಾಗಿರುತ್ತಾರೆ. ಇತ್ತೀಚಿಗೆ ನಡೆದ ಚಿನ್ನಸ್ವಾಮಿ ಕ್ರೀಡಾಂಗಣದ ಕಾಲ್ತುಳಿತ ಪ್ರಕರಣವನ್ನು ಗಮನದಲ್ಲಿಟ್ಟುಕೊಂಡು ಮೆರವಣಿಗೆಗೆ ಹೆಚ್ಚಿನ ಪೊಲೀಸ್ ಭದ್ರತೆ ಒದಗಿಸಬೇಕು.

ಚಾಮರಾಜ ಒಡೆಯರ್ ವೃತ್ತದಿಂದ ಬನ್ನಿಮಂಟಪದವರೆಗೂ ಫುಟ್‌ಪಾತ್‌ನಲ್ಲಿ ಖಾಸಗಿ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ ವ್ಯವಸ್ಥಿತವಾಗಿ ಆಸನ ವ್ಯವಸ್ಥೆ ಮಾಡಬಹುದು. ಹಿರಿಯರು, ಮಹಿಳೆಯರು ಹಾಗೂ ವಿದೇಶಿ ಪ್ರವಾಸಿಗರಿಗೆ ಪ್ರತ್ಯೇಕ ಗ್ಯಾಲರಿ ಕಾಯ್ದಿರಿಸಬಹುದು. ಒಟ್ಟಾರೆ ನೂಕುನುಗ್ಗಲು ಇಲ್ಲದಂತೆ ಲಕ್ಷಾಂತರ ಮಂದಿ ಸುರಕ್ಷಿತವಾಗಿ ನೆಮ್ಮದಿಯಿಂದ ದಸರಾ ವೀಕ್ಷಣೆ ಮಾಡಲು ಅವಕಾಶ ಕಲ್ಪಿಸಬೇಕೆಂದು ಸಂದೇಶ್ ಸ್ವಾಮಿ ಕೋರಿದ್ದಾರೆ.

ಇಂದು ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್‌ನ ಶತಪಯಣ ಸಮಾರಂಭ

ಮೈಸೂರು, ಸೆ.5– 'ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ'ನ 105ನೇ ವರ್ಷದ ಶತಪಯಣದ ಸಮಾರಂಭವನ್ನು ಜೆ.ಕೆ. ಮೈದಾನದ'ಲ್ಲಿರುವ'



ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಅಮೃತ ಮಹೋತ್ಸವ ಭವನದಲ್ಲಿ ಶನಿವಾರ(ಸೆ.6) ಬೆಳಗ್ಗೆ 10.30ಕ್ಕೆ ಆಯೋಜಿಸಲಾಗಿದೆ.

ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಆದಿ ಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಕೆ.ಆರ್.ನಗರ ಕಾಗಿನೆಲೆ ಶಾಖಾ ಮಠದ ಶ್ರೀ ಡಾ.ಶಿವಾನಂದ ಪುರಿ ಸ್ವಾಮೀಜಿ, ಉರಿಲಿಂಗಿಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಹಾಗೂ ಅನೇಕ ರಾಜಕೀಯ ನಾಯಕರು, ಮುಖಂಡರು, ಸಹಕಾರ ಕ್ಷೇತ್ರದ ದುರೀಣರು ಭಾಗವಹಿಸಲಿದ್ದಾರೆ. ಇದೇ ವೇಳೆ ಸುಯೋಗ್ ಆಸ್ಪತ್ರೆ ವತಿಯಿಂದ ವೈದ್ಯಕೀಯ ತಪಾಸಣೆಯನ್ನೂ ಹಮ್ಮಿಕೊಳ್ಳಲಾಗಿದೆ.

ಸೀಟ್ ಬೆಲ್ಟ್ ಧರಿಸದೆ ಆರು ಬಾರಿ ಸಂಚಾರ ನಿಯಮ ಉಲ್ಲಂಘಿಸಿದ ಸಿಎಂ ಸಿದ್ದರಾಮಯ್ಯ

ಬೆಂಗಳೂರು ಸಂಚಾರ ಪೋಲೀಸರಿಂದ ಶೇ.50ರ ರಿಯಾಯಿತಿಯಡಿ ದಂಡ ವಸೂಲಿ!

ಬೆಂಗಳೂರು, ಸೆ.5– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಳಸುವ ಇನೋವಾ ಕಾರು 2024ರಿಂದ ಈವರೆಗೆ ಏಳು ಬಾರಿ ಸಂಚಾರ ನಿಯಮಗಳನ್ನು ಉಲ್ಲಂಘಿಸಿರುವುದು ಜಂಕ್ಷನ್‌ಗಳಲ್ಲಿ ಅಳವಡಿಸಿರುವ ಕ್ಯಾಮೆರಾಗಳಲ್ಲಿ ದಾಖಲಾಗಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೀಟ್ ಬೆಲ್ಟ್ ಧರಿಸದೆ ಕಾರಿನಲ್ಲಿ ಪ್ರಯಾಣಿಸುತ್ತಿರುವ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿರುವುದು


ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ.50ರ ರಿಯಾಯಿತಿ ಅಡಿ ದಂಡ ಪಾವತಿಸಲು ರಾಜ್ಯ ಸರ್ಕಾರವು ಅವಕಾಶ ಕಲ್ಪಿಸಿದ್ದು, ಸಿದ್ದರಾಮಯ್ಯ ಅವರು ಬಳಸುತ್ತಿರುವ ಕಾರಿನ ಮೇಲಿನ ಪ್ರಕರಣಗಳ ಸಂಬಂಧ ದಂಡ ಪಾವತಿಯಾಗಿದೆ ಎಂದು ಸಂಚಾರ ಪೊಲೀಸ್ ಮೂಲಗಳು ತಿಳಿಸಿವೆ. ಆರು ಪ್ರಕರಣಗಳಲ್ಲಿ ಮುಖ್ಯಮಂತ್ರಿ ಸೀಟ್ ಬೆಲ್ಟ್ ಧರಿಸದೇ ನಿಯಮ ಉಲ್ಲಂಘಿಸಿದ್ದಾರೆ. ಸಿಎಂ ಬಳಸುತ್ತಿದ್ದ ಕಾರಿನ ಮೇಲೆ ಶೇ 50ರಷ್ಟು ರಿಯಾಯಿತಿ ಅನುಸಾರ ರೂ.2,500 ರೂಪಾಯಿ ದಂಡವಿತ್ತು.

ಸಿದ್ದರಾಮಯ್ಯ ಅವರು ಕಾರಿನ ಮುಂಭಾಗದಲ್ಲಿ ಕುಳಿತುಕೊಂಡಾಗ ಸೀಟ್ ಬೆಲ್ಟ್ ಧರಿಸದೇ ನಿಯಮ ಉಲ್ಲಂಘಿಸಿರುವ ದೃಶ್ಯಾವಳಿಯು ಜಂಕ್ಷನ್‌ಗಳಲ್ಲಿ ಅಳವಡಿಸಿರುವ ಇಂಟಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂನಲ್ಲಿ (ಐಟಿಎಂಎಸ್) ಸೆರೆಯಾಗಿದೆ.

2024ರ ಜನವರಿ 24ರಂದು ಮಧ್ಯಾಹ್ನ 12.19ರಂದು ಹಳೇ ವಿಮಾನ ನಿಲ್ದಾಣ ರಸ್ತೆಯ ಲೀಲಾ ಪ್ಯಾಲೇಸ್ ಜಂಕ್ಷನ್ ಬಳಿ ಸಾಗುವಾಗ ಸಿದ್ದರಾಮಯ್ಯ ಅವರು ಸೀಟು ಬೆಲ್ಟ್ ಧರಿಸಿರಲಿಲ್ಲ. ಅದೇ ಜಂಕ್ಷನ್‌ನಲ್ಲಿ ಫೆಬ್ರವರಿ ಹಾಗೂ ಆಗಸ್ಟ್‌ನಲ್ಲಿ ಮತ್ತೆರಡು ಪ್ರಕರಣಗಳು ದಾಖಲಾದರೆ, ಮಾರ್ಚ್‌ನಲ್ಲಿ ಚಂದ್ರಿಕಾ ಹೋಟೇಲ್ ಜಂಕ್ಷನ್ ಹಾಗೂ ಆಗಸ್ಟ್‌ನಲ್ಲಿ ಶಿವಾನಂದ ವೃತ್ತ ಹಾಗೂ ಡಾ. ರಾಜ್‌ಕುಮಾರ್ ಪ್ರತಿಮೆ ಜಂಕ್ಷನ್‌ಗಳ ಬಳಿ ಸೀಟು ಬೆಲ್ಟ್ ಧರಿಸಿದ ನಿಯಮ ಉಲ್ಲಂಘಿಸಿರುವುದು ದಾಖಲಾಗಿದೆ.

ಜುಲೈ 9ರಂದು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಎಕ್ಸ್‌ಪ್ರೆಸ್ ಕಾರಿಡಾರ್‌ನಲ್ಲಿ ಮುಖ್ಯಮಂತ್ರಿ ಅವರಿದ್ದ ಕಾರು ಅತಿವೇಗದಿಂದ ಹೋಗುವ ಮೂಲಕ ನಿಯಮ ಉಲ್ಲಂಘಿಸಿರುವುದು ಐಟಿಎಂಎಸ್‌ನಲ್ಲಿ ದಾಖಲಾಗಿದೆ. ಸದ್ಯ ಕಾರಿನ ಮೇಲಿದ್ದ ದಂಡ ಪಾವತಿಯಾಗಿದೆ ಎಂದು ಸಂಚಾರ ಪೊಲೀಸ್ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

ಹುಟ್ಟುಹಬ್ಬದ ಶುಭಾಶಯ




ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅವರಿಗೆ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮಾಜಿ ಉಪ ಮೇಯರ್ ಸಿದ್ದರಾಜು, ನಗರ ಕಾಂಗ್ರೆಸ್ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ಎನ್.ಆರ್.ನಾಗೇಶ್, ಕಾರ್ಯದರ್ಶಿ ಕೇಶವ, ಸಂಚಾಲಕ ಆರ್.ಕೆ.ರವಿ, ಕಾಂಗ್ರೆಸ್ ಮುಖಂಡ ಶ್ರೀನಾಥ್ ಬಾಬು, ರಘು, ಹರೀಶ್ ರೆಡ್ಡಿ, ರಾಜು ರೆಡ್ಡಿ, ಸುನಿಲ್ ನಾರಾಯಣ್, ರವಿ ಕುಂಬಾರ್, ರವಿ ನಾಯಕ್ ಇನ್ನಿತರರು ಹುಟ್ಟುಹಬ್ಬದ ಶುಭಾಶಯ ಕೋರಿದರು.

ಇವಿಎಂ ಬದಲು ಮತಪತ್ರದ ಮೂಲಕ ಚುನಾವಣೆ; ಬಿಜೆಪಿ ಟೀಕೆ

ಮತ್ತೆ ಪುರಾತನ ಯುಗಕ್ಕೆ ಮರಳುವ ನಿರ್ಧಾರ: ಎಂಎಲ್ಸಿ ರವಿಕುಮಾರ್ ವ್ಯಂಗ್ಯ

ಬೆಂಗಳೂರು, ಸೆ5(ಕೆಎಂಶಿ)– ವಿದ್ಯುನ್ಮಾನ ಮತಯಂತ್ರ (ಇವಿಎಂ) ಬದಲಿಗೆ ಮತಪತ್ರದ ಮೂಲಕ ಚುನಾವಣೆ ನಡೆಸಲು ರಾಜ್ಯ ಕಾಂಗ್ರೆಸ್ ಸರ್ಕಾರ ಮುಂದಾಗಿರುವುದು ಮತ್ತೆ ಪುರಾತನ ಯುಗಕ್ಕೆ ಹೋದಂತಾಗಿದೆ ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತಪತ್ರ ಬಳಸಿದರೆ 2–3 ದಿನ ಮತ ಎಣಿಕೆ ಮಾಡಬೇಕಾಗುತ್ತದೆ. ರಾಹುಲ್ ಗಾಂಧಿ ಹೇಳಿದರೆಂಬ ಮಾತ್ರಕ್ಕೆ ಇವಿಎಂ ಬದಲು ಬ್ಯಾಲೆಟ್ ಪೇಪರ್ ಮೂಲಕ ಚುನಾವಣೆ ಮಾಡುವುದನ್ನು ಬಿಜೆಪಿ ಒಪ್ಪುವುದಿಲ್ಲ ಎಂದರು.



ಈ ವಿಷಯವನ್ನು ಜನರ ಬಳಿಗೆ ಕೊಂಡೊಯ್ಯುತ್ತೇವೆ. ತೆಲಂಗಾಣ, ಹಿಮಾಚಲ ಪ್ರದೇಶದಲ್ಲಿ ಇವಿಎಂ ಮೂಲಕ ಕಾಂಗ್ರೆಸ್ ಅಧಿಕಾರಕ್ಕೆ ಬಂದಿಲ್ಲವೇ. ಕಳ್ಳನ ಮನಸ್ಸು ಹುಳ್ಳುಳ್ಳಗೆ ಎಂಬಂತೆ ಕಾಂಗ್ರೆಸ್ ಏನೇನೋ ತಪ್ಪುಗಳನ್ನು ಮಾಡಲು ಹೊರಟಿದೆ. ರಾಜ್ಯದಲ್ಲಿ ಇವಿಎಂ ಮೂಲಕ ನಡೆದ ಚುನಾವಣೆಯಿಂದ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಸಿದ್ದ ರಾಮಯ್ಯ, ಡಿ.ಕೆ.ಶಿವಕುಮಾರ್ ಪಕ್ಷ 136 ಕ್ಷೇತ್ರಗಳಲ್ಲಿ ಗೆದ್ದಿದೆ. ಎಂಎಲ್‌ಸಿ, ಲೋಕಸಭಾ ಚುನಾವಣೆಗಳಲ್ಲೂ ಗೆದ್ದಿದ್ದೀರಿ. ಇವಿಎಂನಿಂದ ಅಕ್ರಮ ಎಸಗಲು ಸಾಧ್ಯವಿಲ್ಲ ಎಂಬುದಾಗಿ ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳ ಅನೇಕ ತೀರ್ಪುಗಳು ಹೊರ ಬಂದಿವೆ.

ದೇಸಾಯಿ ಆಯೋಗದ ವರದಿ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮುಡಾ ಕೇಸ್‌ನಿಂದ ಹೊರತರಲು ಮತ್ತು ಕ್ಲೀನ್ ಚಿಟ್ ನೀಡಲು ಸರ್ಕಾರ ಅತ್ಯಂತ ವ್ಯವಸ್ಥಿತ ಷಡ್ಯಂತ್ರ ಮಾಡಿದೆ.

ಸಿದ್ದರಾಮಯ್ಯ ಮುಡಾ ಕೇಸ್‌ನಲ್ಲಿ ತಪ್ಪು ಮಾಡಿರುವುದು ನೂರಕ್ಕೆ ನೂರರಷ್ಟು ಸತ್ಯ, 60 ಕೋಟಿ ರೂ. ಕೊಟ್ಟರೆ ನಿವೇಶನಗಳನ್ನು ವಾಪಸ್ ಕೊಡುವುದಾಗಿ ಅವರೇ ಹೇಳಿದ್ದರು. ಬಳಿಕ ಅವರು ಉಲ್ಟಾ ಹೊಡೆದಿದ್ದು ಎಲ್ಲರಿಗೂ ತಿಳಿದಿದೆ. ಇದು ಅತ್ಯಂತ ಭ್ರಷ್ಟ ಸರ್ಕಾರ ಎಂದರು.

ಕೈಗಾರಿಕೆಗೆ ಜಾಗ ತೆಗೆದುಕೊಳ್ಳುವ ನೆಪದಲ್ಲಿ ರೈತರ ವಿರೋಧ ಲೆಕ್ಕಿಸದೆ ಜಮೀನು ಸ್ವಾಧೀನಕ್ಕೆ ಬಿಜೆಪಿ ವಿರೋಧವಿದೆ. ರೈತರ ಮನವೊಲಿಸಿ, ಒಪ್ಪಿಗೆ ಇದ್ದರೆ ಮಾತ್ರ ಭೂಮಿ ಪಡೆಯಬೇಕು, ತಪ್ಪಿದಲ್ಲಿ ರೈತರ ಪರವಾಗಿ ಹೋರಾಟ ಮಾಡುತ್ತೇವೆ.

ರೈತರನ್ನು ಒಕ್ಕಲೆಬ್ಬಿಸುವ ಕೆಲಸ ಸರ್ಕಾರ ಮಾಡುತ್ತಿದೆ. ಕೈಗಾರಿಕೆಗೆ ಜಾಗ ಪಡೆಯಲು ನಮ್ಮ ವಿರೋಧವಿಲ್ಲ, ಕೈಗಾರಿಕೆ ಬೇಕು, ಬಿಜೆಪಿ ಕೈಗಾರಿಕೆಗಳ ವಿರುದ್ಧವಾಗಿಲ್ಲ ಎಂದರು.

ನಮ್ಮ ಅನುಭವದ ಆಧಾರದಲ್ಲಿ ಮತಪತ್ರಗಳ ಚುನಾವಣೆಗೆ ತೀರ್ಮಾನಿಸಿದ್ದೇವೆ

ಬೆಂಗಳೂರು, ಸೆ.5(ಕೆಎಂಶಿ)– ನಮ್ಮ ಅನುಭವದ ಆಧಾರದ ಮೇಲೆ ವಿದ್ಯುನ್ಮಾನ ಮತ ಯಂತ್ರ (ಇವಿಎಂ) ಬದಲಿಗೆ ಮತಪತ್ರಗಳ ಮೂಲಕವೇ ಚುನಾವಣೆ ನಡೆಸುವ ತೀರ್ಮಾನ ಮಾಡಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸಮರ್ಥಿಸಿಕೊಂಡಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತಪತ್ರಗಳ ಮೂಲಕವೇ ಚುನಾವಣೆ ನಡೆಸಬೇಕೆಂಬುದು ನಮ್ಮ ಉದ್ದೇಶ, ಅದಕ್ಕಾಗಿ ಈ ತೀರ್ಮಾನ ಮಾಡಿದ್ದೇವೆ. ಅನೇಕ ದೇಶಗಳು ಇವಿಎಂ ಬಳಸಿ ನಂತರ ಮತಪತ್ರಕ್ಕೆ ಹಿಂತಿರುಗಿರುವುದನ್ನು ನೋಡಿದ್ದೇವೆ. ಈಗ ಬ್ಯಾಲೆಟ್ ಪೇಪರ್ ಮೂಲಕ ಚುನಾವಣೆ ನಡೆಸುತ್ತಿವೆ ಎಂದರು.

ನಾವು ಮತಪತ್ರದ ಚುನಾವಣೆ ಪ್ರಸ್ತಾಪಿಸಿದರೆ 'ಕಳ್ಳನ ಮನಸ್ಸು ಹುಳ್ಳುಳ್ಳಗೆ' ಎಂಬಂತೆ ಬಿಜೆಪಿಗೇಕೆ ಗಾಬರಿ!

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನೆ

ಬೆಂಗಳೂರು, ಸೆ.5(ಕೆಎಂಶಿ)– ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮತಪತ್ರ ಬಳಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. 'ಕಳ್ಳನ ಮನಸ್ಸು ಹುಳ್ಳುಳ್ಳಗೆ' ಎಂಬಂತೆ ಬಿಜೆಪಿ ಏಕೆ ಗಾಬರಿಯಾಗಬೇಕು? ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ಪ್ರಶ್ನಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಪತ್ರ ಬಳಕೆ ಸರ್ಕಾರದ ತೀರ್ಮಾನ. ಬಿಜೆಪಿಗೆ ಆತಂಕವೇಕೆ. ರಾಜ್ಯ ಸರ್ಕಾರಕ್ಕೆ ಅವಕಾಶವಿದೆ. ಬಿಜೆಪಿ ಅವಧಿಯಲ್ಲಿ ಮಾಡಿರುವ ಕಾನೂನು ಇದೆ.

ಲೋಕಸಭಾ ಚುನಾವಣೆಗಳ ಪ್ರಕ್ರಿಯೆಗಳನ್ನು ಪರಿಶೀಲನೆ ಮಾಡಿದ್ದೇವೆ. ಸಹಕಾರಿ ಸಂಘಗಳಿಗೆ ಚುನಾವಣೆ ನಡೆಸುವಂತೆ, ಸ್ಥಳೀಯ ಸಂಸ್ಥೆ ಚುನಾವಣೆಯನ್ನೂ ಮಾಡುತ್ತೇವೆ. ಕೇಂದ್ರ ಚುನಾವಣಾ ಆಯೋಗದ ತೀರ್ಮಾನದಂತೆ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಿಗೆ ಚುನಾ ವಣೆ ನಡೆಯುತ್ತದೆ ಎಂದರು.



ಜಿಬಿಐಟಿ ಯೋಜನೆಗೆ ಶೇ.82ರಷ್ಟು ರೈತರು ಜಮೀನು ನೀಡಲು ಒಪ್ಪಿಗೆ ಸೂಚಿಸಿದ್ದಾರೆ. ಉಳಿದ ಶೇ.18 ಕೃಷಿಕರು ವಿರೋಧ ಮಾಡುತ್ತಿದ್ದಾರೆ. ನಮ್ಮ ರೈತರಿಗೆ ಅತ್ಯುತ್ತಮ ಪರಿಹಾರ ನೀಡಿದ್ದೇವೆ.

ಇಡೀ ರಾಜ್ಯವನ್ನು ಗಮನದಲ್ಲಿಟ್ಟುಕೊಂಡು ಪರಿಹಾರ ರೂಪಿಸಬೇಕಿದೆ. ಹೆಚ್ಚಿನ ಪರಿಹಾರ ಮೊತ್ತ ನೀಡಲು ಸಾಧ್ಯವಿಲ್ಲ. ಯೋಜನೆ ಬೇಡವಾಗಿದ್ದರೆ ಎಚ್.ಡಿ. ಕುಮಾರಸ್ವಾಮಿ ಹಾಗೂ ಬಿ.ಎಸ್.ಯಡಿಯೂರಪ್ಪ ತಮ್ಮ ಸರ್ಕಾರದ ಅವಧಿಯಲ್ಲಿ ಡಿನೋಟಿಫಿಕೇಷನ್ ಮಾಡಬಹುದಿತ್ತಲ್ಲ.

ಈ ಯೋಜನೆ ನೋಟಿಫಿಕೇಶನ್ ಮಾಡಿದ್ದು ಅವರು, ಸುಪ್ರೀಂಕೋರ್ಟ್‌ನಲ್ಲಿ ಅಂತಿಮ ತೀರ್ಮಾನ ಆಗುವವರೆಗೆ ಡಿನೋಟಿಫಿಕೇಷನ್ ಮಾಡಲಾಗದು. ಬಿಜೆಪಿ ಹಾಗೂ ಕಾಂಗ್ರೆಸ್ಸಿಗರ ಮೇಲಿದ್ದ ಅನೇಕ ಮೊಕದ್ದಮೆಗಳನ್ನು ಹಿಂಪಡೆದಿದ್ದೇವೆ. ಬಿಜೆಪಿ ಸರ್ಕಾರ ನಮ್ಮ ಬೆಂಬಲಿಗರ ಮೇಲೆ ಬಲವಂತವಾಗಿ ಹಾಕಿದ್ದ ಪ್ರಕರಣಗಳನ್ನು ರದ್ದುಗೊಳಿಸಿದ್ದೇವೆ. ಕೋವಿಡ್ ಸಮಯದಲ್ಲಿ ನನ್ನ ಹಾಗೂ ಮುಖ್ಯಮಂತ್ರಿ ವಿರುದ್ಧ ಕೇಸ್ ಹಾಕಿದ್ದರು. ರಾಜ್ಯ, ರೈತ ಮತ್ತು ಭಾಷೆಗಾಗಿ ಪ್ರತಿಭಟನೆ ನಡೆಸಿದವರ ಮೇಲೆ ಹಾಕಿರುವ ಕೇಸ್‌ಗಳನ್ನು ಹಿಂಪಡೆದಿದ್ದೇವೆ.

ರೈತ ಸಂಘ, ಬಿಜೆಪಿ, ಚಳವಳಿಗಾರರ ಮನವಿ ಸ್ವೀಕರಿಸಿ ಎಲ್ಲಾ ಪಕ್ಷದವರ ಮೇಲಿದ್ದ ಕೇಸ್ ರದ್ದುಗೊಳಿಸಿದ್ದೇವೆ ಎಂದರು.

ನನ್ನ ಬಂಧನವಾಗಿದ್ದ ಜಾರಿ ನಿರ್ದೇಶನಾಲಯ (ಇ.ಡಿ.) ಪ್ರಕರಣ ವಜಾಗೊಂಡಿದೆ. ನನಗೆ ಆಗಿರುವ ಅನ್ಯಾಯ ಸರಿ ಮಾಡುವವರು ಯಾರು. ಈ ವಿಚಾರವಾಗಿ ಹೆಚ್ಚಿನ ಚರ್ಚೆ ಬೇಡ ಎಂದರು.

ಚುನಾವಣಾ ಅಕ್ರಮ ಎಸಗಬಹುದೆಂದು ಮತಪತ್ರ ಬಳಕೆಗೆ ಕಾಂಗ್ರೆಸ್ ನಿರ್ಧಾರ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪ

ಬೆಂಗಳೂರು, ಸೆ.5– ಮತಪತ್ರಗಳ ಬಳಕೆಯಿಂದ ಚುನಾವಣಾ ಅಕ್ರಮ ಎಸಗಬಹುದು, ಮತಗಟ್ಟೆಗಳಲ್ಲಿ ದೌರ್ಜನ್ಯ ಮೆರೆಯಬಹುದು, ಎಗ್ಗಿಲ್ಲದೇ ಕಳ್ಳ ಮತದಾನವನ್ನೂ ಮಾಡಬಹುದೆಂಬ ಏಕೈಕ ಕಾರಣಕ್ಕಾಗಿ ಕಾಂಗ್ರೆಸ್ ಮತಪತ್ರ ಆಧರಿಸಿದ ಚುನಾವಣೆಯನ್ನು ರಾಹುಲ್ ಗಾಂಧಿ ನೇತೃತ್ವದಲ್ಲಿ ಬೆಂಬಲಿಸುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ದೂರಿದ್ದಾರೆ.

ಈ ಕುರಿತು ಶುಕ್ರವಾರ ಎಕ್ಸ್‌ನಲ್ಲಿ ಪೋಸ್ಟ್ ಹಾಕಿರುವ ಅವರು, ಸ್ಥಳೀಯ ಸಂಸ್ಥೆ ಚುನಾವಣೆ ಮತಪತ್ರದ ಮೂಲಕ ನಡೆಸಲು ಕಾಂಗ್ರೆಸ್ ಸರಕಾರ ಜಾರಿಗೊಳಿಸಲು ಮೊದಲ ಹೆಜ್ಜೆ ಇಡಲು ಹೊರಟಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಪಾರದರ್ಶಕ ಚುನಾವಣೆಯನ್ನು ಧಿಕ್ಕರಿಸುವುದೇ ಕಾಂಗ್ರೆಸ್‌ನ ಅಜೆಂಡಾ ಹಾಗೂ ಗುರಿಯಾಗಿದೆ ಎಂದು ಟೀಕಿಸಿದ್ದಾರೆ.



ಇವಿಎಂ ಮತಯಂತ್ರ ಬಳಸಿ ರಾಜ್ಯದಲ್ಲಿ 2023ರ ಚುನಾವಣೆಯಲ್ಲಿ ಆರಿಸಿ ಬಂದಿರುವ 136 ಕಾಂಗ್ರೆಸ್ ಶಾಸಕರಿಂದ ಮೊದಲು ರಾಜೀನಾಮೆ ಕೊಡಿಸಲಿ. ಮತಪತ್ರ ಬಳಸಿ ಮತ್ತೆ ಚುನಾವಣೆಯಿಂದ ಗೆದ್ದು ಬರಲಿ, ಇಲ್ಲದಿದ್ದರೆ ಮತಗಳ್ಳತನದಿಂದ ನಾವು ಆಯ್ಕೆಯಾಗಿ ಅಧಿಕಾರಕ್ಕೆ ಬಂದಿರುವುದು ಎಂದು ಒಪ್ಪಿಕೊಳ್ಳಲಿ ಎಂದು ಅವರು ಸವಾಲು ಹಾಕಿದ್ದಾರೆ.

ದೇಶದಲ್ಲಿ ಅತಿಹೆಚ್ಚು ಅಕ್ರಮ ಮತದಾನ, ಮತಗಳ್ಳತನದ ದೂರುಗಳು, ಚುನಾವಣಾ ದೌರ್ಜನ್ಯದ ಘಟನೆಗಳು, ಚುನಾವಣಾ ಅಕ್ರಮಗಳು ನಡೆದ ಬಗ್ಗೆ ಕೋರ್ಟ್‌ಗಳಲ್ಲಿ ದೂರುಗಳು ಅತೀ ಹೆಚ್ಚು ದಾಖಲಾಗಿದ್ದರೆ ಅದು ಮತಪತ್ರ ಆಧರಿಸಿ ನಡೆಸಿದ ಚುನಾವಣೆಗಳಲ್ಲಿ. ಅದೂ ಕಾಂಗ್ರೆಸ್ಸಿಗರ ಮೇಲೇ ಹೆಚ್ಚು ಎಂಬುದನ್ನು, ಕಾಂಗ್ರೆಸ್ಸಿಗರು ಇತಿಹಾಸದ ಪುಟಗಳನ್ನು ತೆರೆದು ನೋಡಲಿ ಎಂದು ಟೀಕಿಸಿದ್ದಾರೆ.

ಮತಪತ್ರ ಆಧರಿಸಿದ ಚುನಾವಣೆಗಳಲ್ಲಿ ಅಕ್ರಮ ಹಾಗೂ ಮತಗಳ್ಳತನ ನಡೆಸುವುದರಲ್ಲಿ ನಿಪುಣರಾದ ಕಾಂಗ್ರೆಸ್ಸಿಗರು ಚುನಾವಣೆಗಳ ನಿರಂತರ ಸೋಲುಗಳಿಂದ ಮೂಲೆಗುಂಪಾಗುತ್ತಿರುವ ಪರಿಸ್ಥಿತಿಯಿಂದ ಕಂಗೆಟ್ಟು ಹೋಗಿದ್ದಾರೆ. ಈ ಕಾರಣದಿಂದಾಗಿ ಆಧಾರ ರಹಿತ, ಅಪ್ರಬುದ್ಧ, ವಿತಂಡ ವಾದವನ್ನು ಮುಂದಿಟ್ಟುಕೊಂಡು ರಾಹುಲ್ ಗಾಂಧಿ ಮತಗಳ್ಳತನದ ಹೆಸರಿನಲ್ಲಿ ಬಾಲಿಶ ವಿವಾದ ಹುಟ್ಟು ಹಾಕಲು ಹೊರಟಿದ್ದಾರೆ ಎಂದು ತಿಳಿಸಿದ್ದಾರೆ.

ಇದನ್ನು ಬೆಂಬಲಿಸಲು ಕಾಂಗ್ರೆಸ್ ಸರಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಪತ್ರವನ್ನು ಬಳಸಿ ಚುನಾವಣೆ ನಡೆಸುವುದಾಗಿ ನಿರ್ಣಯ ಕೈಗೊಂಡಿದೆ. ಇಡೀ ದೇಶ, ಜಗತ್ತು ತಂತ್ರಜ್ಞಾನವನ್ನು ಆಧರಿಸಿ ವೇಗವಾಗಿ ನಡೆಯುತ್ತಿದ್ದರೆ, ಕರ್ನಾಟಕದ ಕಾಂಗ್ರೆಸ್ ಸರಕಾರ ತಂತ್ರಜ್ಞಾನವನ್ನು ಅಪಮಾನಿಸಿ ಹೆಬ್ಬೆಟ್ಟಿನ ದಿನಗಳನ್ನು ನೆನಪಿಸಲು ಹೊರಟಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ತಂದೆ : (ಮಗನಿಗೆ ಫೋನ್ ಮಾಡಿ...)
ಎಣ್ಣೆ ಕುಡಿದು ಕಾರು ಓಡಿಸಬೇಡ ಮಗನೆ
ಮಗ : ನೀನು ಎಣ್ಣೆ ಹಾಕಿದಾಗ ನನಗೆ ಫೋನ್ ಮಾಡಬೇಡ ಅಪ್ಪ.
ತಂದೆ : ನಾನು ಎಣ್ಣೆ ಹಾಕಿದ್ದೀನಿ ಅಂತ ನಿನಗೆ ಹೇಗೆ ಗೊತ್ತು.
ಮಗ : ನೀನು ನನಗೆ ಕಾರು ಯಾವಾಗ ಕೊಡಿಸಿದ್ದೀಯಾ ಮತ್ತೆ...?

ಮೈಸೂರು ಮಿತ್ರ
ಶನಿವಾರ, 6 ಸೆಪ್ಟೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ನಾವು ಬಯಸಿದಂತೆ ಬದುಕುವ ಸ್ವಾತಂತ್ರ್ಯ ಯಾವತ್ತೂ ಭಯಾನಕ ಹೋರಾಟದ ಫಲವೇ ಹೊರತು ಸುಲಭವಾಗಿ ಸಿಕ್ಕುವಂತಹದ್ದಲ್ಲ.
–ಡಾ. ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೆಣ್ಣಿಗೆ ಹಟವಿರಬಾರದು / ಗಂಡಿಗೆ ಚಟವಿರಬಾರದು.

ನಿಮ್ಮ ಪತ್ರಗಳು

■ ಸ್ಥಿರಾಸ್ತಿ ನೋಂದಣಿ ಶುಲ್ಕ ಹೆಚ್ಚಳ; ಬಡಜನರಿಗೆ ಆರ್ಥಿಕ ಹೊರೆ

ಮಾನ್ಯರೆ,

ಸೆಪ್ಟೆಂಬರ್ 1 ರಿಂದ ರಾಜ್ಯ ಸರ್ಕಾರ ಸ್ಥಿರಾಸ್ತಿ ನೋಂದಣಿ ಶುಲ್ಕವನ್ನು ಶೇ.2 ರಷ್ಟು ಹೆಚ್ಚಳ ಮಾಡಿರುವುದು ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಮತ್ತೊಂದು ಆರ್ಥಿಕ ಹೊರೆ ಎಂದೇ ಹೇಳಬೇಕು. ನೀವು ಸುಮಾರು 10 ಲಕ್ಷದ ನಿವೇಶನ ಅಥವಾ ಮನೆಯನ್ನು ಖರೀದಿಸಿ ಅದನ್ನು ರಿಜಿಸ್ಟರ್ ಮಾಡಿಸಿಕೊಳ್ಳಲು ರೂ. 76 ಸಾವಿರ ರೂಪಾಯಿಗಳನ್ನು ನೋಂದಣಿ ಶುಲ್ಕವನ್ನೇ ಪಾವತಿಸಬೇಕು. (7.6 %). ಅಲ್ಲದೇ ಇತರ ಖರ್ಚುಗಳು ಸೇರಿದಂತೆ ಸುಮಾರು ಒಂದು ಲಕ್ಷಕ್ಕೂ ಹೆಚ್ಚಾಗಬಹುದು. ಇದು ಬಡ ಜನರು ಸ್ಥಿರಾಸ್ತಿ ಕೊಳ್ಳುವುದೇ ಗಗನ ಕುಸುಮವಾಗಿದೆ. ಕಳೆದ ಎರಡು ವರ್ಷಗಳ ಹಿಂದೆ ಕೇವಲ ಶೇಕಡಾ 5 ರಷ್ಟು ಇದ್ದ ನೋಂದಣಿ ಶುಲ್ಕವನ್ನು ಕಳೆದ ಎರಡು ವರ್ಷಗಳಲ್ಲಿ ಎರಡು ಬಾರಿ ಏರಿಕೆ ಮಾಡಿದೆ. ರಾಜ್ಯ ಸರ್ಕಾರ ಇತ್ತೀಚಿನ ವರ್ಷಗಳಲ್ಲಿ ಪದೇ ಪದೆ ಬಡ ಮತ್ತು ಮಧ್ಯಮ ವರ್ಗದ ಜನರನ್ನು ಗುರಿಯಾಗಿಟ್ಟುಕೊಂಡು ಅಗತ್ಯ ವಸ್ತುಗಳ ಬೆಲೆಯನ್ನು ಏರಿಕೆ ಮಾಡುತ್ತಲೇ ಇದೆ. ಹಾಲು, ನೀರು, ವಿದ್ಯುತ್, ಬಸ್ ಪ್ರಯಾಣ ದರ, ಈಗ ಸ್ಥಿರಾಸ್ತಿ ನೋಂದಣಿ ಶುಲ್ಕ. ಇದೆಲ್ಲವನ್ನು ಗಮನಿಸಿಯೇ ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ ಎಂದು ಆರ್ಥಿಕ ತಜ್ಞರು ವಿಶ್ಲೇಷಿಸುತ್ತಾರೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಸಾವಿನಲ್ಲೂ ಸಾರ್ಥಕತೆ ಮೆರೆದ ಮಾಜಿ ಯೋಧ

ಮಾನ್ಯರೆ,

ಮೂಲತಃ ನಾಗಮಂಗಲ ರಾಮೇಗೌಡರು ಸೇನೆಯಲ್ಲಿದ್ದು, ದೇಶ ಸೇವೆಗೈದು ನಿವೃತ್ತರಾಗಿದ್ದವರು. ಸೇನೆಯಲ್ಲಿದ್ದಾಗಲೇ ಅವರ ಕುಟುಂಬ ಮಂಡ್ಯದ ಸ್ವರ್ಣಸಂದ್ರದಲ್ಲಿ ನೆಲೆ ಕಂಡವರು. ವಯೋಸಹಜ ಅನಾರೋಗ್ಯದಿಂದ ಆ. 31 ರಂದು ನಿಧನರಾದರು. ನಾನು, ಅವರ ಅಂತಿಮ ದರ್ಶನಕ್ಕೆಂದು ಮಂಡ್ಯಕ್ಕೆ ತೆರಳಿದಾಗ ನಮಗೆ ತಿಳಿದದ್ದು ತನ್ನ ಶರೀರವನ್ನು ಮರಣ ನಂತರ ಮಂಡ್ಯ ಮೆಡಿಕಲ್ ಕಾಲೇಜಿಗೆ ದಾನ ಮಾಡಬೇಕೆಂದು ಬರೆದಿಟ್ಟು ತನ್ನ ಕುಟುಂಬದವರಿಗೆ ಮನದಟ್ಟು ಮಾಡಿದ್ದರೆಂದು. ಸಾಮಾನ್ಯ ಕುಟುಂಬದಿಂದ ಬಂದು ಜೀವಂತವಿದ್ದಾಗಲೂ ದೇಶ ಸೇವೆ ಮಾಡಿದ ವ್ಯಕ್ತಿ, ಮರಣನಂತರವೂ ತನ್ನ ದೇಹ ವೈದ್ಯ ವಿದ್ಯಾರ್ಥಿಗಳಿಗೆ ಸಂಶೋಧನಾ ಕಾರ್ಯಕ್ಕೆ ಒಳಗೊಂಡು ಆ ಮೂಲಕ ಸಮಾಜದ ಉಪಯೋಗಕ್ಕೆ ಬರಬೇಕೆನ್ನುವ ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡಿದ್ದ ಅವರ ನಿರ್ಧಾರವನ್ನು ಗೌರವಿಸಿ, ದೇಹವನ್ನು ಮಂಡ್ಯ ಮೆಡಿಕಲ್ ಕಾಲೇಜಿಗೆ ದಾನಗೈದ ಅವರ ಕುಟುಂಬ ಬಾರೀ ಪ್ರಶಂಸೆಗೆ ಅರ್ಹ. ಸಾವಿನಲ್ಲೂ ಸಾರ್ಥಕತೆ ಮೆರೆದ ಮಾಜಿ ಯೋಧ ರಾಮೇಗೌಡರು ಸಮಾಜದ ಇತರರಿಗೂ ಮಾದರಿಯಾಗಿದ್ದಾರೆ ಹಾಗೂ ಅವರ ಕಾರ್ಯ ಎಲ್ಲರಿಗೂ ಪ್ರೇರಣೆಯಾಗಿದೆ.

–ಕೆ.ಎಂ. ನಾಗರಾಜು ವಿಜಯನಗರ 1ನೇ ಹಂತ, ಮೈಸೂರು

■ ಮೋದಿಯವರ ನಿರ್ಧಾರ ಸ್ವಾಗತಾರ್ಹ

ಮಾನ್ಯರೆ,

ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಜಿಎಸ್‌ಟಿ ಪರಿಷ್ಕರಣೆ ಮಾಡಿ ಕೈಗೊಂಡ ನಿರ್ಧಾರ ಸ್ವಾಗತಾರ್ಹವಾಗಿದೆ. ಇದರಿಂದಾಗಿ ಮಧ್ಯಮ ವರ್ಗದವರಿಗೆ ನವರಾತ್ರಿ ಹಾಗೂ ದೀಪಾವಳಿಯ ಉಡುಗೊರೆಯಾಗಿದೆ. ಮೊದಲಿಗೆ ವಿದ್ಯಾರ್ಥಿಗಳು ಬಳಸುವಂತಹ ಸ್ಟೇಷನರಿ ವಸ್ತುಗಳಿಗೆ ತೆರಿಗೆ ವಿನಾಯಿತಿ ನೀಡಿರುವುದು ಸಂತಸದಾಯಕವಾಗಿದೆ. ಜನಸಾಮಾನ್ಯನು ಪುಟ್ಟದೊಂದು ಮನೆ ನಿರ್ಮಿಸಿಕೊಳ್ಳಲು ಸಿಮೆಂಟ್ ಇತ್ಯಾದಿ ವಸ್ತುಗಳಿಗೆ ಇದ್ದಂತಹ ತೆರಿಗೆಯನ್ನು ಶೇ.28 ರಿಂದ ಶೇ.18ಕ್ಕೆ ಇಳಿಸಿರುವುದು ಆಶಾದಾಯಕವಾಗಿದೆ. ಮಧ್ಯಮ ವರ್ಗದವರು ಸಹ ಕಾರ್ ಮತ್ತು ಬೈಕ್‌ಗಳನ್ನು ಕೊಳ್ಳಲು ಶೇ. 18ಕ್ಕೆ ಇಳಿಸಿರುವುದು ಅನುಕೂಲಕರವಾಗಿದೆ. ಮುಂದುವರಿದು ಶೇ.40 ತೆರಿಗೆಯನ್ನು ತಂಬಾಕು ವಸ್ತುಗಳು, ಪಾನ್ ಮಸಾಲ, ಗ್ಯಾಂಬ್ಲಿಂಗ್, ಕುದುರೆ ರೇಸ್, ಆನ್ಲೈನ್ ಗೇಮ್‌ಗಳಿಗೆ ವಿಧಿಸಿರುವುದು ಸೂಕ್ತವಾಗಿದೆ. ಇದರಿಂದಾಗಿ ದೇಶದ ಯುವಜನತೆಯು ದುಶ್ಚಟಗಳಿಂದ ದೂರವಿದ್ದು, ಸರಿದಾರಿಗೆ ಬಂದು ದೇಶ ಮುನ್ನಡೆಯಲು ಸಹಾಯಕವಾಗಿದೆ. ಈ ಎಲ್ಲಾ ಜಿಎಸ್‌ಟಿ ಪರಿಷ್ಕರಣೆಗೆ ಕಾರಣಿಭೂತರಾದ ದೇಶದ ಹೆಮ್ಮೆಯ ಪ್ರಧಾನಮಂತ್ರಿಗಳಿಗೆ ಪಕ್ಷಾತೀತವಾಗಿ ಧನ್ಯವಾದಗಳನ್ನು ಸಲ್ಲಿಸೋಣ.

–ಸೋಮಶೇಖರ್, ಇಲವಾಲ.

■ ಬೃಹತ್ ಬೆಂಗಳೂರು ಪ್ರಾಧಿಕಾರ (ಬಿಬಿಎ)ಅಲ್ಲವೇ?

ಮಾನ್ಯರೆ,

ಬಿಬಿಎಂಪಿ ಈಗ 5 ಪಾಲಿಕೆಗಳಾಗಿ ವಿಕೇಂದ್ರಿಕರಣವಾಗಿದೆ. ಇದನ್ನು ಈಗ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಎಂದು ಆಂಗ್ಲ ಭಾಷೆಯಲ್ಲಿ ನಾಮಕರಣ ಮಾಡಿದ್ದಾರೆ. ಇದನ್ನು ಬೃಹತ್ ಬೆಂಗಳೂರು ಪ್ರಾಧಿಕಾರ(ಬಿಬಿಎ) ಎಂದು ಕನ್ನಡ ಹೆಸರನ್ನೇ ಇಡಬಹುದಿತ್ತಲ್ಲವೇ. ಯಾಕೆ ಈ ಆಂಗ್ಲ ಮೋಹ?

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.


■ ದಸರಾ ಉದ್ಘಾಟನೆ ಬಗ್ಗೆ ವಾದ–ಪ್ರತಿವಾದ!

ಮಾನ್ಯರೆ,

ಐತಿಹಾಸಿಕ ಮೈಸೂರು ದಸರಾ ಮಹೋತ್ಸವದ ಉದ್ಘಾಟನೆ ಇನ್ನು ಕೆಲವೇ ದಿನಗಳಲ್ಲಿ ನಡೆಯಬೇಕಾಗಿದೆ. ಆದರೆ, ಉದ್ಘಾಟಕರ ವಿಚಾರದಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ವಾಕ್ಸಮರ ಜೋರಾಗಿಯೇ ನಡೆಯುತ್ತಿದೆ. ರಾಜ್ಯ ಸರ್ಕಾರ ತನ್ನ ನಿಲುವಿಗೆ ಬದ್ಧವಾಗಿದ್ದು, ಯಾವುದೇ ಕಾರಣಕ್ಕೂ ತನ್ನ ನಿರ್ಧಾರದಿಂದ ಹಿಂದಕ್ಕೆ ಸರಿಯುವುದಿಲ್ಲ ಎಂದು ಹೇಳಿದೆ. ವಿರೋಧ ಪಕ್ಷಗಳು ಕಡೆಯ ಕ್ಷಣದವರೆಗೂ ವಿರೋಧಿಸಬಹುದು. ಉದ್ಘಾಟನೆಯ ಸಮಯದಲ್ಲಿ ಕಪ್ಪು ಬಾವುಟ ಪ್ರದರ್ಶಿಸಬಹುದು ಅಥವಾ ಪ್ರತಿಭಟನೆ ನಡೆಸಬಹುದು. ಏನೇ ಆದರೂ ಉದ್ಘಾಟನೆ ನಡೆದೇ ತೀರುತ್ತದೆ. ಆದರೆ ಇಷ್ಟೊಂದು ಗೊಂದಲಮಯ ಪರಿಸ್ಥಿತಿ ಹಿಂದೆಂದೂ ಕಂಡುಬಂದಿರಲಿಲ್ಲ. ಅಷ್ಟರ ಮಟ್ಟಿಗೆ ಪ್ರಸಕ್ತ ವಿದ್ಯಮಾನಗಳು ದುರದೃಷ್ಟಕರ ಎಂದು ಹೇಳಬಹುದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಮೈಸೂರು ಸಂತೆಯಲ್ಲಿ ಇಲ್ಲೀಗಲ್ ನಿಧಿ ಸಂಗ್ರಹ!



“ಕೋಟಿ ಕೋಟಿ ಹಣ ಹೂಡುವ ಇಂದಿನ ಸಿನೆಮಾ, ಮನರಂಜನೆ, ಹಿಂಸಾವಿನೋದ ಹಾಗೂ ಭೀಬತ್ಸ ಎನ್ನಬಹುದಾದ ದೃಶ್ಯಗಳನ್ನೊಳಗೊಂಡು, ಯುವಕರನ್ನು ಉನ್ಮತ್ತಗೊಳಿಸಿ ಅವರಿಂದ ಸಿಳ್ಳೆ ಗಿಟ್ಟಿಸಿಕೊಂಡು ಹಣ ಮಾಡುವ ಬಹುಕೋಟಿ ಇಂಡಸ್ಟ್ರಿ ಆಗಿರುವುದು ನಮಗೆಲ್ಲ ಗೊತ್ತಿರುವ ವಿಚಾರ. ಆದರೆ ಪುಸ್ತಕ ಮಾರಿ ಬಂದ ಹಣದಿಂದ ಸಿನೆಮಾ ಮಾಡಬೇಕೆಂದುಕೊಂಡಿರುವುದು ನಿಜಕ್ಕೂ ಕನ್ನಡದ ಮಟ್ಟಿಗೆ ಒಂದು ಹೊಸ ಪ್ರಯೋಗ. ಓದುಗರ ಸಂಖ್ಯೆ ಗಣನೀಯವಾಗಿ ಕುಸಿಯುತ್ತಿರುವ ಈ ವಿಷಮ ದಿನಗಳಲ್ಲಿ ರಂಗಕರ್ಮಿ ಯುವಕರ ತಂಡವೊಂದು ಕಾಣುತ್ತಿರುವ ಈ ಬೃಹತ್ ಕನಸು ನನಸಾದರೆ ಕನ್ನಡ ಸಾಹಿತ್ಯ ಮತ್ತು ಸಿನೆಮಾ ರಂಗಕ್ಕೆರಡಕ್ಕೂ ಮೈಲಿಗಲ್ಲಾಗುವುದಂತೂ ಸತ್ಯ. ಇಂತಹ ಕನಸನ್ನು ಬೆಂಬಲಿಸುವುದೆಂದರೆ ಕನ್ನಡ ಭಾಷೆ ಹಾಗೂ ನಮ್ಮ ಸಂಸ್ಕೃತಿಯ ಬೇರುಗಳನ್ನು ಬೆಂಬಲಿಸಿದಂತೆ.



–ಡಾ.ನಾಗೇಶ ಡೂಗನವರ್
ಸಹಾಯಕ ಪ್ರಾಧ್ಯಾಪಕರು
ವಿಜಯ ಕಾಲೇಜು
ಪಾಂಡವಪುರ
Mobile: 7022173723

ಇತ್ತೀಚೆಗೆ ಮೈಸೂರು ಸಂತೆ ಎಂಬ ಶಾಪಿಂಗ್ ಉತ್ಸವದಲ್ಲಿ ಒಂದು ವಿಚಿತ್ರ ಪ್ರಸಂಗ ಎದುರಾಯಿತು. ಈ ತರಹದ ವ್ಯಾಪಾರ ಮಳಿಗೆಗಳ ಮೇಳ ನಡೆದಾಗಲೆಲ್ಲ ಸಾಮಾನ್ಯವಾಗಿ ವಿವಿಧ ವಿನ್ಯಾಸದ ಬಟ್ಟೆ, ಆಭರಣಗಳು, ಗೃಹ ಬಳಕೆಯ ವಸ್ತುಗಳು ಮತ್ತು ಮಕ್ಕಳ ಆಟಿಕೆಯ ವಸ್ತುಗಳನ್ನೊಳಗೊಂಡ ಸ್ಟಾಲ್‌ಗಳೇ ವಿಜೃಂಭಿಸುತ್ತಿರುತ್ತವೆ. ಜೊತೆಗೆ ಆಹಾರಮೇಳ ಹಾಗೂ ಎಲ್ಲೋ ಒಂದು ಮೂಲೆಯಲ್ಲಿ ಜನರಿಲ್ಲದೆ ಖಾಲಿ ಖಾಲಿ ಇರುವ ಪುಸ್ತಕಗಳ ಸ್ಟಾಲೂ ಸಾಮಾನ್ಯವಾಗಿರುತ್ತದೆ. ಇಂತಹುದೇ ಒಂದು ವ್ಯಾಪಾರ ಮಳಿಗೆಗಳ ಮೇಳ ಮೈಸೂರು ಸಂತೆ. ಇಂಥ ಸಂತೆಗಳಲ್ಲಿ ವಸ್ತುಗಳ ವ್ಯಾಪಾರಕ್ಕಿಂತ ಹಲವು ಬಗೆಯ ರಸಾಸ್ವಾದ ನೀಡಬಲ್ಲ ಆಹಾರ ಮಳಿಗೆಗಳೇ ಜನರಿಂದ ತುಂಬಿ ತುಳುಕುತ್ತಿರುತ್ತವೆ. ಇಷ್ಟಕ್ಕೂ ನಾವೆಲ್ಲ ಮಾಡುವುದು ಮೊದಲು ಹೊಟ್ಟೆಗಾಗಿ ಎಂದು ಕನಕದಾಸರೇ ಹೇಳಿಲ್ಲವೇ? ಇರಲಿ.

ಒಂದು ವಿಚಿತ್ರ ಪ್ರಸಂಗ ಎಂದೆನಲ್ಲ, ಅದರ ಬಗ್ಗೆ ಹೇಳ್ತೀನೆ ಕೇಳಿ. ನಾನು ಮೈಸೂರು ಸಂತೆಗೆ ಕೊನೇ ದಿನ ಸಂಜೆ ಹೋದಾಗ ನೂಕು ನುಗ್ಗಲು. ವ್ಯಾಪಾರ ಮಾಡುವುದು ಅಸಾಧ್ಯ ಎನ್ನುವಷ್ಟರ ಮಟ್ಟಿಗೆ ಜನಸಂದಣಿ. ಬೇಗ ಬೇಗ ಮುಂದೆ ಹೋಗಬೇಕೆಂದರೆ ದಾರಿ ಬಿಡದ, ಒಬ್ಬರಿಗೊಬ್ಬರು ಮೈತಾಕಿಸಿ ಗಂಡು, ಹೆಣ್ಣು, ಮಕ್ಕಳು ಎಂಬ ಭೇದವಿಲ್ಲದೆ ಸಂತೆಯಲ್ಲಿ ಕಳೆದುಹೋದ ಜನಜಂಗುಳಿ. ಹೇಗೋ ಕಷ್ಟಪಟ್ಟು ಜನಸಂದಣಿಯಿಂದ ಪಾರಾಗಿ ಮಳಿಗೆಗಳ ಕೊನೆಗೆ ಬಂದರೆ ಒಂದು ವಿಚಿತ್ರ ಹಾಗೂ ಅಚ್ಚರಿ ಕಾದಿತ್ತು. ಯಾರೋ ಕೂಗಿ ಕೂಗಿ ಏನೋ ಹೇಳುತ್ತಿದ್ದುದು ಕೇಳಿ, ಏನೆಂದು ನೋಡಲು ಹೋದೆ. ತಿದ್ದಿ ತೀಡಿದ ಗಡ್ಡ ಬಿಟ್ಟ, ಕಟ್ಟುಮಸ್ತಾಗಿಯಲ್ಲದಿದ್ದರೂ ಆಕರ್ಷಕ ಮುಖಭಾವವುಳ್ಳ, ರಂಗಭೂಮಿಯ ಕಲಾವಿದರಾದ ನಾಲ್ಕೈದು ತರುಣರು ಕೈಯ್ಯಲ್ಲಿ ಒಂದು ಪುಸ್ತಕ ಹಿಡಿದು, ‘ಈ ಪುಸ್ತಕ ಕೊಂಡು ಸಹಾಯ ಮಾಡಿ’ ಎಂದು ಅಲ್ಲಿ ನೆರೆದ ಜನರಲ್ಲಿ ವಿನಂತಿಸುತ್ತಿದ್ದರು. ಇದೇನು, ಹೀಗೆ ಪುಸ್ತಕ ಪ್ರಮೋಟ್ ಮಾಡ್ತಿದಾರಲ್ಲ ಎಂದುಕೊಳ್ಳುತ್ತಾ ಅವರ ಜೊತೆ ಸ್ವಲ್ಪ ಮಾತಿಗಿಳಿದೆ. ನಾನು ಹಾಕಿದ ಆ ಎಲ್ಲ ಅಡ್ಡ ಪ್ರಶ್ನೆಗಳಿಗೆ ತಾಳ್ಮೆಯಿಂದ ಅವರು ಉತ್ತರಿಸಿದಾಗಲೇ ನನಗನಿಸಿದ್ದು ಈ ಪ್ರಸಂಗವನ್ನು ಬರವಣಿಗೆಯಲ್ಲಿ ನಿರೂಪಿಸುವುದು ಸೂಕ್ತ ಎಂದು.



ನಾನು ಹೇಳಿದೆನಲ್ಲ. ರಂಗಭೂಮಿಯ ಕಲಾವಿದರಾದ ಈ ಯುವಕರು ತಮ್ಮ ಕೈಯ್ಯಲ್ಲಿ ಹಿಡಿದ ಪುಸ್ತಕವನ್ನು ಅವರಲ್ಲಿ ಒಬ್ಬರಾದ ಕೌಶಿಕ್ ರತ್ನ ಎನ್ನುವವರು ಬರೆದಿದ್ದು ಆ ಪುಸ್ತಕವೇ **“ನಿಧಿ”; ಕಥೆಗಳ ಕುಡಿಕೆ** ಎನ್ನುವ ಕಥಾ ಸಂಕಲನ. ಈ ಕಥಾ ಸಂಕಲನವನ್ನು ಮಾರಿ ಅದರಿಂದ ಬಂದ ಹಣದಿಂದ ಒಂದು ಸಿನೆಮಾ ಮಾಡಬೇಕೆನ್ನುವ ಮಹತ್ವಾಕಾಂಕ್ಷೆಯನ್ನು ಹೊಂದಿರುವುದಾಗಿ ಹೇಳಿದರು. ಹಾಗೆಯೇ ಈ ಕಥಾ ಸಂಕಲನದ ಕಥೆಗಳನ್ನು ಆಧರಿಸಿ ಅವರು ನಿರ್ಮಿಸಲು ಹೊರಟ ಆ ಸಿನೆಮಾದ ಹೆಸರೇ **‘ಇಲ್ಲೀಗಲ್’**. ಈಗಾಗಲೇ ಲಕ್ಷಾಂತರ ರೂಪಾಯಿ ಮೌಲ್ಯದ ಪುಸ್ತಕ ಮಾರಾಟವಾಗಿದ್ದು, ಈ ಪುಸ್ತಕ ಮಾರಾಟದಿಂದಲೇ ಬಂದ ಹಣದಿಂದ ಸಿನೆಮಾ ಮಾಡುವುದಾಗಿ ಭರವಸೆ ಹೊಂದಿದ್ದೇವೆ ಎಂದರು.

ಕೋಟಿ ಕೋಟಿ ಹಣ ಹೂಡುವ ಇಂದಿನ ಸಿನೆಮಾ, ಮನರಂಜನೆ, ಹಿಂಸಾ ವಿನೋದ ಹಾಗೂ ಭೀಬತ್ಸ ಎನ್ನಬಹುದಾದ ದೃಶ್ಯಗಳನ್ನೊಳಗೊಂಡು, ಯುವಕರನ್ನು ಉನ್ಮತ್ತಗೊಳಿಸಿ ಅವರಿಂದ ಸಿಳ್ಳೆ ಗಿಟ್ಟಿಸಿಕೊಂಡು ಹಣ ಮಾಡುವ ಬಹುಕೋಟಿ ಇಂಡಸ್ಟ್ರಿ ಆಗಿರುವುದು ನಮಗೆಲ್ಲ ಗೊತ್ತಿರುವ ವಿಚಾರ. ಆದರೆ ಪುಸ್ತಕ ಮಾರಿ ಬಂದ ಹಣದಿಂದ ಸಿನೆಮಾ ಮಾಡಬೇಕೆಂದುಕೊಂಡಿರುವುದು ನಿಜಕ್ಕೂ ಕನ್ನಡದ ಮಟ್ಟಿಗೆ ಒಂದು ಹೊಸ ಪ್ರಯೋಗ. ಓದುಗರ ಸಂಖ್ಯೆ ಗಣನೀಯವಾಗಿ ಕುಸಿಯುತ್ತಿರುವ ಈ ವಿಷಮ ದಿನಗಳಲ್ಲಿ ರಂಗಕರ್ಮಿ ಯುವಕರ ತಂಡವೊಂದು ಕಾಣುತ್ತಿರುವ ಈ ಬೃಹತ್ ಕನಸು ನನಸಾದರೆ ಕನ್ನಡ ಸಾಹಿತ್ಯ ಮತ್ತು ಸಿನೆಮಾ ರಂಗಕ್ಕೆರಡಕ್ಕೂ ಮೈಲಿಗಲ್ಲಾಗುವುದಂತೂ ಸತ್ಯ. ಇಂತಹ ಕನಸನ್ನು ಬೆಂಬಲಿಸುವುದೆಂದರೆ ಕನ್ನಡ ಭಾಷೆ ಹಾಗೂ ನಮ್ಮ ಸಂಸ್ಕೃತಿಯ ಬೇರುಗಳನ್ನು ಬೆಂಬಲಿಸಿದಂತೆ.

ಈ ಪುಸ್ತಕದಲ್ಲಿ ಒಟ್ಟು ಐದು ಕಥೆಗಳಿವೆ. ಅಲ್ಲದೆ ಸಿನೆಮಾ ಎಂಬ ಮಾಯಾಲೋಕಕ್ಕೆ ಕಾಲಿಟ್ಟು ಅಲ್ಲಿ ತಂತ್ರಜ್ಞರಾಗಿ, ನಟರಾಗಿ, ನಿರ್ದೇಶಕರಾಗಿ ಹಾಗೂ ನಿರ್ಮಾಪಕರಾಗಿ ಹೊಸ ರೀತಿಯ ಸಿನೆಮಾ ಮಾಡಬೇಕೆಂದು ಕನಸು ಕಾಣುತ್ತಿರುವ ಯುವ ರಂಗಕರ್ಮಿಗಳ ತಂಡದ ಒತ್ತಾಸೆಗಳಿವೆ. ಈ ಪುಸ್ತಕವನ್ನು ‘ಅವಕಾಶಗಳಿಗಾಗಿ, ನಿರ್ಮಾಪಕರಿಗಾಗಿ ಅಲೆದಾಡಿ ಅಲೆದಾಡಿ, ವಯಸ್ಸು ಗಡಿದಾಟಿ ಅವಶ್ಯಕತೆಗಳ, ಜವಾಬ್ದಾರಿಗಳ ಹೊರೆ ಹೊರಲಾರದಷ್ಟು ಭಾರವಾದಾಗ ತನ್ನೊಳಗಿದ್ದ ಕಲಾವಿದನನ್ನು ಕೊಲೆಗೈದು ಸ್ವಯಂ ಶಿಕ್ಷೆ ಅನುಭವಿಸುತ್ತಿರುವ ನಿರಪರಾಧಿಗಳಿಗೆ’ ಅರ್ಪಣೆ ಮಾಡಿದ್ದಾರೆ. ಹೀಗಿದ್ದರೂ ಸಿನೆಮಾ ಮಾಡಲೇಬೇಕೆನ್ನುವ ಹುಚ್ಚು ‘ಮದ್ದಿಲ್ಲದ ಕಾಯಿಲೆ’. ಈ ಕಾಯಿಲೆಯಿಂದ ವಾಸಿಯಾಗಲು ‘ಇಲ್ಲೀಗಲ್’ ಚಿತ್ರತಂಡದವರು ಕರ್ನಾಟಕದ ಹಲವು ಭಾಗಗಳಿಗೆ ಹೋಗಿ ಕಥೆ ಹೇಳುವ ಅಜ್ಜ–ಅಜ್ಜಿಯರನ್ನು ಹುಡುಕುವ ಅನನ್ಯ ಕೆಲಸ ಮಾಡಿದ್ದಾರೆ. ಹಾಗಾಗಿಯೇ ಈ ಕಥೆಗಳನ್ನು ಕೌಶಿಕ್ ರತ್ನ ಬರೆದಿದ್ದರೂ ಆ ಎಲ್ಲ ಕಥಾವಸ್ತುಗಳು ನಮ್ಮ ಸಂಸ್ಕೃತಿಯ ಬೇರುಗಳಂತಿರುವ ಅಜ್ಜ–ಅಜ್ಜಿಯರು ಹೇಳಿದ ಕಥಾ ಪ್ರಸಂಗಗಳು.

ಹೀಗೆ ಅಜ್ಜ–ಅಜ್ಜಿಯರಿಂದ ಕೇಳಲ್ಪಟ್ಟ ಈ ಕಥೆಗಳನ್ನು ಸಿನೆಮಾ ರಂಗಕ್ಕೆ ಹಾಗೂ ರಂಗಭೂಮಿಗೆ ಸೂಕ್ತವಾಗುವಂತೆ ನಿರೂಪಿಸಿ ಭಿನ್ನ ರೀತಿಯಲ್ಲಿ ಹೇಳುವ ಪ್ರಯತ್ನ ಇದಾಗಿದೆ. ‘ಮನದಾಳದಿಂದ ಮಾನವನಿಗೊಂದು ಪತ್ರ’, ‘ಬುದ್ಧಿವಂತ ಭಕ್ತ’, ‘ನಯನ ಸುಂದರಿ’, ‘ಯಾರ್ ಗಟ್ಟಿ’...?, ‘ಸಾವಿತ್ರಿ ಸೂಳೆಯಲ್ಲ ಸೀತೆ’ – ಐದು ಕಥೆಗಳನ್ನೊಳಗೊಂಡ ಈ ಸಂಕಲನ ಮನ ಮುಟ್ಟುವ ಪಾತ್ರಚಿತ್ರಣದೊಂದಿಗೆ ಓದುಗರ ಅಂತರಾಳವನ್ನು ಕಲಕುತ್ತದೆ. ಕಥಾವಸ್ತುವಿನ್ಯಾಸ, ಪಾತ್ರಗಳು ಆಡುವ ಪ್ರಾದೇಶಿಕ ಭಾಷೆಯ ಸೊಗಡು ಹಾಗೂ ಹಾಸ್ಯಮಯವಾದ ನಿರೂಪಣೆ ಕಥೆಗಳನ್ನು ಬಿಡದಂತೆ ಓದಿಸಿಕೊಂಡು ಹೋಗುತ್ತವೆ. ದುರಾಸೆಯಿಂದ ಜಗದ ವಾಸನೆಗಳ ಬೆನ್ನು ಹತ್ತಿ ಕಂಗಾಲಾದ ಮನಸ್ಸನ್ನು ನಿಶ್ಚಲಗೊಳಿಸಿ ತುಸು ಸಾಂತ್ವನ ಹೇಳುವ ಕಥೆಯೊಂದಾದರೆ, ನಮ್ಮ ಕಲ್ಪನಾ ಜಗತ್ತನ್ನು ವಿಸ್ತರಿಸಿ ವಾಸ್ತವಿಕ ಜಗತ್ತಿನ ಸತ್ಯಶೋಧಕ್ಕಾಗಿ ದಂತಕಥೆಗಳ ಪ್ರಸ್ತುತತೆಯನ್ನು ಹೇಳುವುದು ಇನ್ನೊಂದು. ಪವಿತ್ರ ಪ್ರೀತಿಯ ಗರ್ಭಗುಡಿಯಲ್ಲಿ ಪ್ರಿಯಕರನನ್ನು ಆರಾಧಿಸುವ ನಿರ್ಮಲ ಮನಸ್ಸಿನ ಹೆಣ್ಣು ಪಾತ್ರವೊಂದು ತನ್ನವನ ಒಲವ ಬಯಸಿ ಹಾತೊರೆದರೆ, ಆತನ ಕಾಮದ ಕಣ್ಣಿಗೆ ಕಾಣಿಸುವುದು ‘ಅಂದವಾಗಿ ಕೆತ್ತಿದ ಅವಳ ದೇಹವೆಂಬ ದೇವಸ್ಥಾನ’ ಮಾತ್ರ. ನಾವು ಸೃಷ್ಟಿಸಿರುವ ಸ್ಪರ್ಧಾಲೋಕದ ಸ್ಪರ್ಧೆಗಳಲ್ಲಿ ಕಾದಾಡಿ ಪಡೆಯುವ ರೋಚಕ ಗೆಲುವುಗಳ ಬಾಲಿಶತನವನ್ನು ತಮಾಷೆಯಂತೆ ಕಂಡು, ಸ್ಪರ್ಧೆಯ ಹೊರಗೇ ಉಳಿದು ನಮ್ಮ ಭ್ರಮಾಲೋಕವನ್ನು ಛಿದ್ರಗೊಳಿಸುವ ಜನಪದ ಪಾತ್ರಚಿತ್ರಣಗಳು ಸಮಕಾಲೀನ ಬದುಕಿನ ಟೊಳ್ಳುತನವನ್ನು ಬಯಲಿಗೆಳೆಯುತ್ತವೆ. ಹೀಗೆ ಹಲವು ಹತ್ತು ಪಾತ್ರಗಳು ಹಾಗೂ ಘಟನೆಗಳನ್ನೊಳಗೊಂಡ ಈ ಕಥಾ ನಿರೂಪಣೆ ನಿಜಕ್ಕೂ ಅನನ್ಯ.

ಈ ಕಥೆಗಳನ್ನಿಟ್ಟುಕೊಂಡು ‘ಇಲ್ಲೀಗಲ್’ ಸಿನೆಮಾ ನಿರ್ಮಿಸಲು ಹೊರಟ ರಂಗಕರ್ಮಿ ತಂಡಕ್ಕೆ ಭರಪೂರ ಲೀಗಲ್ ನಿಧಿ ದೊರಕಿ ಅತ್ಯುತ್ತಮವಾದ ಸಿನೆಮಾ ಮೂಡಿ ಬರಲಿ. ಹೀಗೆ ನಿರ್ಮಿತವಾದ ಸಿನೆಮಾ ನೂರು ದಿನಗಳ ಕಾಲ ತೆರೆ ಕಂಡು ರಂಗಕರ್ಮಿಗಳ ಬಾಳಿಗೆಲ್ಲ ಬೆಳಕಾಗುವಂತಾಗಿ ಕನ್ನಡ ಸಿನೆಮಾರಂಗ ಹೊಸ ಮೈಲಿಗಲ್ಲು ಸೃಷ್ಟಿಸುವಂತಾಗಲಿ ಎಂದು ಆಶಿಸೋಣ. ಹಾಗೆಯೇ ಕನ್ನಡಿಗರಾದ ನಾವೆಲ್ಲ ಈ ಪುಸ್ತಕವನ್ನು ಮುದ್ದಾಮಾಗಿ ಕೊಂಡು ಓದೋಣ.

ಬಿಜೆಪಿ ಅವಧಿಯಲ್ಲಿ ಬಿಬಿಎಂಪಿಯಲ್ಲಿ 3 ಸಾವಿರ ಕೋಟಿಯ ಹಗರಣ

ನ್ಯಾ. ಎಚ್.ಎನ್.ನಾಗಮೋಹನ್ ದಾಸ್ ಆಯೋಗವು ಸರಕಾರಕ್ಕೆ ಸಲ್ಲಿಸಿದ್ದ ವರದಿಯಲ್ಲಿ ಮಾಹಿತಿ

ಬೆಂಗಳೂರು, ಸೆ.5–ಬಿಜೆಪಿ ಸರಕಾರದ ಆಡಳಿತಾವಧಿಯಲ್ಲಿ ಬಿಬಿಎಂಪಿಯ 761 ಕಾಮಗಾರಿಗಳಲ್ಲಿ3,049.35 ಕೋಟಿ ರೂ.ಗಳ ಬೃಹತ್ ಹಗರಣ ನಡೆದಿದೆ ಎಂದು ನ್ಯಾ. ಎಚ್.ಎನ್.ನಾಗಮೋಹನ್ ದಾಸ್ ವಿಚಾರಣಾ ಆಯೋಗವು ಸರಕಾರಕ್ಕೆ ಸಲ್ಲಿಸಿದ್ದ ವರದಿಯನ್ನು ಸಚಿವ ಸಂಪುಟ ಗುರುವಾರ ಅಂಗೀಕರಿಸಿದೆ. ಪಾಲಿಕೆ ವ್ಯಾಪ್ತಿಯಲ್ಲಿ2019–20 ರಿಂದ 2022–23ರವರೆಗಿನ ವಿವಿಧ ಅಭಿವೃದ್ಧಿ ಕಾಮಗಾರಿಗಳಲ್ಲಿ ಅಕ್ರಮ ನಡೆದಿರುವ ಆರೋಪ ಕೇಳಿ ಬಂದಿದ್ದ ಹಿನ್ನೆಲೆಯಲ್ಲಿ ರಾಜ್ಯ ಸರಕಾರವು ವಿಚಾರಣೆಗೆ 2023ರ ಅಕ್ಟೋಬರ್‌ನಲ್ಲಿ ನಾಗಮೋಹನ್ ದಾಸ್ ಆಯೋಗವನ್ನು ರಚಿಸಿತ್ತು. ಆಯೋಗವು ಪಾಲಿಕೆ ಕಾಮಗಾರಿಗಳಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳು ಹಾಗೂ ನ್ಯೂನತೆಗಳ ಕುರಿತು ವಿಸ್ತೃತ ತನಿಖೆ ನಡೆಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆ.30 ರಂದು 8,900 ಪುಟಗಳ ವರದಿ ಸಲ್ಲಿಸಿತ್ತು.

ಘನತ್ಯಾಜ್ಯ ನಿರ್ವಹಣೆ, ರಸ್ತೆ ಅಭಿವೃದ್ಧಿ ಕಾಮಗಾರಿ ಮತ್ತು ಒಎಫ್‌ಸಿ ಕೇಬಲ್ ಅಳವಡಿಕೆಗೆ ಅನುಮತಿ, ಬೃಹತ್ ನೀರು ಕಾಲುವೆ ಕಾಮಗಾರಿ ಮತ್ತು ಕೇಂದ್ರ ವಲಯ ನಗರ ಯೋಜನೆ ವಿಭಾಗಗಳಲ್ಲಿ ನಕ್ಷೆ ಮಂಜೂರಾತಿ ಹಾಗೂ ಸ್ವಾಧೀನಾನುಭವ ಪತ್ರ(ಒ.ಸಿ) ನೀಡಿಕೆ, ಕೆರೆ ಅಭಿವೃದ್ಧಿ ಮತ್ತು ಸ್ಮಾರ್ಟ್ ಸಿಟಿ ಯೋಜನೆ ಹಾಗೂ ವಾರ್ಡ್ ಮಟ್ಟದ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರ, ನ್ಯೂನತೆಗಳನ್ನು ಒಟ್ಟಾರೆ 4 ಸಂಪುಟಗಳ ತನಿಖಾ ವರದಿಯಲ್ಲಿ ವಿಸ್ತೃತವಾಗಿ ಹೇಳಲಾಗಿದೆ.

ಅಕ್ರಮದಲ್ಲಿ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಭಾಗಿಯಾಗಿದ್ದಾರೆ. ಈ ತಪ್ಪಿತಸ್ಥ ಅಧಿಕಾರಿಗಳು, ಎಂಜಿನಿಯರ್‌ಗಳು, ಲೆಕ್ಕ ಶಾಖೆ ಸಿಬ್ಬಂದಿ, ಯೋಜನಾ ಸಮಾಲೋಚಕರು, ಗುತ್ತಿಗೆದಾರರು ಹಾಗೂ ಕಾಮಗಾರಿಗಳ ಅನುಷ್ಠಾನ ಪ್ರಕ್ರಿಯೆಯಲ್ಲಿ ನಿಯಮಬಾಹಿರವಾಗಿ ನಡೆದುಕೊಂಡಿರುವ ಇತರರ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಆಯೋಗವು ಶಿಫಾರಸು ಮಾಡಿದೆ. ಅಲ್ಲದೆ, ಈ ಅಕ್ರಮಗಳಲ್ಲಿ ಭಾಗಿಯಾಗಿರುವ ಅಧಿಕಾರಿಗಳು, ಎಂಜಿನಿಯರ್‌ಗಳು ಹಾಗೂ ಲೆಕ್ಕ ಶಾಖೆ ಸಿಬ್ಬಂದಿಯು ಬೇರೆ ಇಲಾಖೆಗೆ ವರ್ಗಾವಣೆಯಾಗಿದ್ದರೆ ಅಥವಾ ಸೇವೆಯಿಂದ ನಿವೃತ್ತಿಯಾಗಿದ್ದರೆ ಅವರ ವಿರುದ್ಧವೂ ಶಿಸ್ತುಕ್ರಮ ಜರುಗಿಸುವಂತೆ ಆಯೋಗವು ಹೇಳಿದೆ. ಅಲ್ಲದೆ, ಆಯೋಗವು ಅಕ್ರಮಗಳ ಪೂರ್ವಾಪರ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮಕ್ಕೆ ಶಿಫಾರಸಿನ ಜತೆಗೆ ಅಕ್ರಮಗಳ ತಡೆಗೆ ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ಸುಧಾರಣಾ ರೂಪದ ಸಲಹೆಗಳನ್ನೂ ನೀಡಿದೆ.

ಮದರ್ ಮೇರಿಯವರ ಪವಿತ್ರ ಹಬ್ಬ

ಮೈಸೂರು,ಸೆ.5(ಪಿಎಂ)– ಮೈಸೂರಿನ ಯಾದವಗಿರಿಯ ಸೇಕ್ರೆಡ್ ಹಾರ್ಟ್ ಚರ್ಚ್‌ನಲ್ಲಿ ಸೆ.8ರಂದು ಮದರ್ ಮೇರಿಯವರ ಪವಿತ್ರ ಹಬ್ಬ ಹಮ್ಮಿಕೊಳ್ಳಲಾಗಿದೆ. ಫಾದರ್ ಎ.ರೋಹನ್, ನಿರ್ಮಲಾ ಕಾನ್ವೆಂಟ್ ಹಾಗೂ ಪ್ಯಾರಿಷ್ ಸಮಿತಿ ಸಂಯುಕ್ತಾಶ್ರಯದಲ್ಲಿ ಮದರ್ ಮೇರಿಯವರ ಪವಿತ್ರ ಹಬ್ಬ ನಡೆಯಲಿದೆ.



ಅಂದು ಸಂಜೆ 5.15ಕ್ಕೆ ಹೋಲಿ ರೋಸರಿ ನಡೆಯಲಿದ್ದು, ಬಳಿಕ ಸಂಜೆ 5.30ಕ್ಕೆ ಪ್ರಾರ್ಥನೆ ನಡೆಯಲಿದೆ. ಜೊತೆಗೆ ಶ್ರೀರಂಗಪಟ್ಟಣದ ಕ್ಸೇವಿಯರ್ ಸದನ್‌ನ ಫಾದರ್ ಎಡ್ವಿನ್ ಫಿಲಿಪ್ ಅವರ ನೇತೃತ್ವದಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಲಿದೆ. ಅಲ್ಲದೆ, ಸಾಮೂಹಿಕ ಮೆರವಣಿಗೆಯೂ ನಡೆಯಲಿದೆ. ಅಲ್ಲದೆ, 9 ದಿನಗಳ ಕಾಲ 9 ಪಾದ್ರಿಗಳಿಂದ ನೊವೆನಾ ಪ್ರಾರ್ಥನೆ ಹಮ್ಮಿಕೊಳ್ಳಲಾಗಿದೆ.

ಪೊಲೀಸ್ ಬ್ಯಾಂಡ್ ಸ್ಥಳಾವಕಾಶ ಮಾರ್ಪಾಡಿಗೆ ಚಿಂತನೆ



ಮೈಸೂರು ಅರಮನೆ ಮುಂದೆ ನವರಾತ್ರಿ ವೇಳೆ ನಡೆಯುವ ಪೊಲೀಸ್ ಬ್ಯಾಂಡ್ ವಾದನ ಸ್ಥಳಾವಕಾಶದಲ್ಲಿ ಮಾರ್ಪಾಡು ಮಾಡಲು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಸೂಚಿಸುವುದರೊಂದಿಗೆ ಡಿಸಿಪಿ ಆರ್.ಎನ್.ಬಿಂದುಮಣಿ ಅವರೊಂದಿಗೆ ಸ್ಥಳ ಪರಿಶೀಲಿಸಿದರು.

ಮೈಸೂರು,ಸೆ.5(ಎಂಟಿವೈ)– ನವರಾತ್ರಿ ವೇಳೆ ಮೈಸೂರು ಅರಮನೆ ಮುಂದೆ ಮೊದಲಿನಿಂದಲೂ ನಡೆಯುತ್ತಿರುವ ಪೊಲೀಸ್ ಬ್ಯಾಂಡ್ ಸ್ಥಳ ಬದಲಾವಣೆ ಮೂಲಕ ಹೆಚ್ಚು ಮಂದಿ ವೀಕ್ಷಣೆಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಲಾಗಿದೆ.

ಅರಮನೆ ಮುಂದೆ ಮೈಸೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಪೊಲೀಸ್ ಬ್ಯಾಂಡ್ ವಾದನ ತಂಡಗಳು ಆಗಮಿಸಿ, ಏಕಕಾಲದಲ್ಲಿ ಬ್ಯಾಂಡ್ ನುಡಿಸುವ ಸಂಪ್ರದಾಯವಿದೆ. ಸುಮಾರು 700ಕ್ಕೂ ಹೆಚ್ಚು ಮಂದಿ ಒಂದೇ ತಂಡವಾಗಿ ವಾದನದಲ್ಲಿ ಪಾಲ್ಗೊಳ್ಳಲಿದ್ದಾರೆ. ಅರಮನೆ ಮುಂಭಾಗದ ಆವರಣದಲ್ಲಿ ಈ ಹಿಂದೆ ಪೊಲೀಸ್ ಬ್ಯಾಂಡ್ ಪ್ರದರ್ಶನವಿತ್ತು ಈ ವೇಳೆ ಅಪಾರ ಸಂಖ್ಯೆಯ ಜನರು ಆಗಮಿಸುತ್ತಿದ್ದರಾದರೂ ಸಮೀಪದಿಂದ ನೋಡುವ ಅವಕಾಶ ಸಿಗುತ್ತಿತ್ತು. ಈ ಹಿನ್ನೆಲೆಯಲ್ಲಿ ಬ್ಯಾಂಡ್ ವಾದನವನ್ನು ಎರಡೂ ಬದಿಯಿಂದಲೂ ಜನ ವೀಕ್ಷಿಸುವ ಅವಕಾಶ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಬ್ಯಾಂಡ್ ವಾದನದ ಸ್ಥಳಾವಕಾಶದಲ್ಲಿ ಮಾರ್ಪಾಡು ಮಾಡುವಂತೆ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸಲಹೆ ನೀಡಿದ್ದು, ಇನ್ನೆರಡು ದಿನದಲ್ಲಿ ಮಾಹಿತಿ ನೀಡುವಂತೆ ಸೂಚಿಸಿದ್ದಾರೆ.

ದಸರಾಗೆ ಭರದ ಸಿದ್ಧತೆ : ಮೈಸೂರು ದೊರೆಗಳ ಪ್ರತಿಮೆ ಸ್ವಚ್ಛತೆ; ಬಣ್ಣ ಬಳಿಯುವ ಕಾರ್ಯ

ಮೈಸೂರು, ಸೆ.5(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವಕ್ಕೆ ಕೇವಲ 17 ದಿನ ಮಾತ್ರ ಇರುವುದರಿಂದ ಸಿದ್ಧತಾ ಕಾರ್ಯ ಭರದಿಂದ ಸಾಗಿದೆ. ಮೈಸೂರಿನ ವಿವಿಧ ವೃತ್ತಗಳಿಗೆ ಬಣ್ಣ ಬಳಿಯುವ ಕಾರ್ಯ ಎಲ್ಲೆಡೆ ನಡೆದಿದೆ.

ಅರಮನೆ ಸಮೀಪವಿರುವ ಕೃಷ್ಣರಾಜ, ಚಾಮರಾಜ, ಜಯಚಾಮರಾಜೇಂದ್ರ ವೃತ್ತದ ಮಹಾರಾಜ ಪ್ರತಿಮೆ ಸ್ವಚ್ಛತೆ ಹಾಗೂ ವೃತ್ತಗಳಿಗೆ ಬಣ್ಣ ಬಳಿಯುವ ಕಾರ್ಯ ಆರಂಭಿಸಲಾಗಿದೆ. ಈಗಾಗಲೇ ಕಳೆದ ಎರಡು ದಿನಗಳಿಂದ ವೃತ್ತಗಳ ಸ್ವಚ್ಛತಾ ಕಾರ್ಯ ನಡೆಯುತ್ತಿದ್ದು, ಕೆ.ಆರ್.ವೃತ್ತದ ಮೇಲ್ಭಾಗದ ಗೋಪುರ ಭಾಗಕ್ಕೆ ಸಂಪ್ರದಾಯದಂತೆ ಈ ಹಿಂದೆ ಇದ್ದ ಬಣ್ಣವನ್ನೇ ಬಳಿಯಲಾಗುತ್ತಿದ್ದು, ಇನ್ನೆರಡು ದಿನದಲ್ಲಿ ಕೆ.ಆರ್. ವೃತ್ತ ಕಂಗೊಳಿಸಲಿದೆ. ಚಾಮರಾಜ ಹಾಗೂ ಜಯಚಾಮರಾಜ ಒಡೆಯರ್ ವೃತ್ತದಲ್ಲಿ ಸ್ವಚ್ಛತಾ ಕಾರ್ಯ ಪೂರ್ಣಗೊಂಡಿದ್ದು, ದೀಪಾಲಂಕಾರ ಮಾಡಲಾಗುತ್ತಿದೆ ಮೈಸೂರು ರಾಜವಂಶಸ್ಥರ ಪ್ರಮುಖ ಮೂವರು ದೊರೆಗಳ ಪ್ರತಿಮೆ ಇರುವ ಈ ಮೂರು ವೃತ್ತಗಳಿಗೂ ದಸರಾ ಸಂಭ್ರಮ ಕಳೆಕಟ್ಟುವಂತೆ ಸಿದ್ಧತೆ ಮಾಡಲಾಗುತ್ತಿದೆ.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಸ್ಮಾರಕವನ್ನಾಗಿ ಮಧುವನ ಅಭಿವೃದ್ಧಿಪಡಿಸಿ

ರಾಜ್ಯ ಸರ್ಕಾರಕ್ಕೆ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಒತ್ತಾಯ




ಮೈಸೂರು,ಸೆ.5(ಪಿಎಂ)–ಮೈಸೂರು–ನಂಜನಗೂಡು ರಸ್ತೆಯಲ್ಲಿರುವ ಮೈಸೂರು ರಾಜವಂಶಸ್ಥರ ಸಮಾಧಿಗಳಿರುವ ಮಧುವನವನ್ನು ಸ್ಮಾರಕವನ್ನಾಗಿ ಅಭಿವೃದ್ಧಿಪಡಿಸಬೇಕೆಂದು ರಾಜ್ಯ ಸರ್ಕಾರವನ್ನು ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಒತ್ತಾಯಿಸಿದ್ದಾರೆ.

ಮೈಸೂರು ರಾಜ್ಯವನ್ನು ಪ್ರಪಂಚದಲ್ಲಿಯೇ ಮಾದರಿ ರಾಜ್ಯವನ್ನಾಗಿ ಮೈಸೂರು ಮಹಾರಾಜರು ನಿರ್ಮಿಸಿದ್ದಾರೆ. ಅವರ ಇತಿಹಾಸವನ್ನು ಭವಿಷ್ಯದ ಪ್ರಜೆಗಳಿಗೆ ತಿಳಿಸಲು ಮಧುವನವನ್ನು ಸ್ಮಾರಕವಾಗಿ ನಿರ್ಮಿಸುವುದು ಸರ್ಕಾರದ ಆದ್ಯ ಕರ್ತವ್ಯ. ಮೈಸೂರು ಅಭಿವೃದ್ಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾವಿರಾರು ಕೋಟಿ ರೂ. ಅನುದಾನ ನೀಡಿದ್ದಾರೆ. ಅವರು ಮುಖ್ಯಮಂತ್ರಿಯಾಗಿರುವಾಗಲೇ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸೇರಿದಂತೆ ಮೈಸೂರು ಅರಸರ ಐತಿಹಾಸಿಕ, ಸಾರ್ಥಕ ಮತ್ತು ಸಮಾಜಮುಖಿ ಜೀವನದ ಬಗ್ಗೆ ಬೆಳಕು ಚೆಲ್ಲಲು ಸ್ಮಾರಕ ನಿರ್ಮಿಸಬೇಕು.

ಜನಪರ, ಜೀವಪರವಾದ ಆಡಳಿತ ನಡೆಸಿದ ಮೈಸೂರು ಅರಸರ ಬಗ್ಗೆ ಯುವಜನತೆಗೆ ತಿಳಿಸುವ ಅವಶ್ಯಕತೆ ಇದೆ. ನಾಲ್ವಡಿಯವರ ಸಮಾಧಿಯನ್ನು ಅಭಿವೃದ್ಧಿಪಡಿಸಬೇಕು. ಮೈಸೂರು ಅರಸರ ಕೊಡುಗೆಗಳನ್ನು ಸ್ಮರಿಸಲು ಸ್ಮಾರಕ ನಿರ್ಮಿಸಬೇಕು. ಸ್ವಾತಂತ್ರ್ಯ ಪೂರ್ವದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಶೋಷಿತ ಸಮುದಾಯಗಳಿಗೆ ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಕಲ್ಪಿಸಿದರು. ಅದಕ್ಕಾಗಿ ಮಿಲ್ಲರ್ ಆಯೋಗ ರಚಿಸಿದ್ದ ಅವರು ಮೀಸಲಾತಿ ಹರಿಕಾರರಾದರು. ಕೃಷ್ಣರಾಜ ಸಾಗರ ಕಟ್ಟಲು ಅಂದಿನ ಮುಂಬಯಿ ಸರ್ಕಾರಕ್ಕೆ ಚಿನ್ನ ಅಡವಿಟ್ಟು ಕೆಆರ್‌ಎಸ್ ಕಟ್ಟಿದರು. ನಾಲ್ವಡಿ ಅವರ ಹುಟ್ಟುಹಬ್ಬವನ್ನು ಶೋಷಿತ ವರ್ಗಗಳ ದಿನವಾಗಿ ಆಚರಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಶ್ರೀಗಳಿಂದ ಆಶೀರ್ವಾದ



ತಲಕಾಡು ಶ್ರೀ ಬಾಲಕೃಷ್ಣಾನಂದ ಮಹಾಸಂಸ್ಥಾನದ ಪೀಠಾಧಿಪತಿಗಳಾದ ಶ್ರೀ ಗೋವಿಂದಾನಂದ ಸರಸ್ವತಿ ಮಹಾಸ್ವಾಮಿಗಳವರ 17ನೇ ಚಾತುರ್ಮಾಸ್ಯ ಅಂಗವಾಗಿ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಶ್ರೀಗಳನ್ನು ಭೇಟಿ ಮಾಡಿ ಗೌರವಿಸಿ, ಆಶೀರ್ವಾದ ಪಡೆದರು. ಈ ವೇಳೇ ಶ್ರೀ ಮಠದ ಸುಹಾಸ್ ಶಾಸ್ತ್ರೀ, ವಾಸುಕಿ ವಾದ್ಯಾರ್ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ ರಾಜ್ಯ ಜಂಟಿ ಕಾರ್ಯದರ್ಶಿ ಎಂ.ಆರ್ ಬಾಲಕೃಷ್ಣ, ಟಿ.ಎಸ್ ಅರುಣ್, ಅಗಸ್ತ್ಯ ಸೊಸೈಟಿ ನಿರ್ದೇಶಕರಾದ ಎಚ್.ಪಿ ಚೇತನ್ ಉಪಸ್ಥಿತರಿದ್ದರು.

ದಲಿತ ಸಮುದಾಯದ ಧೀಮಂತ ನಾಯಕ ಅಯ್ಯನ್ ಕಾಳಿ

ಮೈಸೂರು ವಿವಿ ಪ್ರಾಧ್ಯಾಪಕ ಡಾ.ಚಂದ್ರಮೌಳಿ ಸ್ಮರಣೆ



ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಅಯ್ಯನ್ ಕಾಳಿಯವರ ಜಯಂತಿ ಕಾರ್ಯಕ್ರಮದಲ್ಲಿ ಡಾ.ಅಂಬೇಡ್ಕರ್ ಹಾಗೂ ಅಯ್ಯನ್ ಕಾಳಿಯವರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಲಾಯಿತು.

ಮೈಸೂರು,ಸೆ.5(ಪಿಎಂ)–ಕೇರಳದಲ್ಲಿ ಅಸ್ಪೃಶ್ಯತೆ ವಿರುದ್ಧ ಸಾಮಾಜಿಕ ಕ್ರಾಂತಿ ಮಾಡಿದ ದಲಿತ ಸಮುದಾಯದ ಧೀಮಂತ ನಾಯಕ ಅಯ್ಯನ್ ಕಾಳಿ ಎಂದು ಮೈಸೂರು ವಿವಿ ಸಮಾಜಕಾರ್ಯ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಚಂದ್ರಮೌಳಿ ಸ್ಮರಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಭೀಮ ಬಲ ಬಳಗ ಸಂಘಟನೆ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ ಅಸ್ಪೃಶ್ಯ ಸಮುದಾಯದ ಅಪ್ರತಿಮ ಹೋರಾಟಗಾರ ಮತ್ತು ದಲಿತರ ಶಿಕ್ಷಣಕ್ಕಾಗಿ ಜೀವನವನ್ನೇ ಪಣಕ್ಕಿಟ್ಟ ಕ್ರಾಂತಿಕಾರಿ ಶ್ರೀ ಅಯ್ಯನ್ ಕಾಳಿಯವರ 162ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅಯ್ಯನ್ ಕಾಳಿಯವರ ಕುರಿತು ಅವರು ಮಾತನಾಡಿದರು.

ಅಯ್ಯನ್ ಕಾಳಿಯವರ ಕಾಲಘಟ್ಟ 1863ರಿಂದ 1941. ಆ ಕಾಲದಲ್ಲಿ ದಲಿತ ಸಮುದಾಯವರ ಬದುಕು ಪ್ರತಿನಿತ್ಯ ಹೀನಾಯ ಪರಿಸ್ಥಿತಿಯಲ್ಲಿತ್ತು ಇಡೀ ಭಾರತದಲ್ಲಿ ಇರುವಂತೆಯೇ ಕೇರಳದಲ್ಲಿಯೂ ಅಸ್ಪೃಶ್ಯತೆ ತಾಂಡವವಾಡುತ್ತಿತ್ತು. ದಲಿತರನ್ನು ಜೀತದಾಳುಗಳಾಗಿ ಮಾರಾಟ ಮಾಡುವ ಹೀನಾಯ ಸ್ಥಿತಿ ಇತ್ತು ಯಾವುದೇ ಸಾರ್ವಜನಿಕ ಸ್ಥಳ, ಕಚೇರಿಗಳಿಗೆ ದಲಿತರಿಗೆ ಪ್ರವೇಶ ನಿರ್ಬಂಧ ವಿಧಿಸಲಾಗಿತ್ತು. ಹೀಗೆ ನಿಕೃಷ್ಟವಾಗಿ ಕಾಣುವ ವ್ಯವಸ್ಥೆ ವಿರುದ್ಧ ಪ್ರಬಲ ಹೋರಾಟ ಮಾಡಿ ಹರಿಜನ ರಾಜ ಎಂದು ಕರೆಸಿಕೊಂಡವರು ಅಯ್ಯನ್ ಕಾಳಿ ಎಂದರು.

19ನೇ ಶತಮಾನದ ಮಧ್ಯ ಭಾಗದಲ್ಲಿ ಸಮಾಜ ಸುಧಾರಣೆಗಾಗಿ ಕೇರಳದಲ್ಲಿ ಹೋರಾಟ ಮಾಡಿದವರಲ್ಲಿ ಅಯ್ಯನ್‌ಕಾಳಿ ಪ್ರಮುಖರು. ಕೇರಳದ ತಿರುವನಂತಪುರದ ವೆಂಗನೂರು ಗ್ರಾಮದಲ್ಲಿ ಅವರು ಜನಿಸಿದರು. ಅವರು ತಮ್ಮ 12ನೇ ವಯಸ್ಸಿನಲ್ಲಿ ಜಾತಿ ಕಾರಣಕ್ಕೆ ಅಪಮಾನ ಅನುಭವಿಸಿದ್ದರು. ಇದು ಅವರ ಮನಸ್ಸಿಗೆ ಅತ್ಯಂತ ನೋವು ತಂದಿತ್ತು. ಈ ಹಿನ್ನೆಲೆಯಲ್ಲಿ ಅವರಲ್ಲಿ ಕ್ರಾಂತಿಕಾರ ಮನೋಭಾವ ಬೆಳೆಯಿತು ಎಂದು ತಿಳಿಸಿದರು.

1893ರಲ್ಲಿ ಅಸ್ಪೃಶ್ಯ ಸಮುದಾಯ ಪ್ರವೇಶಿಸಲು ನಿಷೇಧವಿದ್ದ ಊರಿನ ಪ್ರಮುಖ ರಸ್ತೆಗಳಲ್ಲಿ ಎತ್ತಿನಗಾಡಿ ಪ್ರಯಾಣದ ಚಳುವಳಿ ಮಾಡಿದರು. ಇದಕ್ಕೆ ಭಾರೀ ವಿರೋಧ ವ್ಯಕ್ತವಾದರೂ ಲೆಕ್ಕಿಸದೇ ಧೈರ್ಯವಾಗಿ ಹೋರಾಟ ನಡೆಸಿದರು. 1904ರ ವೇಳೆಗೆ ದಲಿತರ ಶಿಕ್ಷಣಕ್ಕಾಗಿ ಶಾಲೆ ನಿರ್ಮಿಸಿದರು. ಮಣ್ಣಿನ ಗೋಡೆ ಹಾಗೂ ತೆಂಗಿನ ಗಿರಿ ಮೂಲಕ ನಿರ್ಮಿಸಿದ್ದ ಶಾಲೆಗೆ ನಾಲ್ಕು ಬಾರಿ ಬೆಂಕಿ ಹಾಕುತ್ತಾರೆ. ಐದನೇ ಬಾರಿಗೆ ದಾಳಿಗೆ ಬಂದವರಿಗೆ ಸರಿಯಾಗಿ ಏಟುಗಳನ್ನು ಕೊಟ್ಟು ಕಾಲ್ಕಿತ್ತುವಂತೆ ಮಾಡಿದರು ಎಂದರು.

ನಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳದಿದ್ದರೆ ನಿಮ್ಮ ಜಮೀನಿನಲ್ಲಿ ಬೆಳೆ ಬದಲು ಕಳೆ ಬೆಳೆಯುತ್ತದೆ ಎಂದು ಮೇಲ್ಜಾತಿಯವರಿಗೆ ಎಚ್ಚರಿಕೆ ನೀಡಿದ್ದರು. 1906ರಲ್ಲಿ ಅಲ್ಲಿನ ಸರ್ಕಾರ ಅಸ್ಪೃಶ್ಯ ಸಮುದಾಯದ ಮಕ್ಕಳಿಗೆ ಪ್ರತ್ಯೇಕ ಶಾಲೆ ಆರಂಭಿಸಲು ನಿರ್ಧರಿಸಿದಾಗ, ಎಲ್ಲರೂ ಓದುವ ಶಾಲೆಯಲ್ಲಿಯೇ ನಮ್ಮ ಮಕ್ಕಳು ಓದಬೇಕೆಂದು ಪಟ್ಟು ಹಿಡಿದಿದ್ದರು. ವೆಂಗನೂರಿನ ಸರ್ಕಾರಿ ಶಾಲೆಗೆ ದಲಿತ ವಿದ್ಯಾರ್ಥಿಗಳನ್ನು ಸೇರಿಸಲು ಹೋದಾಗ ವ್ಯಾಪಕ ವಿರೋಧ ವ್ಯಕ್ತವಾಯಿತು. ಆದರೆ ಅಯ್ಯನ್ ಕಾಳಿಯವರು ಛಲ ಬಿಡದೇ ತಿಂಗಳಗಟ್ಟಲೇ ಹೋರಾಟ ನಡೆಸಿದರು. ಈ ಹೋರಾಟದಲ್ಲಿ ಹಲವರು ಪ್ರಾಣ ಸಹ ಕಳೆದುಕೊಂಡರು. ಕೊನೆಗೆ ಈ ಚಳವಳಿಯಲ್ಲಿ ಅಯ್ಯನ್ ಯಶಸ್ಸುಗಳಿಸುವಂತಾಯಿತು ಎಂದು ಹೇಳಿದರು.

1920ರ ಸಂದರ್ಭದಲ್ಲಿ ಗಾಂಧಿಯವರನ್ನು ಭೇಟಿ ಮಾಡುವ ಅವಕಾಶ ಅಯ್ಯನ್ ಅವರಿಗೆ ದೊರೆಯುತ್ತದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾಗಿಯೆಂದು ಅಯ್ಯನ್ ಅವರಲ್ಲಿ ಗಾಂಧಿ ವಿನಂತಿಸುತ್ತಾರೆ. ಆದರೆ ಇದಕ್ಕೆ ಅಯ್ಯನ್ ಅವರು ಒಪ್ಪುವುದಿಲ್ಲ. ಏಕೆಂದರೆ ಅಂಬೇಡ್ಕರ್ ಅವರು 'ನನಗೆ ಸ್ವಾತಂತ್ರ್ಯ ಸಂಗ್ರಾಮಕ್ಕಿಂತ ನನ್ನ ಜನಗಳನ್ನು ಅಸ್ಪೃಶ್ಯತೆಯಿಂದ ಬಿಡುಗಡೆ ಮಾಡುವುದೇ ಮುಖ್ಯ' ಎಂದು ಹೇಳಿದ್ದನ್ನು ಅಯ್ಯನ್ ತಿಳಿದಿದ್ದರು. ಅದಾಗ್ಯೂ ಆಸಕ್ತರು ಭಾಗವಹಿಸಿ ಎಂದು ತಮ್ಮ ಬೆಂಬಲಿಗರಿಗೆ ಹೇಳಿದ್ದರು ಎಂದು ತಿಳಿಸಿದರು.

ಮಾಜಿ ಶಾಸಕ ಹೆಚ್.ಕೆ.ಕುಮಾರಸ್ವಾಮಿ ಮಾತನಾಡಿ, ನಮ್ಮ ಸಮುದಾಯದಲ್ಲಿ ಹೆಸರಿಗಷ್ಟೇ ಬಲವಿದ್ದು, ನಿಜಕ್ಕೂ ಬಲ ಕಡಿಮೆಯೇ ಆಗಿದೆ. ಇದಕ್ಕೆ ಸಮುದಾಯದಲ್ಲಿರುವ ಒಗ್ಗಟ್ಟಿನ ಕೊರತೆಯೇ ಕಾರಣ. ಇನ್ನಾದರೂ ಸಮುದಾಯದವರಲ್ಲಿ ಒಗ್ಗಟ್ಟು ಮೂಡಬೇಕಿದೆ ಎಂದರು.

ಸದಾಶಿವ ಆಯೋಗ, ನಾಗಮೋಹನ ದಾಸ್ ಆಯೋಗದ ವರದಿಗಳು ಬಂದ ಬಳಿಕ ಅನೇಕ ಬದಲಾವಣೆಗಳು ಆಗಿವೆ. ಸರ್ಕಾರ ಮಾಡಿದ್ದನ್ನು ನಾವು ಒಪ್ಪಿದ್ದೇವೆ. ಆದರೆ ದತ್ತಾಂಶ ಸರಿಯಾಗಿ ಮಾಡಿ ಒಳಮೀಸಲಾತಿ ಕೊಡಬೇಕು. ಹಾಗಾಗಿ ಬದಲಾವಣೆ ಆಗಬೇಕಿದೆ. ಈ ನಿಟ್ಟಿನಲ್ಲಿ ಪ್ರತಿಭಟನೆ ಅಗತ್ಯವಿದ್ದರೂ ಯಾರೂ ಮಾಡುತ್ತಿಲ್ಲ. ಸಮಸಂಖ್ಯೆ ಕೊಟ್ಟಾಕ್ಷಣ ಎಲ್ಲರ ಬಾಯಿ ಮುಚ್ಚಿ ಹೋಗಿದೆ. ಆದರೆ ಸಮಸಂಖ್ಯೆಯಲ್ಲಿಯೂ ಅಸಮಾನತೆ ಇದೆ. ರಾಜಕೀಯ ಕ್ಷೇತ್ರದಲ್ಲಿಯೂ ಒಳಮೀಸಲಾತಿ ಕೇಳಲು ಇದು ಸಕಾಲವಾಗಿದೆ ಎಂದು ಹೇಳಿದರು.

ಶಾಸಕ ಎ.ಆರ್.ಕೃಷ್ಣಮೂರ್ತಿ, ಮಾಜಿ ಶಾಸಕ ವೈಸಂಪಾಗಿ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಡಾ.ನಟರಾಜ್ ಶಿವಣ್ಣ ವಿಜ್ಞಾನಿ ಡಾ.ನವೀನ್‌ಮೌರ್ಯ, ಬೆಂಗಳೂರು ವಿವಿ ಸಂಶೋಧನಾ ವಿದ್ಯಾರ್ಥಿ ಒಕ್ಕೂಟದ ಗೌರವಾಧ್ಯಕ್ಷ ಚಂದ್ರು ಪೆರಿಯಾರ್, ಮೈಸೂರು ವಿವಿ ದಲಿತ ವಿದ್ಯಾರ್ಥಿ ಒಕ್ಕೂಟದ ಮಾಜಿ ಅಧ್ಯಕ್ಷ ಸಂದೇಶ್ ಮಣಗಳ್ಳಿ, ಕಾರ್ಯಕ್ರಮದ ಆಯೋಜಕರಾದ ಡಾ. ಅಶ್ವಿನಿ ಶರತ್, ವೇದಾವತಿ, ಎಂ.ಎಸ್. ಪರಮಾನಂದ ಮತ್ತಿತರರು ಹಾಜರಿದ್ದರು.

ಹಂಚ್ಯಾ ಸರ್ಕಾರಿ ಶಾಲೆಗೆ ಆಸ್ಟ್ರೇಲಿಯಾ ಸಂಸ್ಥೆಯಿಂದ ವಿಜ್ಞಾನ ಪ್ರಯೋಗಾಲಯ ಉಪಕರಣ ಕೊಡುಗೆ



ಮೈಸೂರಿನ ಹಂಚ್ಯಾ ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ ಆಸ್ಟ್ರೇಲಿಯಾದಲ್ಲಿರುವ ಒಎಂಎಸ್ ಇಂಜಿನಿಯರಿಂಗ್ ಸಂಸ್ಥೆ ವತಿಯಿಂದ ವಿಜ್ಞಾನ ಪ್ರಯೋಗಾಲಯ ಉಪಕರಣ ಹಾಗೂ ಗಣಿತ ಉಪಕರಣ ವಿತರಿಸಲಾಯಿತು.

ಮೈಸೂರು, ಸೆ.5(ಜಿಎ)–ಮೈಸೂರಿನ ಹಂಚ್ಯಾ ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ ಆಸ್ಟ್ರೇಲಿಯಾದಲ್ಲಿರುವ ಒಎಂಎಸ್ ಇಂಜಿನಿಯರಿಂಗ್ ಸಂಸ್ಥೆ ವತಿಯಿಂದ ವಿಜ್ಞಾನ ಪ್ರಯೋಗಾಲಯ ಉಪಕರಣ ಹಾಗೂ ಗಣಿತ ಉಪಕರಣ ವಿತರಿಸಲಾಯಿತು.

ಈ ವೇಳೆ ಸಂಸ್ಥೆಯ ಮುಖ್ಯಸ್ಥ ಮಹೇಶ್ ಮಾತನಾಡಿ, ಶಾಲಾ ವಿದ್ಯಾರ್ಥಿಗಳು ಕಲಿಕೆಯ ಜೊತೆಗೆ ಮೌಲ್ಯಗಳನ್ನು ಬಾಲ್ಯದಲ್ಲಿ ರೂಢಿಸಿಕೊಳ್ಳಬೇಕು. ಈ ಭಾಗದ ಶಾಲೆಗಳ ಅಭಿವೃದ್ಧಿ ಬಗ್ಗೆ ಮುಂದಿನ ದಿನಗಳಲ್ಲಿ ಸರ್ಕಾರದೊಟ್ಟಿಗೆ ಚರ್ಚೆ ನಡೆಸಿ ಹಂತ ಹಂತವಾಗಿ ಅಭಿವೃದ್ಧಿ ಮಾಡುವ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ನಂತರ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಮೈಸೂರು ಜಿಲ್ಲಾ ಅಧ್ಯಕ್ಷ ಎಸ್.ಅರುಣಕುಮಾರ್ ಮಾತನಾಡಿ, ಸಂಸ್ಥೆ ವತಿಯಿಂದ ಈಗಾಗಲೇ ಇಲವಾಲ, ಜಯಪುರ ಹೋಬಳಿ ಭಾಗದ ಶಾಲೆಗಳ ಅಭಿವೃದ್ಧಿಗೆ ಶ್ರಮಿಸಿದ್ದು, ಮುಂದಿನ ದಿನಗಳಲ್ಲಿ ಈ ಭಾಗದ ಶಾಲೆಗಳ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಶಾಲೆಗೆ 210 ತಟ್ಟೆ ಲೋಟ ನೀಡಲಾಯಿತು. ಕಾಂಗ್ರೆಸ್ ಮುಖಂಡರಾದ ಕೆ.ಸಣ್ಣ ಸ್ವಾಮಿ, ಬಸವರಾಜು, ಪ್ರಶಾಂತ್, ಚನ್ನಯ್ಯ, ಎಸ್‌ಡಿಎಂಸಿ ಅಧ್ಯಕ್ಷ ಹೆಚ್.ಮಂಜು, ಉಪಾಧ್ಯಕ್ಷ ಚಂದ್ರಶೇಖರ್, ಮುಖಂಡರಾದ ಶ್ರೀನಿವಾಸ್, ಉಮೇಶ್, ಶಾಲಾ ಮುಖ್ಯಪಾಧ್ಯಾಯ ಟಿ. ಕುಮಾರ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಎಐ ತಂತ್ರಜ್ಞಾನ ಕಲಿಕೆಗೆ ಆದ್ಯತೆ ನೀಡಬೇಕು

ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಸಲಹೆ



'ಮ್ಯಾಸಿವ್ ಓಪನ್ ಆನ್‌ಲೈನ್ ಕೋರ್ಸ್(ಮೂಕ್)ಗಳ ವಿಷಯ ಅಭಿವೃದ್ಧಿಗಾಗಿ ಕೃತಕ ಬುದ್ಧಿಮತ್ತೆ' ಕುರಿತ ಎರಡು ದಿನ ಕಾರ್ಯಾಗಾರದ ಸಮಾರೋಪದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿದರು.

ಮೈಸೂರು, ಸೆ.5(ಎಸ್‌ಪಿಎನ್)–ಕೃತಕ ಬುದ್ಧಿಮತ್ತೆ(ಎಐ) ತಂತ್ರಜ್ಞಾನ ಎಲ್ಲಾ ಕ್ಷೇತ್ರದಂತೆ ಶೈಕ್ಷಣಿಕ ಕ್ಷೇತ್ರಕ್ಕೂ ಕಾಲಿಟ್ಟಿದೆ. ಇದರ ಬಳಕೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಪ್ರತಿಯೊಬ್ಬ ವಿದ್ಯಾರ್ಥಿ ಈ ತಂತ್ರಜ್ಞಾನ ಕಲಿಕೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಮೈಸೂರು ವಿವಿ ಕುಲಪತಿ ಪ್ರೊಎನ್.ಕೆ.ಲೋಕನಾಥ್ ಅಭಿಪ್ರಾಯಪಟ್ಟರು.


ಮೈಸೂರು ವಿವಿ ಶೈಕ್ಷಣಿಕ ಮಲ್ಟಿಮೀಡಿಯಾ ಸಂಶೋಧನಾ ಕೇಂದ್ರ (ಇಎಂಆರ್‌ಸಿ) ಸಭಾಂಗಣದಲ್ಲಿ ಶಿಕ್ಷಾ ಸಂವಹನ ಒಕ್ಕೂಟ(ಸಿಇಸಿ)ದ ಸಹಯೋಗದೊಂದಿಗೆ ಹಮ್ಮಿಕೊಂಡಿರುವ 'ಮ್ಯಾಸಿವ್ ಓಪನ್ ಆನ್‌ಲೈನ್ ಕೋರ್ಸ್ (ಮೂಕ್)ಗಳ ವಿಷಯ ಅಭಿವೃದ್ಧಿಗಾಗಿ ಕೃತಕ ಬುದ್ಧಿಮತ್ತೆ' (Artificial intelligence for content development for MOOCs-Massive Open Online Course) ಕುರಿತ ಎರಡು ದಿನ ಕಾರ್ಯಾಗಾರದ ಸಮಾರೋಪದಲ್ಲಿ ಅವರು ಮಾತನಾಡಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಕ್ಷೇತ್ರದಲ್ಲಿ ಈಗಾಗಲೇ ಆರ್ಥಿಕ ಶಿಸ್ತು ನೆಪದಲ್ಲಿ ಮಾನವ ಸಂಪನ್ಮೂಲವನ್ನು ಕಡಿತಗೊಳಿಸುತ್ತಿದ್ದಾರೆ. ಆ ಜಾಗಗಳಲ್ಲಿ ಎಐ ತಂತ್ರಜ್ಞಾನ ಬಳಕೆ ಹೆಚ್ಚಿಸಲು ಈಗಿನಿಂದಲೇ ಕ್ರಮ ವಹಿಸಲಾಗುತ್ತಿದೆ. ಇದರ ಕಾರ್ಯಕ್ಷಮತೆ ಶೇ.90 ರಷ್ಟಿದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸುತ್ತಿರುವ ಹಿನ್ನಲೆಯಲ್ಲಿ ಎಐ ತಂತ್ರಜ್ಞಾನ ಬಳಕೆ ಕುರಿತು ಗಂಭೀರ ಚಿಂತನೆಗಳು ನಡೆಯುತ್ತಿವೆ. ಹಾಗಾಗಿ ಖಾಸಗಿ ಕ್ಷೇತ್ರದ ಉದ್ಯಮಿಗಳು ಎಐ ತಂತ್ರಜ್ಞಾನ ಬಳಸಿ, ಆರ್ಥಿಕ ಶಿಸ್ತು ಕಾಪಾಡಲು ಮುಂದಾಗುತ್ತಿದ್ದಾರೆ. ತಂತ್ರಜ್ಞಾನ ಕ್ಷೇತ್ರದ ನಿತ್ಯ ಬೆಳವಣಿಗೆ ಕುರಿತು ವಿದ್ಯಾರ್ಥಿಗಳು ತಿಳಿದುಕೊಳ್ಳಲು ಪ್ರಯತ್ನಿಸಬೇಕು ಎಂದು ಕಿವಿಮಾತು ಹೇಳಿದರು.

ಕಳೆದೆರಡು ದಿನಗಳಿಂದ ಎಐ ತಂತ್ರಜ್ಞಾನ ಕುರಿತು ಕಾರ್ಯಾಗಾರದಲ್ಲಿ ಪಾಲ್ಗೊಂಡಿರುವ ಹಲವು ಶಿಬಿರಾರ್ಥಿಗಳು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದೀರಿ, ಮುಂದೆಯೂ ಇಂತಹ ಕಾರ್ಯಾಗಾರಗಳನ್ನು ಆಯೋಜಿಸಲು ಮೈಸೂರು ವಿವಿ ಸದಾ ಬೆಂಬಲವಾಗಿ ನಿಲ್ಲುತ್ತದೆ ಎಂದು ಭರವಸೆ ನೀಡಿದರಲ್ಲದೆ, ಕೃತಕ ಬುದ್ಧಿಮತ್ತೆ(ಎಐ) ತಂತ್ರಜ್ಞಾನ ವಲಯಕ್ಕೆ ಸಿಮೀತವಾಗದೆ ಮನುಷ್ಯನ ಜೀವನದ ಪ್ರತಿಯೊಂದು ಅಂಶಗಳಲ್ಲಿಯೂ ಆವರಿಸುತ್ತಿದೆ. ಅದರಲ್ಲಿ ಶಿಕ್ಷಾ ಕ್ಷೇತ್ರವೂ ಒಂದಾಗಿದ್ದು, ಶೈಕ್ಷಣಿಕ ಪರಿವರ್ತನೆಯ ಹೊಸ್ತಿಲಲ್ಲಿ ನಾವಿದ್ದೇವೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯವು ಸದಾ ನಾವಿನ್ಯತೆ, ಸಂಶೋಧನೆ ಮತ್ತು ಕ್ರಿಯಾಶೀಲತೆಗೆ ಹೆಚ್ಚಿ ಆದ್ಯತೆ ನೀಡುತ್ತಿದೆ ಈ ಕಾರ್ಯಾಗಾರ ಕೇವಲ ತಾಂತ್ರಿಕ ದೃಷ್ಟಿ ಕೋನವಾಗಿರದೆ, ಹೊಸ ಚಿಂತನೆ ಮತ್ತು ಬೋಧನೆಯ ವಿಧಾನಗಳಿಗೆ ವೇಗವರ್ಧಕ ವಾಗಲಿದೆ. ಅಂತೆಯೇ ಮಾನವನ ಎಲ್ಲಾ ಕೆಲಸಗಳ ಪ್ರತಿಬಿಂಬವಾಗಿ ಎಐ ತಂತ್ರ ಜ್ಞಾನ ಕಾರ್ಯ ನಿರ್ವಹಿಸುತ್ತಿದೆ. ಇದರ ಬಗ್ಗೆ ವಿದ್ಯಾರ್ಥಿಗಳು ಅರಿಯಬೇಕು ಎಂದು ಸಲಹೆ ನೀಡಿದರು. ಈ ವೇಳೆ ನವದೆಹಲಿಯ ಸಿಇಸಿ ನಿರ್ದೇಶಕ ಪ್ರೊ.ಜಗತ್ ಭೂಷಣ್ ನಡ್ಡಾ, ಇಎಂಆರ್‌ಸಿ ನಿರ್ದೇಶಕರಾದ ಪ್ರೊ.ಎಂ.ಎಸ್.ಸಪ್ನ ಉಪಸ್ಥಿತರಿದ್ದರು.

ದಾಂಪತ್ಯ ಜೀವನಕ್ಕೆ ಅಡಿಯಿಟ್ಟ ಯುವಜೋಡಿ 'ನೇತ್ರದಾನ'ದ ವಾಗ್ದಾನ



ನವಜೋಡಿ ಚಂದನ್ ಮತ್ತು ಲಾವಣ್ಯ, ನೇತ್ರದಾನಕ್ಕೆ ಒಪ್ಪಿ ಸಹಿ ಹಾಕುತ್ತಿರುವುದು.

ಮೈಸೂರು, ಸೆ.5– ಪ್ರೀತಿಸಿ ಮದುವೆಯಾದ ನವಜೋಡಿ, ನೇತ್ರದಾನಕ್ಕೆ ನೋಂದಣಿ ಮಾಡಿಸುವ ಮೂಲಕ ದಾಂಪತ್ಯ ಜೀವನಕ್ಕೆ ಅಡಿಯಿಟ್ಟ ವಿಶೇಷ ಪ್ರಸಂಗ ಮೈಸೂರಿನಲ್ಲಿ ನಡೆದಿದೆ.

ದಶಕದಿಂದ ಪರಸ್ಪರ ಪ್ರೀತಿಸುತ್ತಿದ್ದ ಮೈಸೂರಿನ ಚಂದನ್ ಮತ್ತು ಲಾವಣ್ಯ ಇಂದು ಕುಟುಂಬದವರ ಸಮ್ಮುಖದಲ್ಲಿ ದೇವಸ್ಥಾನದಲ್ಲಿ ಸತಿ–ಪತಿಗಳಾದರು. ಸರಳ ವಿವಾಹದೊಂದಿಗೆ ಹೊಸ ಜೀವನಕ್ಕೆ ಅಡಿಯಿಟ್ಟ ಈ ಜೋಡಿ ಮಾನವೀಯ ಕಾರ್ಯದೊಂದಿಗೆ ಮಾದರಿಯಾದರು. ಮಾಂಗಲ್ಯಧಾರಣೆ ಬಳಿಕ ನವ ದಂಪತಿ ಸ್ವಇಚ್ಛೆಯಿಂದಲೇ ಮೈಸೂರಿನ ಅಗರ್‌ವಾಲ್ ಕಣ್ಣಿನ ಆಸ್ಪತ್ರೆ ವೈದ್ಯರ ಸಮ್ಮುಖದಲ್ಲಿ ತಮ್ಮ ನೇತ್ರದಾನದ ಒಪ್ಪಿಗೆ ಪತ್ರಕ್ಕೆ ಸಹಿ ಹಾಕಿದರು. ಆಡಂಬರ, ಭೂರಿಭೋಜನವಿಲ್ಲದ ಸರಳ ವಿವಾಹ ಕಾರ್ಯಕ್ರಮ, ದಂಪತಿಯ ನೇತ್ರದಾನದ ಮೂಲಕ ಸಾರ್ಥಕಗೊಂಡಿತು.

ಈ ವೇಳೆ ಅಭಿಪ್ರಾಯ ಹಂಚಿಕೊಂಡ ನವ ವರ ಚಂದನ್, ಮದುವೆ ಎಂದರೆ ಹಳದಿ ಶಾಸ್ತ್ರ, ಸಂಗೀತ, ಪ್ರೀವೆಡಿಂಗ್ ಫೋಟೋ ಶೂಟ್ ಇನ್ನಿತರ ಕಾರ್ಯಕ್ರಮಗಳಷ್ಟೇ ಅಲ್ಲ, ಮದುವೆಯ ಮಧುರ ಕ್ಷಣ ಸಮಾಜಕ್ಕೆ ಮಾದರಿಯಾಗಬೇಕು ಎಂದು ಯೋಚಿಸಿದೆವು. ಅದರಂತೆ ಡಾ.ರಾಜ್ ಕುಮಾರ್ ಅವರ ದಾರಿಯನ್ನು ಅನುಸರಿಸಿ, ನೇತ್ರದಾನ ಕಾರ್ಯಕ್ಕೆ ಮುಂದಾದೆವು. ಇದರಿಂದ ಆತ್ಮತೃಪ್ತಿ ದೊರಕಿದೆ ಎಂದರು.

ವಧು ಲಾವಣ್ಯ, ಹತ್ತು ವರ್ಷಗಳ ಕಾಲ ಪ್ರೀತಿಸಿರುವ ನಾವು ಕುಟುಂಬದವರ ಒಪ್ಪಿಗೆಯೊಂದಿಗೆ ಇಂದು ವಿವಾಹವಾಗಿದ್ದೇವೆ ನಮ್ಮ ದಾಂಪತ್ಯ ಜೀವನವನ್ನು ನೇತ್ರದಾನಕ್ಕೆ ಸಹಿ ಹಾಕುವ ಸಾರ್ಥಕ ಕೆಲಸ 'ದೊಂದಿಗೆ ಆರಂಭಿಸಿದ್ದು ಖುಷಿ ಹೆಚ್ಚಿಸಿದೆ. ನೇತ್ರದಾನ ಮಹಾದಾನವಾಗಿರುವುದರಿಂದ ಸಂಭ್ರಮದ ಕಾರ್ಯಕ್ರಮಗಳನ್ನು ಈ ರೀತಿಯಲ್ಲಿ ಅರ್ಥಪೂರ್ಣಗೊಳಿಸಲು ಒಂದಷ್ಟು ಮಂದಿಗೆ ಪ್ರೇರಣೆಯಾಗಬಹುದು ಎಂದುಕೊಂಡಿದ್ದೇವೆ ಎಂದು ತಿಳಿಸಿದರು.

ಸೆ.8 ರಿಂದ ಮೈಸೂರು ತಾಲೂಕು ಮಟ್ಟದ ಕ್ರೀಡಾಕೂಟ

ಮೈಸೂರು, ಸೆ.5(ವಿವಿಹೆಚ್)– 2025–26ನೇ ಸಾಲಿನ ತಾಲೂಕು ಮಟ್ಟದ ಕ್ರೀಡಾಕೂಟವನ್ನು ಇದೇ ಸೆ.8ರ ಸೋಮವಾರದಂದು ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಸಲಾಗುವುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ತಿಳಿಸಿದ್ದಾರೆ.

ಕ್ರೀಡಾಕೂಟದಲ್ಲಿ ಭಾಗವಹಿಸಲು ಇಚ್ಛಿಸುವ ಆಸಕ್ತ ಕ್ರೀಡಾಪಟುಗಳು ಸೆ.8ರ ಬೆಳಿಗ್ಗೆ 9 ಗಂಟೆ ಒಳಗಾಗಿ ಕ್ರೀಡಾ ಸಂಘಟನೆಯ ವ್ಯವಸ್ಥಾಪಕರ ಬಳಿ ನೋಂದಾಯಿಸಿಕೊಳ್ಳುವಂತೆ ಕೋರಲಾಗಿದ್ದು, ಆಸಕ್ತರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಖುದ್ದು ಭೇಟಿ ನೀಡಬಹುದು ಇಲ್ಲವಾದಲ್ಲಿ ದೂಸಂ: 0821–2564179 ಅಥವಾ ಮೊಸಂ: 9481075364 ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರೀಡೆಗಳ ವಿವರ: ಅಥ್ಲೆಟಿಕ್ಸ್ (ಪುರುಷರು): 100 ಮೀ, 200 ಮೀ, 400 ಮೀ, 800 ಮೀ, 1500 ಮೀ, 5000 ಮೀ, 10000 ಮೀ. ಓಟ, ಉದ್ದ ಜಿಗಿತ, ಎತ್ತರ ಜಿಗಿತ, ಗುಂಡು ಎಸೆತ, ಟ್ರಿಪಲ್ ಜಂಪ್, ಜಾವೆಲಿನ್ ಥ್ರೋ, ಡಿಸ್ಕಸ್ ಥ್ರೋ, 110 ಮೀ. ಹರ್ಡಲ್ಸ್, 4x100 ಮೀ. ರಿಲೇ, 4x400 ಮೀ ರಿಲೇ.

ಅಥ್ಲೆಟಿಕ್ಸ್(ಮಹಿಳೆಯರು): 100 ಮೀ, 200 ಮೀ, 400 ಮೀ, 800 ಮೀ, 1500 ಮೀ, 3000 ಮೀ. ಓಟ, ಉದ್ದ ಜಿಗಿತ, ಎತ್ತರ ಜಿಗಿತ, ಗುಂಡು ಎಸೆತ, ಟ್ರಿಪಲ್ ಜಂಪ್, ಜಾವೆಲಿನ್ ಥ್ರೋ, ಡಿಸ್ಕಸ್ ಥ್ರೋ, 100 ಮೀ. ಹರ್ಡಲ್ಸ್, 4x100 ಮೀ. ರಿಲೇ, 4x400 ಮೀ ರಿಲೇ.

ಜೊತೆಗೆ ವಾಲಿಬಾಲ್, ಥ್ರೋಬಾಲ್, ಫುಟ್ಬಾಲ್, ಖೋ–ಖೋ, ಕಬಡ್ಡಿ, ಯೋಗಾಸನ(ವೀರಭದ್ರಾಸನ, ಜಾನು ಶಿರ್ಶಾಸನ, ಹಲಾಸನ ಮತ್ತು ಧನುರಾಸನ) ಇರಲಿದೆ.

ಸ್ಪರ್ಧಿಗಳು ಭಾಗವಹಿಸಲು ಬೇಕಾದ ಅರ್ಹತಾ ನಿಯಮಗಳು: ತಾಲೂಕು ಮಟ್ಟದಲ್ಲಿ ನಡೆವ ಕ್ರೀಡೆಗಳಲ್ಲಿ ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ, ದ್ವಿತೀಯ ಸ್ಥಾನ ಹಾಗೂ ಗುಂಪು ಕ್ರೀಡೆಗಳಲ್ಲಿ ಪ್ರಥಮ ಸ್ಥಾನ ಪಡೆದವರಿಗೆ ಮಾತ್ರ ಜಿಲ್ಲಾಮಟ್ಟದಲ್ಲಿ ಭಾಗವಹಿಸಲು ಅವಕಾಶ.

ಕರ್ನಾಟಕ ರಾಜ್ಯದಲ್ಲಿ ವಾಸಿಸುವ ಕ್ರೀಡಾಪಟುಗಳು ಮಾತ್ರ ಭಾಗವಹಿಸಲು ಅವಕಾಶ. ರಕ್ಷಣಾ ಪಡೆ, ಅರೆ ರಕ್ಷಣಾಪಡೆಗೆ ಸೇರಿದ ಕ್ರೀಡಾಪಟುಗಳು ಭಾಗವಹಿಸುವಂತಿಲ್ಲ.

ಒಬ್ಬ ಕ್ರೀಡಾಪಟು ಅಥವಾ ತಂಡ ಯಾವುದೇ ತಾಲೂಕಿನಲ್ಲಿ ಒಂದು ಬಾರಿ ಭಾಗವಹಿಸಿದ ನಂತರ ಬೇರೆ ಯಾವುದೇ ತಾಲೂಕಿನಿಂದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಅಂತಹ ಪ್ರಕರಣಗಳೇನಾದರೂ ದಾಖಲಾದಲ್ಲಿ ಅಥವಾ ಗಮನಕ್ಕೆ ಬಂದಲ್ಲಿ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ಭಾಗವಹಿಸುವ ಸ್ಪರ್ಧಿಗಳಿಗೆ ಯಾವುದೇ ರೀತಿಯ ಭತ್ಯೆ ಹಾಗೂ ಬಹುಮಾನವನ್ನು ನೀಡಲಾಗುವುದಿಲ್ಲ.

ವಾರ್ಷಿಕ ಮಹಾಸಭೆ

ಮೈಸೂರು, ಸೆ.5–ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿಯಮಿತದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಮೈಸೂರಿನ ಗುರು ರೆಸಿಡೆನ್ಸಿ ಹೋಟೇಲ್‌ನಲ್ಲಿ ಸೆ.16ರಂದು ಮಧ್ಯಾಹ್ನ 1 ಗಂಟೆಗೆ ಒಕ್ಕೂಟದ ಅಧ್ಯಕ್ಷ ಎಸ್.ಆರ್.ನಾರಾಯಣರಾವ್ ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಮೃಗಾಲಯದಲ್ಲಿ ಗಂಡು ಜಾಗ್ವಾರ್ ಸಾವು



ಮೈಸೂರು, ಸೆ.5(ಎಂಟಿವೈ)– ಮೈಸೂರಿನ ಮೃಗಾಲಯದಲ್ಲಿ 7.7 ವರ್ಷದ ಗಂಡು ಜಾಗ್ವಾರ್ ಅನಾರೋಗ್ಯದಿಂದ ಶುಕ್ರವಾರ ಬೆಳಗ್ಗೆ ಮೃತಪಟ್ಟಿದೆ. ಕಳೆದ ಕೆಲ ವರ್ಷಗಳಿಂದ ಪ್ರವಾಸಿಗರಿಗೆ ಮುದ ನೀಡುತ್ತಿದ್ದ ವಿಕ್ರಂ ಹೆಸರಿನ ಈ ಜಾಗ್ವರ್ ಪಿತ್ತ ಜನಕಾಂಗ ಮತ್ತು ಮೂತ್ರ ಪಿಂಡ ವೈಫಲ್ಯದಿಂದ ಬಳಲುತ್ತಿತ್ತು. ಇದರಿಂದ ಕಳೆದ ಎರಡು ದಿನಗಳಿಂದ ಆಹಾರ ತ್ಯಜಿಸಿತ್ತು. ಚಿಕಿತ್ಸೆ ನೀಡಿದರೂ ಆರೋಗ್ಯದಲ್ಲಿ ಸುಧಾರಣೆಯಾಗದೆ ಇಂದು ಬೆಳಗ್ಗೆ ಮೃತಪಟ್ಟಿದೆ. ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಅಂತ್ಯಕ್ರಿಯೆ ನೆರವೇರಿಸಲಾಗಿದೆ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರಾದ ಪಿ.ಅನುಷ ತಿಳಿಸಿದ್ದಾರೆ.

ನಾಳೆ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ದುಂಡುಮೇಜಿನ ಸಭೆ



ಮೈಸೂರು,ಸೆ.5(ಪಿಎಂ)–ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ವತಿಯಿಂದ ಸೆ.7ರಂದು ಪರಿಶಿಷ್ಟ ಜಾತಿಯ ಒಳಮೀಸಲಾತಿ ಸಂಬಂಧ ಮಾದಿಗ ಸಮಾಜಕ್ಕೆ ಆಗಿರುವ ಅನಾನುಕೂಲ ಮತ್ತು ಅನುಕೂಲದ ಬಗ್ಗೆ ಚರ್ಚಿಸಲು ಸಮಾಜದ ವಕೀಲರ ಸಮ್ಮುಖದಲ್ಲಿ ದುಂಡುಮೇಜಿನ ಸಭೆ ಏರ್ಪಡಿಸಲಾಗಿದೆ. ಮೈಸೂರಿನ ಹೋಟೆಲ್ ಸಿದ್ಧಾರ್ಥ ಸಭಾಂಗಣದಲ್ಲಿ ಅಂದು ಬೆಳಗ್ಗೆ 10ಕ್ಕೆ ದುಂಡು ಮೇಜಿನ ಸಭೆ ಏರ್ಪಡಿಸಲಾಗಿದೆ ಎಂದು ಹಿರಿಯ ವಕೀಲರೂ ಆದ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಹಾಗೂ ವೇದಿಕೆ ಪದಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ಸಡಗರ–ಸಂಭ್ರಮದಿಂದ ಈದ್ ಮಿಲಾದ್ ಆಚರಣೆ



1500ನೇ ಜಶ್ನ್ ಇ ಮಿಲಾದ್ ಅನ್ ನಬಿ ಕಾರ್ಯಕ್ರಮದಲ್ಲಿ ಶಾಸಕ ತನ್ವೀರ್ ಸೇಠ್ ಭಾಗಿಯಾಗಿದ್ದರು.



ದಾವತೆ–ಇಸ್ಲಾಮಿ ಹಿಂದ್ ಕರ್ನಾಟಕ ವತಿಯಿಂದ ನಡೆದ ಈದ್ ಮಿಲಾದ್ ಮೆರವಣಿಗೆ

ಮೈಸೂರು, ಸೆ.5(ವಿವಿಹೆಚ್)–ಮೈಸೂರು ನಗರದಾದ್ಯಂತ ಮುಸ್ಲಿಂ ಬಾಂಧವರು ಈದ್–ಮಿಲಾದ್ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಿದರು.

ಮೈಸೂರಿನ ಅಶೋಕ ರಸ್ತೆಯಲ್ಲಿರುವ ಮಿಲಾದ್ ಭಾಗ್(ಪಾರ್ಕ್)ನಲ್ಲಿ ಸೆಂಟ್ರಲ್ ಮಿಲಾದ್ ಸಮಿತಿ ವತಿಯಿಂದ ಈದ್–ಮಿಲಾದ್ ಅಂಗವಾಗಿ ಶುಕ್ರವಾರ 1500ನೇ ಜಶ್ನ್ ಇ ಮಿಲಾದ್ ಅನ್ ನಬಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಪ್ರವಾದಿ ಮೊಹಮ್ಮದ್‌ರ ಹುಟ್ಟುಹಬ್ಬವನ್ನು ಅವರ ಆದರ್ಶ, ಮೌಲ್ಯಗಳನ್ನು ಸ್ಮರಿಸುವ ಮೂಲಕ ಪ್ರಪಂಚದಾದ್ಯಂತ ಇಂದು ಈದ್–ಮಿಲಾದ್ ಆಚರಿಸಲಾಗುತ್ತದೆ. ಅಂತೆಯೇ ಮೈಸೂರಲ್ಲೂ ಹಬ್ಬದ ಸಡಗರ ಮನೆ ಮಾಡಿತ್ತು.

ಪ್ರವಾದಿ ಹುಟ್ಟುಹಬ್ಬದ ಸ್ಮರಣಾರ್ಥ ದಾವತೆ–ಇಸ್ಲಾಮಿಕ್ ಹಿಂದ್ ಕರ್ನಾಟಕ ವತಿಯಿಂದ ಮೆರವಣಿಗೆ ಆಯೋಜಿಸಲಾಗಿತ್ತು. ಲಷ್ಕರ್ ಮೊಹಲ್ಲಾದ ಮಿಲಾದ್ ಬಾಗ್ ಮುಂಭಾಗ ಅಶೋಕ ರಸ್ತೆಯ ಮೂಲಕ ಮೆರವಣಿಗೆ ಪ್ರಾರಂಭವಾಗಿ, ಮೀನಾ ಬಜಾರ್, ಸಾಡೇ ರಸ್ತೆ, ಡಾ. ಜಾಕೀರ್ ಹುಸೇನ್ ವೃತ್ತ, ಮಸ್ಜಿದ್ ಇ ಈದ್ಗಾ ರಸ್ತೆ, ಪುಲಿಕೇಶಿ ರಸ್ತೆ, ಕೆ.ಟಿ. ಸ್ಟ್ರೀಟ್, ಕೆ.ಆರ್. ಪಾರ್ಕ್ ರಸ್ತೆ ಮೂಲಕ ಸಾಗಿ ಮಸ್ಜಿದ್ ಇ ಅಜಮ್ ತಲುಪಿ ಮುಕ್ತಾಯವಾಯಿತು. ಮೆರವಣಿಗೆಯಲ್ಲಿ ಉಲೇಮಾಗಳು, ಶಾಲಾ ಮಕ್ಕಳು ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಂ ಬಾಂಧವರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಈದ್–ಮಿಲಾದ್ ಅಂಗವಾಗಿ ಮುಸ್ಲಿಂ ಬಾಂಧವರಿಗೆ ಸೆಂಟ್ರಲ್ ಮಿಲಾದ್ ಕಮಿಟಿ ವತಿಯಿಂದ ಏರ್ಪಡಿಸಿದ್ದ ವಿವಿಧ ಕ್ರೀಡಾಕೂಟಗಳಲ್ಲಿ ಗೆಲುವು ದಾಖಲಿಸಿದವರನ್ನು ಮಿಲಾದ್ ಭಾಗ್‌ನಲ್ಲಿ ಆಯೋಜಿಸಿದ ಸಮಾರಂಭದಲ್ಲಿ ಅಭಿನಂದಿಸಲಾಯಿತು.

ಈ ವೇಳೆ ನಗರದ ವಿವಿಧ ಮಿಲಾದ್ ಸಮಿತಿಗಳು ರೂಪಿಸಿದ್ದ ಮಕ್ಕಾ, ಮದೀನಾ ಮತ್ತು ಪ್ರಸಿದ್ಧ ಮಸೀದಿಗಳ ಟ್ಯಾಬ್ಲೋಗಳನ್ನು ಮೌಲಾನಾಗಳು ವೀಕ್ಷಿಸಿದರು.

ಮೌಲಾನಾ ಖಾರಿ ಫಯಾಜ್ ಅಹಮದ್, ಮೌಲಾನಾ ಎಂಡಿ ಝುಕಾ ಉಲ್ಲಾ ಸಾಹೇಬ್ ಸಿದ್ದಿಕಿ, ಶಾಸಕ ತನ್ವೀರ್ ಸೇಠ್, ಮೌಲಾನಾ ಅಕ್ಬರ್ ಷರೀಫ್, ಐಕಮತ್ಯ ಯುವ ಚಳವಳಿಯ ರಾಜ್ಯ ಕಾರ್ಯದರ್ಶಿ ಮೊಹಮ್ಮದ್ ಇಸ್ಮಾಯಿಲ್, ಕೇಂದ್ರ ಮಿಲಾದ್ ಸಮಿತಿಯ ಉಪಾಧ್ಯಕ್ಷ ಅಬ್ದುಲ್ ಅಜೀಜ್ ಚಂದ್, ಸೈಯದ್ ಮೆರಾಜ್ ಉಲ್ ಹುಸೇನ್, ಮೊಹಮ್ಮದ್ ಮುಮ್ತಾಜ್, ಅಫ್ರೋಜ್ ಪಾಶಾ ಅಪ್ಪು, ಖಲೀಲ್ ಉರ್ ರೆಹಮಾನ್ ಅಪ್ಪು, ಫಾಜಿಲ್ ಚಂದ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಶನಿವಾರ 6 ಸೆಪ್ಟೆಂಬರ್ 2025

ಎಡಮುರಿಯಲ್ಲಿ ಇಬ್ಬರು ವಿದ್ಯಾರ್ಥಿಗಳು ಜಲಸಮಾಧಿ



ಶ್ರೀರಂಗಪಟ್ಟಣ, ಸೆ.5– ತಾಲೂಕಿನ ಎಡಮುರಿಯಲ್ಲಿ ಇಂದು ನದಿಯಲ್ಲಿ ಮುಳುಗಿ ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟಿದ್ದು, ಮೃತರು ಬೆಂಗಳೂರಿನ ಡಾನ್ ಬಾಸ್ಕೋ ಕಾಲೇಜಿನ ವಿದ್ಯಾರ್ಥಿಗಳು.

ದುರ್ದೈವಿ ವಿದ್ಯಾರ್ಥಿಗಳಾದ ಶ್ಯಾಮ್ (20) ಹಾಗೂ ವೆಂಕಟೇಶ್ (20) ಸಾವನ್ನಪ್ಪಿದ್ದು, ಶುಕ್ರವಾರ ಕಾಲೇಜಿಗೆ ರಜೆ ಇದ್ದ ಕಾರಣ 7 ಮಂದಿ ಸ್ನೇಹಿತರೊಂದಿಗೆ ಎಡಮುರಿಗೆ ಆಗಮಿಸಿ, ಕಾವೇರಿ ನದಿಯಲ್ಲಿ ಈಜಲು ಹೋದ ವೇಳೆ ದುರಂತ ಸಾವನ್ನಪ್ಪಿದ್ದಾರೆ. ಸ್ಥಳಕ್ಕೆ ಅಗ್ನಿಶಾಮಕ ಸಿಬ್ಬಂದಿ ಆಗಮಿಸಿ ಕಾರ್ಯಾಚರಣೆ ನಡೆಸಿ, ಶವಗಳನ್ನು ಹೊರ ತೆಗೆದಿದ್ದಾರೆ. ಸ್ಥಳಕ್ಕೆ ಡಿವೈಎಸ್ಪಿ ಶಾಂತಮಲ್ಲಪ್ಪ ಸೇರಿದಂತೆ ಇತರೆ ಪೊಲೀಸ್ ಅಧಿಕಾರಿಗಳು ಆಗಮಿಸಿ ಪರಿಶೀಲನೆ ನಡೆಸಿದರು. ಈ ಸಂಬಂಧ ಕೆಆರ್‌ಎಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಸುಗಳ ವಿಮಾ ಯೋಜನೆಗೆ ಚಾಲನೆ



ಯೋಜನೆಗೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಚಾಲನೆ ನೀಡಿದರು.

ಚಿನಕುರಳಿ, ಸೆ.5– ಮನ್‌ಮುಲ್ ಒಕ್ಕೂಟದಿಂದ ರಾಸುಗಳ ವಿಮಾ ಯೋಜನೆಗೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಚಾಲನೆ ನೀಡಿದರು.

ಚಿನಕುರಳಿ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ರಾಸುಗಳಿಗೆ ವಿಮೆ ಯೋಜನೆಯ ಓಲೆ ಹಾಕುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ರಾಸುಗಳ ವಿಮಾ ಯೋಜನೆಯು ಸಾಕಷ್ಟು ಮಹತ್ವದಾಗಿದೆ. ವಿಮೆ ಮಾಡಿಸಿದ ರಾಸುಗಳು ಅಕಾಲಿಕ ಮರಣಕ್ಕೆ ತುತ್ತಾದರೆ ರೈತರಿಗೆ ವಿಮಾ ಪರಿಹಾರ ದೊರೆಯುತ್ತದೆ. ವಿಮೆ ಮಾಡಿಸದ ರಾಸುಗಳು ಮರಣ ಹೊಂದಿದರೆ ಪರಿಹಾರ ದೊರೆಯುವುದಿಲ್ಲ. ಹಾಗಾಗಿ ತಾಲೂಕಿನ ರೈತರು ಕಡ್ಡಾಯವಾಗಿ ವಿಮೆ ಮಾಡಿಸಬೇಕು ಎಂದು ಮನವಿ ಮಾಡಿದರು.

ತಾಲೂಕಿನಲ್ಲಿ 13 ಸಾವಿರಕ್ಕೂ ಅಧಿಕ ರಾಸುಗಳಿವೆ. ಆದರೆ 9 ರಿಂದ 10 ಸಾವಿರ ರಾಸುಗಳಿಗೆ ಮಾತ್ರ ವಿಮೆ ಮಾಡಿಸುತ್ತಿದ್ದಾರೆ. ಈ ಬಾರಿ ಶೇ.100ರಷ್ಟು ರಾಸು ವಿಮೆ ಆಗಬೇಕು. ರಾಸು ವಿಮೆಗೆ ಒಕ್ಕೂಟ ಶೇ.50ರಷ್ಟು ಹಣ ನೀಡಲಿದೆ. ಉಳಿದ ಶೇ.50ರಷ್ಟು ಹಣವನ್ನು ಉತ್ಪಾದಕರು ನೀಡಬೇಕು. ರಾಸು ವಿಮೆ ಬಗ್ಗೆ ಕಾರ್ಯದರ್ಶಿಗಳು ಹಾಗೂ ಆಡಳಿತ ಮಂಡಳಿ ಸದಸ್ಯರು ಉತ್ಪಾದಕರಿಗೆ ಅರಿವು ಮೂಡಿಸಬೇಕು ಎಂದರು.

ಮನ್‌ಮುಲ್ ಉಪ ವ್ಯವಸ್ಥಾಪಕ ಆರ್.ಪ್ರಸಾದ್, ಡಾ.ಸಂತೋಷ್, ಪ್ರಕಾಶ್, ಡೇರಿ ಉಪಾಧ್ಯಕ್ಷ ಸಿ.ಆರ್.ರಮೇಶ್, ನಿರ್ದೇಶಕರಾದ ಆರ್.ವರದರಾಜು, ಸಿ.ಎಂ.ರಮೇಶ್, ಸಿ.ಎಸ್.ಲೋಕೇಶ್, ಸಿ.ಎಸ್.ಕೆಂಪೇಗೌಡ, ಸಿ.ಎ.ಮಂಜುನಾಥ್, ಸಿ.ಬಿ.ನಾರಾಯಣಚಾರಿ, ಯೋಗೇಂದ್ರ, ವರಲಕ್ಷ್ಮಿ, ಸಿ.ಡಿ.ಸೋಮು, ಯಶೋಧಮ್ಮ ಲೋಕೇಶ್, ಹೇಮ ಪುಟ್ಟಯ್ಯ, ಗ್ರಾಪಂ ಸದಸ್ಯ ಸಿ.ಎ.ಲೋಕೇಶ್, ಕಾರ್ಯದರ್ಶಿ ಲೋಕೇಶ್ ಸೇರಿದಂತೆ ಸಿಬ್ಬಂದಿಗಳಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಭಾರತೀನಗರ: ಕೆ.ಎಂ.ದೊಡ್ಡಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾರ್ಯ ಹಮ್ಮಿಕೊಂಡಿರುವುದರಿಂದ ಕೆ.ಎಂ.ದೊಡ್ಡಿ, ಗುಡಿಗೆರೆ, ಅಂಬರಹಳ್ಳಿ, ಬಿದರಹಳ್ಳಿ, ಡಿ.ಎ.ಕೆರೆ, ಯಲಾದಹಳ್ಳಿ, ಮುಟ್ಟನಹಳ್ಳಿ, ಆತ್ಮಲಿಂಗೇಶ್ವರ ಕ್ಷೇತ್ರ, ಮಡೇನಹಳ್ಳಿ, ತೊರೆಬೊಮ್ಮನಹಳ್ಳಿ, ಮೆಣಸಗೆರೆ ಫೀಡರ್‌ಗಳ ವ್ಯಾಪ್ತಿಯಲ್ಲಿ ಸೆ.6 ರಂದು ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸೆ.13, 14ರಂದು ಗಗನಚುಕ್ಕಿ ಜಲಪಾತೋತ್ಸವ

ಉತ್ಸವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ: ಶಾಸಕ ನರೇಂದ್ರಸ್ವಾಮಿ



ಶಾಸಕ ಪಿ.ಎಂ.ನರೇಂದ್ರಸ್ವಾಮಿ ಜಲಪಾತೋತ್ಸವದ ಲೋಗೋ ಬಿಡುಗಡೆಗೊಳಿಸಿದರು.

ಮಂಡ್ಯ, ಸೆ.5– ಜನರ ಕಣ್ಮನ ಸೆಳೆಯುವ ಜಿಲ್ಲೆಯ ಮಳವಳ್ಳಿ ತಾಲೂಕಿನ ಗಗನಚುಕ್ಕಿ ಜಲಪಾತೋತ್ಸವವನ್ನು ಸೆ.13,14 ರಂದು ಅದ್ಧೂರಿಯಾಗಿ ಆಚರಿಸಲಾಗುತ್ತಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕು ಎಂದು ಶಾಸಕ ಪಿ.ಎಂ.ನರೇಂದ್ರಸ್ವಾಮಿ ತಿಳಿಸಿದರು.

ಶುಕ್ರವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಲಪಾತೋತ್ಸವದ ಲೋಗೋ ಬಿಡುಗಡೆಗೊಳಿಸಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೊಟ್ಟಿಕಟ್ಟೆ ಬಳಿ ನೀರು ಸರಬರಾಜು ಕಾಮಗಾರಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಈ ಬಾರಿ ಮಲ್ಲಿಕ್ಯಾತನಹಳ್ಳಿ ಬಳಿ ವೇದಿಕೆ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ವೇದಿಕೆ ಬಳಿ ಜಲಪಾತದ ಮನಮೋಹಕ ದೃಶ್ಯಗಳನ್ನು ಸವಿಯಲು ಎಲ್‌ಇಡಿ ವ್ಯವಸ್ಥೆ ಮಾಡಲಾಗುವುದು ಎಂದರು.

ಪ್ರವಾಸಿಗರು, ಸಾರ್ವಜನಿಕರ ಅನುಕೂಲಕ್ಕಾಗಿ ಸುಗಮ ವಾಹನ ಸಂಚಾರದ ದೃಷ್ಟಿಯಿಂದ ಮಳವಳ್ಳಿಯಿಂದ ಗಗನಚುಕ್ಕಿವರೆಗೆ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದೆ. ಜಲಪಾತೋತ್ಸವ ನಡೆಯುವ ದಿನಗಳಂದು ಆಗಮಿಸುವ ಸಾರ್ವಜನಿಕರಿಗೆ ಬೆಳಗ್ಗೆ, ಮಧ್ಯಾಹ್ನ ಹಾಗೂ ರಾತ್ರಿ ಉಚಿತವಾಗಿ ಉಪಹಾರದ ವ್ಯವಸ್ಥೆ ಮಾಡಲಾಗಿದೆ ಎಂದರು. ಜಲಪಾತ ವೀಕ್ಷಣೆಗೆ ಆಗಮಿಸುವ ಪ್ರವಾಸಿಗರು ಕುಳಿತು ವೀಕ್ಷಿಸಲು ಮೆಟ್ಟಿಲು, ಲೈಟಿಂಗ್ ವ್ಯವಸ್ಥೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಅಕ್ವ ಪಾರ್ಕ್ ಅಭಿವೃದ್ಧಿ ಪಡಿಸಲು ಚಿಂತಿಸಲಾಗುತ್ತಿದೆ ಅಲ್ಲದೇ ಪಿಪಿಪಿ ಮಾಡಲ್‌ನಲ್ಲಿ ಉದ್ಯಾನವನ, ಜಲಕ್ರೀಡೆ ಮಾಡಲು ಯೋಜಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಬೆಳಗ್ಗೆ 11 ರಿಂದ 3 ರವರೆಗೆ ಸ್ಥಳೀಯ ಕಲಾವಿದರ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿದೆ. ಇದರೊಂದಿಗೆ ಜಿಲ್ಲೆಯಲ್ಲಿ ಉತ್ತಮವಾದ 2 ಅಥವಾ 3 ಶಾಲಾ/ ಕಾಲೇಜು ವಿದ್ಯಾರ್ಥಿಗಳಿಗೆ ಪ್ರದರ್ಶನ ನೀಡಲು ಅವಕಾಶ ನೀಡಲಾಗುವುದು ಎಂದರು.

ಕಾರ್ಯಕ್ರಮದ ವಿವರ: ಸೆ.13ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 3ರವರೆಗೆ ಸ್ಥಳೀಯ ಕಲಾವಿದರು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿ ಕೊಡಲಿದ್ದು, ಮಧ್ಯಾಹ್ನ 3 ರಿಂದ ಸಂಜೆ 6 ರವರೆಗೆ ಕಲಾವಿದರಾದ ಸಾಧ್ವಿನಿ ಕೊಪ್ಪ ಸಾಕ್ಷಿ ಕೊಲ್ಲೂರು, ಹನುಮಂತ ಹಾಗೂ ಕಂಬದ ರಂಗಯ್ಯ ಗಾಯಕರಿಂದ ಜಾನಪದ ಸಂಗೀತ ಕಾರ್ಯಕ್ರಮ ನಡೆಯಲಿದೆ. ಸಂಜೆ 6 ಗಂಟೆಗೆ ಹಾಸ್ಯನಟ ಶಿವರಾಜ್ ಕೆ.ಆರ್.ಪೇಟೆ ಮತ್ತು ತಂಡದಿಂದ ಕಾಮಿಡಿ ಶೋ ನಡೆಯಲಿದ್ದು, ಸಂಜೆ 6.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದರು.

ಸಂಜೆ 7.30ರಿಂದ ರಾತ್ರಿ 11ರವರೆಗೆ ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯಾ ಮತ್ತು ತಂಡದಿಂದ ಹಾಗೂ ಖ್ಯಾತ ಗಾಯಕಿ ಮಂಗಲಿ ಅವರಿಂದ ಸಂಗೀತ ಕಾರ್ಯಕ್ರಮ, ಚಲನಚಿತ್ರ ನಟಿಯರಾದ ರಾಗಿಣಿ ದ್ವಿವೇದಿ, ಮನ್ವಿತಾ ಹರೀಶ್ ಭಾಗವಹಿಸಲಿದ್ದು, ಅಂದಿನ ಕಾರ್ಯಕ್ರಮದಲ್ಲಿ ನಟ ಡಾಲಿ ಧನಂಜಯ ಪ್ರಮುಖ ಆಕರ್ಷಣೆಯಾಗಲಿದ್ದಾರೆ ಎಂದರು.

ಸೆ.14ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 3ರವರೆಗೆ ಸ್ಥಳೀಯ ಕಲಾವಿದರು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡಲಿದ್ದು, ಮಧ್ಯಾಹ್ನ 3 ರಿಂದ ಸಂಜೆ 4.30ರವರೆಗೆ ಜಾನಪದ ಕಲಾವಿದರಾದ ಸವಿತಕ್ಕ, ರವಿ ಮೂರುರು, ಶ್ರೀಹರ್ಷ ಹಾಗೂ ಮಲ್ಲಿಕಾರ್ಜುನ ಕೆಂಕೆರೆ ಅವರಿಂದ ಜಾನಪದ ಸಂಗೀತ ಕಾರ್ಯಕ್ರಮ ನಡೆಯಲಿದೆ. ಸಂಜೆ 4.30ರಿಂದ 6ರವರೆಗೆ ಬೆಂಗಳೂರಿನ Liquid Drums Fusion ತಂಡದಿಂದ Fusion Music Concert ಕಾರ್ಯಕ್ರಮ ನಡೆಯಲಿದೆ. ಸಂಜೆ 6ರಿಂದ 7ರವರೆಗೆ ಹಾಸ್ಯ ಕಲಾವಿದ ಗಂಗಾವತಿ ಪ್ರಾಣೇಶ್ ಮತ್ತು ತಂಡದಿಂದ ಕಾಮಿಡಿ ಶೋ ಜರುಗಲಿದೆ ಎಂದರು.

ಸಂಜೆ 7 ರಿಂದ 7.30ರವರೆಗೆ ಸಮಾರೋಪ ಕಾರ್ಯಕ್ರಮ ಮತ್ತು 7.30ರಿಂದ 11 ರವರೆಗೆ ಖ್ಯಾತ ಸಂಗೀತ ನಿರ್ದೇಶಕ ಗುರುಕಿರಣ್ ಹಾಗೂ ತಂಡದಿಂದ ಸಂಗೀತ ಕಾರ್ಯಕ್ರಮ, ನಟಿಯರಾದ ಹರ್ಷಿಕ ಪೂಣಚ್ಚ ಮತ್ತು ಭಾವನಾ ನೃತ್ಯ ಪ್ರದರ್ಶಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಹಿರಿಯ ನಟ ಕ್ರೇಜಿ ಸ್ಟಾರ್ ವಿ.ರವಿಚಂದ್ರನ್ ಪ್ರಮುಖ ಆಕರ್ಷಣೆಯಾಗಿದ್ದಾರೆ ಎಂದರು.

ಜಲಪಾತೋತ್ಸವದಲ್ಲಿ ಸರ್ಕಾರದ ವಿವಿಧ ಕಾರ್ಯಕ್ರಮಗಳ ವಿವಿಧ ಮಳಿಗೆಗಳನ್ನು ಪ್ರದರ್ಶಿಸಲಾಗುತ್ತಿದ್ದು, ಲೇಸರ್ ಲೈಟ್ ಶೋ, ಸೌಂಡ್ ಅಂಡ್ ಲೈಟ್ಸ್‌ಗಳನ್ನು ಆಯೋಜಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ರಾಘವೇಂದ್ರ, ವಾರ್ತಾಧಿಕಾರಿ ಎಚ್.ಎಸ್.ನಿರ್ಮಲಾ ಉಪಸ್ಥಿತರಿದ್ದರು.

ಬೇರೆಲ್ಲಾ ವೃತ್ತಿಗಿಂತ ಶಿಕ್ಷಕ ವೃತ್ತಿ ಶ್ರೇಷ್ಠ

ಶಾಸಕ ಹೆಚ್.ಟಿ.ಮಂಜು ಅಭಿಪ್ರಾಯ



ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಕೆ.ಆರ್.ಪೇಟೆ: ಎಲ್ಲಾ ವೃತ್ತಿಗಿಂತಲೂ ಶಿಕ್ಷಕ ವೃತ್ತಿ ಶ್ರೇಷ್ಠವಾಗಿದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಜ್ಞಾನ, ನೈತಿಕ ಮೌಲ್ಯಗಳನ್ನು ಕಲಿಸಿ ಉತ್ತಮ ವ್ಯಕ್ತಿಯನ್ನಾಗಿ ರೂಪಿಸುತ್ತಾರೆ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ಪಟ್ಟಣದ ಕೆಪಿಎಸ್ ಶಾಲೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಆವರಣದಲ್ಲಿ ತಾಲೂಕು ಆಡಳಿತದಿಂದ ನಡೆದ ಶಿಕ್ಷಕರ ದಿನಾಚರಣೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶಿಕ್ಷಕರು ಮಕ್ಕಳನ್ನು ಜ್ಞಾನವಂತರು ಹಾಗೂ ಸುಸಂಸ್ಕೃತರನ್ನಾಗಿಸಲು ಶ್ರಮಿಸುತ್ತಾರೆ. ನಾವು ಯಾರಿಗೆ ಗೌರವ ಕೊಡದಿದ್ದರೂ ನಮಗೆ ವಿದ್ಯೆ ಕಲಿಸಿದ ಗುರುಗಳಿಗೆ ಗೌರವ ಕೊಡುವುದನ್ನು ಮರೆಯುವುದಿಲ್ಲ. ಇಂತಹ ಗೌರವ ಉಳಿಸಿಕೊಳ್ಳಲು ಶಿಕ್ಷಕರು ಶೈಕ್ಷಣಿಕ ಪ್ರಗತಿ ಸಾಧಿಸಬೇಕು ಎಂದರು.

ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಸರ್ವಪಲ್ಲಿ ರಾಧಾಕೃಷ್ಣನ್ ಹಾಗೂ ಸಾವಿತ್ರಿಬಾಯಿ ಫುಲೆ ಅವರ ಭಾವಚಿತ್ರ ಅನಾವರಣಗೊಳಿಸಿ ಮಾತನಾಡಿ, ಪೋಷಕರು ಶಿಕ್ಷಕರಿಂದ ಬಹಳಷ್ಟು ನಿರೀಕ್ಷಿಸುತ್ತಾರೆ. ಹೀಗಾಗಿ ಅವರ ನಿರೀಕ್ಷೆ ಹುಸಿಗೊಳಿಸದೇ, ವಿದ್ಯಾರ್ಥಿಗಳನ್ನು ತಯಾರು ಮಾಡಬೇಕು. ಶಿಕ್ಷಕರು ಪಾಠದ ಜೊತೆಗೆ ವಿದ್ಯಾರ್ಥಿಗಳ ಆರೋಗ್ಯದ ಕಡೆಗೂ ಹೆಚ್ಚು ಗಮನ ಹರಿಸಬೇಕು ಎಂದರು.

ಪಾಂಡವಪುರ ಉಪವಿಭಾಗಾಧಿಕಾರಿ ಡಾ.ಕೆಆರ್.ಶ್ರೀನಿವಾಸ್, ಶಿಕ್ಷಣ ತಜ್ಞ ಮಂಗಳೂರು ಅರವಿಂದ್ ಚಿಕ್ಕಾಡಿ ಗುಣಮಟ್ಟದ ಶಿಕ್ಷಣದಲ್ಲಿ ಶಿಕ್ಷಕರ ಪಾತ್ರ ಕುರಿತು ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನ ಪ್ರವಾಸಿ ಮಂದಿರದಿಂದ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರವನ್ನು ವೇದಿಕೆವರೆಗೆ ಮೆರವಣಿಗೆ ಮಾಡಲಾಯಿತು. ಇದೇ ವೇಳೆ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಪುರಸಭಾಧ್ಯಕ್ಷೆ ಪಂಕಜಾ, ಉಪಾಧ್ಯಕ್ಷೆ ಸೌಭಾಗ್ಯ, ತಹಸಿಲ್ದಾರ್ ಅಶೋಕ್, ಬಿಇಓ ತಿಮ್ಮೇಗೌಡ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಯತೀಶ್, ಕ್ಷೇತ್ರ ಸಮನ್ವಯಾಧಿಕಾರಿ ಮೋಹನ್, ತಾಪಂ ಇಓ ಕೆ.ಸುಷ್ಮಾ, ಸಿಪಿಐ ಸುಮಾರಾಣಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಸ್.ಆರ್.ಆನಂದಕುಮಾರ್, ಹೆಚ್.ಆರ್.ಪೂರ್ಣಚಂದ್ರ ತೇಜಸ್ವಿ, ಕಾರ್ಯದರ್ಶಿ ಎಲ್.ಎಸ್.ಧರ್ಮಪ್ಪ, ನರಸನಾಯಕ್, ಎಸ್.ಎಂ.ಬಸವರಾಜು, ಯೋಗೇಶ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಅಧ್ಯಾಪನ ವಿಜ್ಞಾನೋತ್ಸವ ಕಾರ್ಯಕ್ರಮ ಯಶಸ್ವಿ



ಸುದ್ದಿಗೋಷ್ಠಿಯಲ್ಲಿ ದಿವ್ಯಶ್ರೀ ಮಾತನಾಡಿದರು.

ಮಂಡ್ಯ, ಸೆ.5– ಜಿಲ್ಲಾಡಳಿತ, ಜಿಪಂ, ಶಾಲಾ ಶಿಕ್ಷಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಅಧ್ಯಾಪನ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ 2025ನೇ ಸಾಲಿನ ಅಧ್ಯಾಪನ ವಿಜ್ಞಾನೋತ್ಸವ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿದ್ದು, ಹಲವು ಶಾಲೆಗಳು ಪ್ರಶಸ್ತಿಗೆ ಭಾಜನವಾಗಿವೆ ಎಂದು ಸಂಸ್ಥೆಯ ದಿವ್ಯಶ್ರೀ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಜ್ಞಾನೋತ್ಸವದಲ್ಲಿ 8224 ವಿದ್ಯಾರ್ಥಿಗಳು ಭಾಗವಹಿಸಿದ್ದು, 5264 ವಿದ್ಯಾರ್ಥಿಗಳು 2632 ಮಾದರಿಗಳನ್ನು ಪ್ರಸ್ತುತ ಪಡಿಸಿದ್ದರು. 12 ವಿದ್ಯಾರ್ಥಿಗಳು 6 ಮಾದರಿಗಳಿಗೆ ಜಿಲ್ಲಾ ಮಟ್ಟದಲ್ಲಿ ಬಹುಮಾನಕ್ಕೆ ಭಾಜನರಾಗಿದ್ದಾರೆ ಎಂದರು.

ನಾಗಮಂಗಲದ ಬಿಜಿಎಸ್ ಮಾಡೆಲ್ ಪಬ್ಲಿಕ್ ಶಾಲೆ 3 ಬಹುಮಾನ ಪಡೆಯುವ ಮೂಲಕ ಭಾಗವಹಿಸುವಿಕೆಯಲ್ಲಿ ಅತ್ಯುತ್ತಮ ಶಾಲೆ ಪ್ರಶಸ್ತಿಗೆ ಭಾಜನವಾಗಿದೆ. ಅತಿ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ ಹಿನ್ನೆಲೆಯಲ್ಲಿ 9 ಶಾಲೆಗಳಿಗೆ ಉತ್ತಮ ಶಾಲೆ ಪ್ರಶಸ್ತಿ ನೀಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ವಿಜೇತರಾದ 310 ವಿದ್ಯಾರ್ಥಿಗಳನ್ನು ಇಸ್ರೋ ಮ್ಯೂಸಿಯಂ ಮತ್ತು 120 ವಿದ್ಯಾರ್ಥಿಗಳನ್ನು ವಿಶ್ವೇಶ್ವರಯ್ಯ ಮ್ಯೂಸಿಯಂಗೆ ಉಚಿತ ವೀಕ್ಷಣೆಗೆ ಅನುವು ಮಾಡಲಾಗಿದೆ ಎಂದರು.

ತೀರ್ಪುಗಾರರಾಗಿ ಇನ್ಫೋಸಿಸ್‌ನ ಡಾ.ಪ್ರೀತಿ ಮಹದೇವ್ ಸೇರಿದಂತೆ ಕಾವೇರಿ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ, ಪಿಇಎಸ್ ಇಂಜಿನಿಯರಿಂಗ್ ಕಾಲೇಜು, ಜಿ.ಮಾದೇಗೌಡ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ, ಶಂಕರಗೌಡ ಕಾಲೇಜ್ ಆಫ್ ಎಜುಕೇಶನ್, ಮಂಡ್ಯ ವಿವಿಯಿಂದ 100 ಪ್ರೊಫೆಸರ್‌ಗಳು ಭಾಗವಹಿಸಿದ್ದರು ಎಂದರು.

ಕಾರ್ಯಕ್ರಮದಲ್ಲಿ ಅನಿಕೇತನ ಶಾಲೆ, ಎನ್‌ಎಸ್‌ಎಸ್ ತಂಡ, ಬಾಲಕಿಯರ ಪದವಿ ಪೂರ್ವ ಕಾಲೇಜು, ಸ್ಕೌಟ್ ಅಂಡ್ ಗೈಡ್ ತಂಡದ 200 ಸ್ವಯಂ ಸೇವಕ ವಿದ್ಯಾರ್ಥಿಗಳು ನಿರ್ವಹಣೆಯಲ್ಲಿ ಸಹಕಾರ ನೀಡಿದರು ಎಂದರು. ಗೋಷ್ಠಿಯಲ್ಲಿ ಕಾರ್ಯದರ್ಶಿ ಪ್ರವೀಣ್.ಜಿ.ಟಿ, ಪೃಥ್ವಿ ಇದ್ದರು.

ಒಂದನೇ ಪುಟದಿಂದ

ವಾರ್ಷಿಕ 65 ಸಾವಿರ ಕೋಟಿ ವೆಚ್ಚ

ಯಾರಿಗೂ ಈ ಸ್ಥಿತಿ ಬರಬಾರದು ಎಂಬ ಕಾರಣಕ್ಕೆ ಅನ್ನಭಾಗ್ಯ ಯೋಜನೆ ಜಾರಿಗೆ ತಂದೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ನಡವಳಿಕೆಗಳು ಮಕ್ಕಳ ಮೇಲೆ ಅಪಾರ ಪ್ರಭಾವ ಬೀರುತ್ತವೆ. ಆದ್ದರಿಂದ ಶಿಕ್ಷಕರು ಅತ್ಯುನ್ನತ ಮಾನವೀಯ ಮತ್ತು ನಾಗರಿಕ ಮೌಲ್ಯಗಳನ್ನು ಪಾಲಿಸಬೇಕು ಎಂದರು. ಡಾ.ಸರ್ವಪಲ್ಲಿ ರಾಧಾಕೃಷ್ಣ ಅತ್ಯಂತ ನೈತಿಕ ಮೌಲ್ಯಗಳುಳ್ಳ ಶಿಕ್ಷಕರೂ, ರಾಷ್ಟ್ರಪತಿಗಳೂ ಆಗಿದ್ದರು. ಅವರ ಆದರ್ಶ ಪಾಲಿಸುವುದೇ ಅವರಿಗೆ ಸಲ್ಲಿಸುವ ಅತ್ಯುನ್ನತ ಗೌರವ. ಮಕ್ಕಳನ್ನು ಮೊಬೈಲ್ ಗೀಳಿನಿಂದ ಹೊರತರುವ ಕೆಲಸವನ್ನು ಶಿಕ್ಷಕರು ಪರಿಣಾಮಕಾರಿಯಾಗಿ ಮಾಡಬೇಕು. ಮೊಬೈಲ್ ಬಿಡಿ–ಪುಸ್ತಕ ಹಿಡಿ ಎನ್ನುವ ಮೌಲ್ಯ ಪ್ರತೀ ಶಾಲೆ ಮತ್ತು ಮನೆಗಳಲ್ಲೂ ಜಾರಿ ಆಗಲಿ ಎಂದು ಕರೆ ನೀಡಿದರು. ಸಾವಿತ್ರಿ ಫುಲೆ ಮತ್ತು ಫಾತಿಮಾ ಶೇಕ್ ದಮನಿತ ಮಹಿಳೆಯರಿಗೆ ಶಿಕ್ಷಣ ಕೊಟ್ಟ ಮೊದಲ ಶಿಕ್ಷಕಿಯರು. ಇವರು ಎಲ್ಲಾ ಅವಮಾನ ಸಹಿಸಿಕೊಂಡು ಮಹಿಳೆಯರಿಗೆ ಶಿಕ್ಷಣ ನೀಡಿದರು ಎಂದರು.

ಹೆಸರನ್ನೇ ಆ ಶಾಲೆಗಿಡುವ ತೀರ್ಮಾನ

ನಿರ್ಮಾಣ ಮಾಡಬೇಕು. ನಗರ ಮಾದರಿಯಲ್ಲಿ ಸಿಬಿಎಸ್‌ಇ ಶಿಕ್ಷಣ ದೊರೆಯಬೇಕೆಂಬುದು ನಮ್ಮ ಆಶಯ, 2 ಸಾವಿರ ಶಾಲೆ ನಿರ್ಮಾಣ ನಮ್ಮ ಗುರಿ. ಸರ್ಕಾರಿ ಶಾಲೆಗಳನ್ನು ತೊರೆದು ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುತ್ತಿದ್ದಾರೆ. ರಾಜ್ಯದಲ್ಲಿ 7,800 ಕೋಟಿ ರೂ.ಗಳಷ್ಟು ಸಿಎಸ್‌ಆರ್ ಹಣ ಲಭ್ಯವಿದೆ. ಒಂದಷ್ಟು ಉದ್ಯಮಿಗಳು ಇನ್ನೂ ಮನಸು ಮಾಡಿಲ್ಲ, ನನ್ನ ಕ್ಷೇತ್ರದಲ್ಲಿ ಕೆಪಿಎಸ್ ಶಾಲೆಗಳಲ್ಲಿ ಅತ್ಯುತ್ತಮ ಕೆಲಸವಾಗಿದೆ. ಟೊಯೋಟಾ ಕಂಪನಿ ತಲಾ 10 ಕೋಟಿ ರೂ. ವೆಚ್ಚದಲ್ಲಿ 7 ಕೆಪಿಎಸ್ ಶಾಲೆ ನಿರ್ಮಾಣ ಮಾಡುತ್ತಿದ್ದಾರೆ ಎಂದರು. ಆಯಾ ಊರಿನಲ್ಲಿಯೇ ಉತ್ತಮ ಶಿಕ್ಷಣ ದೊರೆಯಬೇಕು. ಇಲ್ಲವಾದರೆ ವಲಸೆ ತಡೆಯಲಾಗದು. ಶಿಕ್ಷಣಕ್ಕಾಗಿ ಬೆಂಗಳೂರಿಗೆ ನಮ್ಮ ತಂದೆ ತಾಯಿ ನನ್ನನ್ನು ಕಳುಹಿಸಿದರು, ನಾನು ಮರಳಿ ಊರಿಗೆ ಹೋಗಲೇ ಇಲ್ಲ.

ಗ್ರಾಮೀಣ ಭಾಗದಲ್ಲಿ ಮೂರು ಪಂಚಾಯತ್ ಸೇರಿದಂತೆ ಒಂದು ಕೆಪಿಎಸ್ ಶಾಲೆ ನಿರ್ಮಾಣ ಮಾಡಲಾಗುತ್ತದೆ. ನಾನು ನಮ್ಮ ಊರಿನಲ್ಲಿ 3 ಶಾಲೆಗಳನ್ನು ದತ್ತು ತೆಗೆದುಕೊಳ್ಳಲು ಮಗಳಿಗೆ ಸೂಚಿಸಿದ್ದೇನೆ.

ರಾಜೀವ್ ಗಾಂಧಿ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತಂದು ದೇಶದ ಶೈಕ್ಷಣಿಕ ಬೆಳವಣಿಗೆಗೆ ಕೊಡುಗೆ ನೀಡಿದರು. ಆಪರೇಷನ್ ಬ್ಲಾಕ್ ಬೋರ್ಡ್ ಅಭಿಯಾನ ಮೂಲಕ ಶಿಕ್ಷಣ ಕ್ರಾಂತಿ ಮಾಡಿದರು. ಅನೇಕ ರಾಜ್ಯಗಳು ಶೇ.30ರಷ್ಟು ಹಣವನ್ನು ಶಿಕ್ಷಣಕ್ಕೆ ವೆಚ್ಚ ಮಾಡುತ್ತಿವೆ. ನಾನು ರಾಜಕಾರಣಿ ಜೊತೆಗೆ ಶಿಕ್ಷಣ ಪ್ರೇಮಿ. ವಿದ್ಯಾರ್ಥಿ ಜೀವನದಲ್ಲಿ ಶಿಕ್ಷಣದ ಕಡೆಗೆ ಹೆಚ್ಚು ಗಮನಹರಿಸಲಿಲ್ಲ. ಓದುವಾಗಲೇ ರಾಜಕೀಯದ ಕಡೆಗೆ ಆಕರ್ಷಿತನಾದೆ. ಚುನಾವಣೆಯಲ್ಲಿ ಗೆದ್ದು ವಿಧಾನಸಭೆಗೆ ಬಂಗಾರಪ್ಪ, ಕೆ.ಎಚ್.ರಂಗನಾಥ್, ವೀರಪ್ಪ ಮೊಯಿಲಿ, ರಾಮಕೃಷ್ಣ ಹೆಗಡೆ ಅವರ ಭಾಷಣ, ವಿಚಾರಧಾರೆ ನೋಡಿದ ನಂತರ ನಾನು ಶಿಕ್ಷಣಕ್ಕೆ ಆದ್ಯತೆ ನೀಡಲಿಲ್ಲ ಎಂಬ ಅರಿವಾಯಿತು.

ಪದವಿ ಪಡೆದ ಸಂಭ್ರಮ: ನನ್ನ 47ನೇ ವಯಸ್ಸಿನಲ್ಲಿ ಪದವಿ ಪಡೆದೆ, ನಾನು ಸಚಿವನಾದಾಗ ಆಗದ ಸಂತೋಷ ಪದವಿ ಪ್ರಮಾಣಪತ್ರ ಪಡೆದಾಗ ಆಯಿತು. ಎನ್‌ಪಿಎಸ್ ಶಾಲೆಯ ಮುಖ್ಯಸ್ಥರಾಗಿದ್ದ ಗೋಪಾಲಕೃಷ್ಣ ನನ್ನನ್ನು ಶಾಲೆಯಿಂದ ತೆಗೆದು ಹಾಕಿದರು. ನಂತರ ಅವರ ಸಹಾಯದಲ್ಲೇ ಕೆಲವು ಶಾಲೆ ಆರಂಭಿಸಿದೆ. ನಮ್ಮ ಊರಿನಲ್ಲಿ ಶಿಕ್ಷಣಕ್ಕಾಗಿಯೇ ಹತ್ತಾರು ಎಕರೆ ಜಮೀನು ದಾನ ಮಾಡಿದ್ದೇನೆ.

ನಮ್ಮ ಕಾಲದಲ್ಲಿ ಕಲಿಸುತ್ತಿದ್ದ ರೀತಿ ಈಗ ಇಲ್ಲ. ಎನ್‌ಪಿಎಸ್ ಶಾಲೆಯ ಗೋಪಾಲಕೃಷ್ಣ ಅವರು ಎರಡು ಕಿವಿಗಳ ಮಧ್ಯೆ ಸಣ್ಣ ಕಲ್ಲನ್ನು ಇಟ್ಟು ಕಿವಿ ಹಿಂಡುತ್ತಿದ್ದರು. ಮೊಣಕಾಲಿನ ಮೇಲೆ ನಿಲ್ಲಿಸುತ್ತಿದ್ದರು. ಆದರೆ, ಈಗ ಮಕ್ಕಳನ್ನು ಹೊಡೆಯುವಂತೆಯೂ ಇಲ್ಲ, ಬೈಯ್ಯುವಂತೆಯೂ ಇಲ್ಲ. ತ್ರೇತಾಯುಗದಲ್ಲಿ ಗುರು ಶಿಷ್ಯನಿಗೆ ಜಂಗಿಸಿ ವಿದ್ಯೆ ಕಲಿಸಿದರೆ ಮಹಾ ಪ್ರಸಾದವೆಂದನಯ್ಯ, ದ್ವಾಪರದಲ್ಲಿ ಶಿಷ್ಯನಿಗೆ ದಂಡಿಸಿ ವಿದ್ಯೆ ಕಲಿಸಿದರೆ, ಕಲಿಯುಗದಲ್ಲಿ ವಂದಿಸಿ ವಿದ್ಯೆ ಕಲಿಸಬೇಕಾಗಿದೆ. ದೇಶಕ್ಕೆ ಕೃಷಿಕ, ಸೈನಿಕ, ಶಿಕ್ಷಕ ಆಧಾರ ಸ್ತಂಭ.

ಮೊಬೈಲ್ ಬಂದ ಪರಿಣಾಮ ಮಕ್ಕಳೇ ಶಿಕ್ಷಕರ ತಪ್ಪು ಹುಡುಕುವಂತಾಗಿದೆ. ಈಗ ಕೃತಕ ಬುದ್ಧಿಮತ್ತೆ (ಎಐ) ಕಡೆ ಸಾಗುತ್ತಿದ್ದು ಮತ್ತೊಂದು ಹಂತ ತಲುಪಿದೆ.

ಮೊಬೈಲ್ ಫೋನ್‌ನಿಂದ ಉಪಯೋಗ ಎಷ್ಟಿದೆಯೋ ಕೆಟ್ಟ ಪರಿಣಾಮಗಳು ಅಷ್ಟೇ ಇವೆ. ಉತ್ತರ ಭಾರತಕ್ಕೆ ಹೋಲಿಸಿದರೆ ನಮ್ಮಲ್ಲಿ ಉತ್ತಮ ಶಿಕ್ಷಣ ವ್ಯವಸ್ಥೆ ಇದೆ. ಬೆಂಗಳೂರಿನಲ್ಲಿ ಸುಮಾರು 25 ಲಕ್ಷ ಐಟಿ ಉದ್ಯೋಗಿಗಳಿದ್ದಾರೆ. ಕ್ಯಾಲಿಫೋರ್ನಿಯಾದಲ್ಲಿ 23 ಲಕ್ಷ ಇದ್ದಾರೆ. ಟಾಟಾ, ಎಚ್‌ಎಂಟಿ, ಬಿಇಎಲ್, ಬಿಇಎಂಎಲ್, ಇಸ್ರೋ ದಂತಹ ಸಂಸ್ಥೆಗಳು ಬೆಂಗಳೂರಿನಲ್ಲಿವೆ. ಶಿಕ್ಷಕರು ಹೊಸ ವಿಚಾರಗಳತ್ತ ಗಮನ ಹರಿಸಬೇಕು. ಎಐ ಎಲ್ಲವನ್ನು ನಿಯಂತ್ರಿಸುತ್ತಿದೆ. ಅದಕ್ಕೆ ತಕ್ಕಂತೆ ನೀವು ತಯಾರಿ ಮಾಡಿಕೊಳ್ಳಬೇಕು. ಸಮಾಜಕ್ಕೆ ಉತ್ತಮ ಪ್ರಜೆಗಳನ್ನು ತಯಾರು ಮಾಡಿದ ಆತ್ಮತೃಪ್ತಿ ನಿಮ್ಮಲ್ಲಿ ಇರಲಿ. ಗುರು ಗುರಿ ನೀಡುತ್ತಾನೆ. ಗುರಿ ತಲುಪಬೇಕಾದರೆ ಗುರು ಇರಬೇಕು ಎಂದರು.

ಧರ್ಮ ಜಾಗೃತಿ ಸಮಾವೇಶ ಆಗ್ರಹ

● ಧರ್ಮಸ್ಥಳ ಮತ್ತು ಡಿ. ವೀರೇಂದ್ರ ಹೆಗ್ಗಡೆಯವರ ವಿರುದ್ಧ ನಡೆಯುತ್ತಿರುವ ಷಡ್ಯಂತ್ರ, ಸಾಮಾಜಿಕ ಜಾಲತಾಣ ಮೂಲಕ ನಡೆಯುತ್ತಿರುವ ಸುಳ್ಳು ಪ್ರಚಾರಕ್ಕೆ ಖಂಡನೆ.

● ಹಿಂದೂ ಧಾರ್ಮಿಕ ನಂಬಿಕೆಗಳಿಗೆ ಘಾಸಿ ಮಾಡುವ ಹೇಳಿಕೆಯನ್ನು ನೀಡುತ್ತಿರುವ ವ್ಯಕ್ತಿಗಳ ವಿರುದ್ಧ ಮತ್ತು ಅವರ ಹಿಂದೆ ನಿಂತು ಅವರಿಗೆ ಸಹಕಾರ ನೀಡುತ್ತಿರುವ ವ್ಯಕ್ತಿ,ಸಂಘ ಸಂಸ್ಥೆಗಳ ವಿರುದ್ಧ ಸರಕಾರ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮ ಕೈಗೊಳ್ಳುವಂತೆ ಈ ಸಭೆಯ ಮೂಲಕ ಒತ್ತಾಯ.

● ಶ್ರದ್ಧಾ ಕೇಂದ್ರಗಳ ವಿರುದ್ಧ, ಧಾರ್ಮಿಕ ನಂಬಿಕೆಗಳ ವಿರುದ್ಧ ಮತ್ತು ಧಾರ್ಮಿಕ ಮುಖಂಡರ ವಿರುದ್ಧ ವ್ಯವಸ್ಥಿತ ಷಡ್ಯಂತ್ರಗಳು ಮುಂದಿನ ದಿನಗಳಲ್ಲಿ ನಡೆದರೆ ಎಲ್ಲಾ ಧಾರ್ಮಿಕ ಮುಖಂಡರು ಸಂಘಟಿತರಾಗಿ, ಸಮರ್ಥ ಯೋಜನೆಯನ್ನು ರೂಪಿಸಿ, ಅದರ ವಿರುದ್ಧ ಹೋರಾಡಲು ನಿರ್ಣಯ.

● ಸಂಘಟನಾ ದೃಷ್ಟಿಯಿಂದ ಈ ಧರ್ಮ ಜಾಗೃತಿ ಸಮಿತಿಯನ್ನು ಇನ್ನಷ್ಟು ಬಲಪಡಿಸಿ ವರ್ಷಕ್ಕೆ ಒಂದು ಬಾರಿಯಾದರೂ ಈ ರೀತಿಯ ಸಮಾವೇಶವನ್ನು ಆಯೋಜಿಸಿ ಸೂಕ್ತ ಕಾರ್ಯಯೋಜನೆಗಳನ್ನು ರೂಪಿಸಲು ನಿರ್ಣಯ.

● ಶ್ರೀ ಕ್ಷೇತ್ರ ಧರ್ಮಸ್ಥಳ ಮತ್ತು ಧರ್ಮಾಧಿಕಾರಿಗಳಾದ ಡಾ ಡಿ.ವೀರೇಂದ್ರ ಹೆಗ್ಗಡೆಯವರೊಂದಿಗೆ ದೃಢವಾಗಿ ನಿಂತು ಧರ್ಮ ಸಂರಕ್ಷಣೆಯನ್ನು ಮಾಡಲು ಕಟಿಬದ್ಧರಾಗಿರುತ್ತೇವೆ ಎಂಬ ತೀರ್ಮಾನ.

ಮನಾಫ್‌ಗೆ ಎಸ್‌ಐಟಿ ನೋಟಿಸ್

ಮನಾಫ್‌ರ ಹಿನ್ನೆಲೆ: ಉತ್ತರ ಕನ್ನಡ ಜಿಲ್ಲೆಯ ಶಿರೂರಿನಲ್ಲಿ ಸಂಭವಿಸಿದ್ದ ಗುಡ್ಡ ಕುಸಿತ ದುರಂತದಲ್ಲಿ ಸಿಲುಕಿ ಲಾರಿ ಚಾಲಕ ಅರ್ಜುನ್ ಮೃತಪಟ್ಟಿದ್ದ. ಆ ಲಾರಿಯ ಮಾಲೀಕರೇ ಕೇರಳದ ಯೂಟ್ಯೂಬರ್ ಮನಾಫ್. ಇದೇ ಮನಾಫ್ ಬುರುಡೆ ಪ್ರಕರಣಕ್ಕೆ ಸಂಬಂಧಿಸಿ ಯೂಟ್ಯೂಬ್‌ನಲ್ಲಿ ಕಥೆ ಕಟ್ಟಿದ್ದು, ಜಯಂತ್.ಟಿ ಮೂಲಕ ಈ ಕಥೆಯನ್ನು ಕೇರಳಕ್ಕೂ ಹಬ್ಬಿಸಿದ್ದಾನೆ. ಸುಜಾತ ಭಟ್ ಹಾಗೂ ಬುರುಡೆ ಪ್ರಕರಣದ ಕಥೆಗಳನ್ನು ಕೂಡಾ ಈ ಹಿನ್ನೆಲೆಯಲ್ಲಿ ಗಟ್ಟಿಯಾಗಿ ಹರಿಬಿಟ್ಟಿದ್ದಾನೆ. ಕೇರಳದ ಮಾಧ್ಯಮಗಳೂ ಸಹ ಈ ಸುಳ್ಳು ಪ್ರಚಾರಕ್ಕೆ ಒಳಗಾಗಿದ್ದವು ಎಂಬ ಆರೋಪ ಕೇಳಿಬಂದಿದೆ.

ಪ್ರಮುಖ ಪುರಾವೆಗಳ ಲಭ್ಯತೆ: ಈ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ತಂಡಕ್ಕೆ ಕಾಡಿನಿಂದ ಬುರುಡೆ ತಂದಿರುವ ಮೂಲ ವಿಡಿಯೋ ಲಭ್ಯವಾಗಿದೆ. ಈ ವಿಡಿಯೋವನ್ನು ಮನಾಫ್ ಜುಲೈ 11ರಂದು ತನ್ನ ಯೂಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡಿದ್ದಾನೆ. ವಿಡಿಯೋದಲ್ಲಿ ಜಯಂತ್ ಬಂಗ್ಲೆಗುಡ್ಡೆಯಿಂದಲೇ ಬುರುಡೆಯನ್ನು ತಂದಿರುವುದಾಗಿ ಹೇಳಿದ್ದಾನೆ. ಇದು ಭೂಮಿಯ ಮೇಲ್ಭಾಗದಲ್ಲಿಯೇ ದೊರೆತ ಬುರುಡೆಯಾಗಿದ್ದು, ಮರಕ್ಕೆ ಸೀರೆ ಕಟ್ಟಿದ ಸ್ಥಳದ ಪಕ್ಕದಲ್ಲಿಯೇ ಪತ್ತೆಯಾಗಿದೆ. ಕತ್ತಿ ಬಳಸಿ ಬುರುಡೆಯನ್ನು ಎತ್ತಿ ತಂದಿರುವುದು ವಿಡಿಯೋದಲ್ಲಿ ಸ್ಪಷ್ಟವಾಗಿದೆ. ಇದರಿಂದ ಬುರುಡೆಯನ್ನು ಧರ್ಮಸ್ಥಳದ ಸುತ್ತಮುತ್ತಲ ಪ್ರದೇಶಗಳಿಂದಲೇ ತರಲಾಗಿದೆ ಎಂಬ ಅನುಮಾನಗಳು ಬಲಗೊಂಡಿವೆ ಎಂದು ವಿಡಿಯೋದಲ್ಲಿ ತೋರಿಸಿದ್ದ.

ಬಿಡಾರ ಹೂಡಿದ ಫಾಸ್ಟ್‌ಫುಡ್‌ಗಳು

ನೀಡುತ್ತಾರೆ. ರಾಷ್ಟ್ರೀಯ ಹೆದ್ದಾರಿಯಾಗಿರುವುದರಿಂದ ನಿರಂತರ ವಾಹನ ದಟ್ಟಣೆ ಇರುತ್ತದೆ. ಫಾಸ್ಟ್‌ಫುಡ್ ವ್ಯಾಪಾರ ನಡೆಸುವ ಸಮೀಪದಲ್ಲೇ ಶಾಲಾ–ಕಾಲೇಜುಗಳಿವೆ. ಪಾರ್ಕ್ ಹಾಗೂ ಯೋಗ ಕೇಂದ್ರಗಳಿವೆ. ಅಲ್ಲದೆ ಇದು ಜನವಸತಿ ಪ್ರದೇಶವೂ ಆಗಿದೆ. ಫಾಸ್ಟ್‌ಫುಡ್ ಗಾಡಿಗಳನ್ನು ಒಂದರ ಪಕ್ಕ ಒಂದರಂತೆ ನಿಲ್ಲಿಸಿಕೊಂಡು ಸಸ್ಯಾಹಾರ ಮಾತ್ರವಲ್ಲದೆ ಮಾಂಸಾಹಾರ ವನ್ನೂ ವ್ಯಾಪಾರ ಮಾಡುವುದರಿಂದ ಸ್ಥಳೀಯರು ನಿತ್ಯ ನರಕ ಅನುಭವಿಸುವಂತಾಗಿದೆ. ಸಂಜೆ ವೇಳೆ ಮನೆಯಿಂದ ಹೊರಗೆ ಹೋಗಿ ಬರುವುದಕ್ಕೂ ಕಷ್ಟವಾಗುತ್ತದೆ. ಫಾಸ್ಟ್‌ಫುಡ್ ಬಳಿ ಗುಂಪು ಗುಂಪಾಗಿ ಜನ ನಿಲ್ಲುವುದರಿಂದ ವಿದ್ಯಾರ್ಥಿಗಳು ಓಡಾಡಲು ಭಯಪಡುತ್ತಾರೆ. ಹಿರಿಯರು, ಮಹಿಳೆಯರು ಪಾರ್ಕ್‌ಗೆ ಹೋಗಲು ಹೆದರುತ್ತಾರೆ. ಎಲ್ಲೆಂದರಲ್ಲಿ ಕಸ ಸುರಿಯುವುದರಿಂದ ಮತ್ತೆ ಅಶುಚಿತ್ವ ತಾಂಡವವಾಡುತ್ತದೆ. ಈ ಸ್ಥಳದಲ್ಲಿ ಅಪಘಾತ ಸಂಭವಿಸುವ ಸಾಧ್ಯತೆಯೂ ಹೆಚ್ಚಾಗಿದೆ. ರಾಷ್ಟ್ರಪತಿಗಳು ಬಂದು ಹೋದ ಬಳಿಕ ಜನಸಾಮಾನ್ಯರ ಜೀವಕ್ಕೆ ಬೆಲೆಯೇ ಇಲ್ಲ ಎಂಬಂತೆ ಪಾಲಿಕೆಯವರು ನಿರ್ಲಕ್ಷಿಸುತ್ತಿರುವುದು ವಿಷಾದನೀಯ ಎಂದು ಸಾರ್ವಜನಿಕರು ನೊಂದು ನುಡಿದಿದ್ದಾರೆ.

ನಿರ್ಧಾರ ದೃಢವಾಗಿರಲಿ: ಯಾರೂ ವ್ಯಾಪಾರಿಗಳ ವಿರೋಧಿಗಳಲ್ಲ. ಆದರೆ ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ವ್ಯಾಪಾರಿಗಳೂ ಸಹಕರಿಸಬೇಕು. ರಾಷ್ಟ್ರೀಯ ಹೆದ್ದಾರಿಯಲ್ಲಿ ಈ ರೀತಿ ಫಾಸ್ಟ್‌ಫುಡ್ ಅಂಗಡಿಗಳಿಗೆ ಅವಕಾಶ ನೀಡುವುದು ಸೂಕ್ತವಲ್ಲ. ಪರಿಸರ ಹಾಳಾಗುವುದರ ಜೊತೆಗೆ ಅಪಘಾತಗಳು ಸಂಭವಿಸಿ ಜೀವಹಾನಿಯಾಗಬಹುದು. ಈ ಮಾರ್ಗದಲ್ಲಿ ಸಂಚರಿಸುವ ಪ್ರವಾಸಿಗರಲ್ಲಿರುವ ಮೈಸೂರಿನ ಬಗೆಗಿನ ಕಲ್ಪನೆ ಸುಳ್ಳಾಗಬಹುದು. ಮೈಸೂರು ನಗರ ಪಾಲಿಕೆ ಅಧಿಕಾರಿಗಳು ತಮ್ಮ ನಿರ್ಧಾರಕ್ಕೆ ಬದ್ಧರಾಗಬೇಕು. ರಾಷ್ಟ್ರಪತಿಗಳ ಪ್ರವಾಸದ ಕಾರಣಕ್ಕೆ ತೆರವು ಕಾರ್ಯಾಚರಣೆ ನಡೆಸಿದ್ದರೂ ಸರಿಯೇ? ಮತ್ತೆ ಫಾಸ್ಟ್‌ಫುಡ್ ವಲಯವಾಗಲು ಅವಕಾಶ ಮಾಡಿಕೊಡಬಾರದು ಎಂದು ಸ್ಥಳೀಯರು ಮನವಿ ಮಾಡಿದ್ದಾರೆ.

ಸಾಧಕ ಶಿಕ್ಷಕರಿಗೆ ರೋಟರಿ ಆದರ್ಶ ಶಿಕ್ಷಕ ಪ್ರಶಸ್ತಿ ಪ್ರದಾನ



ಮೈಸೂರು ವಿಜಯನಗರ ರೈಲ್ವೆ ಬಡಾವಣೆಯ ರೋಟರಿ ಭವನದಲ್ಲಿ ಶುಕ್ರವಾರ ಶಿಕ್ಷಕರಿಗೆ 'ರೋಟರಿ ಆದರ್ಶ ಶಿಕ್ಷಕ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಸೆ.5(ಎಸ್‌ಪಿಎನ್)– ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮೈಸೂರು ದೇವರಾಜ ಬಾಲಕಿಯರ ಪಿಯು ಕಾಲೇಜು ಪ್ರಾಂಶುಪಾಲ ಡಾ.ಎಂ.ಜಿ.ರಮಾನಂದ, ಕುವೆಂಪುನಗರ ಕೆಪಿಎಸ್ ಶಾಲೆಯ ಸಹಶಿಕ್ಷಕ ಬಸವರಾಜು, ಹೆಚ್.ಡಿ.ಕೋಟೆ ತಾಲೂಕಿನ ಬಾಚೇಗೌಡನಹಳ್ಳಿ ಸ.ಹಿ.ಪ್ರಾ.ಶಾಲೆಯ ಸಹಶಿಕ್ಷಕಿ ಬಿ.ಬಿ.ಸವಿತಾ ಅವರಿಗೆ ಈ ಸಾಲಿನ 'ರೋಟರಿ ಆದರ್ಶ ಶಿಕ್ಷಕ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು ವಿಜಯನಗರ ರೈಲ್ವೆ ಬಡಾವಣೆಯ ರೋಟರಿ ಭವನದಲ್ಲಿ ರೋಟರಿ ಮೈಸೂರು ಉತ್ತರದ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆಯಲ್ಲಿ ಶಾಲಾ ಶಿಕ್ಷಣ ಇಲಾಖೆ ಮೈಸೂರು ದಕ್ಷಿಣ ವಲಯ ಬಿಇಓ ಎಂ.ಆರ್.ಅನಂತರಾಜು ಸಾಧಕ ಶಿಕ್ಷಕರನ್ನು ಸನ್ಮಾನಿಸಿದರು.

ಬಳಿಕ ಮಾತನಾಡಿದ ಅವರು, ಮಾಜಿ ರಾಷ್ಟ್ರಪತಿ ಡಾ.ಎಸ್.ರಾಧಾಕೃಷ್ಣನ್ ಅವರ ಜನ್ಮ ದಿನಾಚರಣೆಯನ್ನು ಶಿಕ್ಷಕರ ದಿನವೆಂದು ಆಚರಿಸಿಕೊಂಡು ಬರಲಾಗಿದೆ. ಇಲಾಖೆಯಿಂದ ಉತ್ತಮ ಶಿಕ್ಷಕರನ್ನು ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಿ, ಪ್ರಶಸ್ತಿ ವಿತರಣೆ ಮಾಡಲಾಗುತ್ತದೆ. ಆದರೆ ರೋಟರಿ ಸಂಸ್ಥೆ ಸಾಧಕರನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಉತ್ತಮ ಕಾರ್ಯ ಎಂದು ಶ್ಲಾಘಿಸಿದರು.

ಶಾಲಾ ಶಿಕ್ಷಣ ಇಲಾಖೆ ಮೈಸೂರು ಜಿಲ್ಲೆಯಿಂದ ಉತ್ತಮ ಜಿಲ್ಲಾ ಶಿಕ್ಷಕ ಪ್ರಶಸ್ತಿ, ನಿವೃತ್ತ ಹೊಂದಿದ 150ಕ್ಕೂ ಅಧಿಕ ಶಿಕ್ಷಕರಿಗೆ ಸನ್ಮಾನಿಸುವ ಕಾರ್ಯಕ್ರಮ ಆಯೋಜಿಸುತ್ತಿದೆ. 90 ವರ್ಷದ ನಿವೃತ್ತ ಶಿಕ್ಷಕ ಬಿ.ಪಿ. ಮರಿಸ್ವಾಮಿ ಅವರ ಮಾತು ಕೇಳಿದರೆ ಅಂದಿನ ಮತ್ತು ಇಂದಿನ ಶಿಕ್ಷಣ ಪದ್ಧತಿಯ ಸಾಧಕ–ಬಾಧಕಗಳ ಅರಿವಾಗುತ್ತದೆ ಎಂದರು.

ಇದೇ ವೇಳೆ ಪ್ರತಿಭಾನ್ವಿತ ಇಂಜಿನಿಯರಿಂಗ್ ವಿದ್ಯಾರ್ಥಿ ಸತೀಶ್ ಅವರಿಗೆ ರೋಟರಿಯ ಎಲ್.ಆರ್.ಮಹದೇವಸ್ವಾಮಿ ಲ್ಯಾಪ್‌ಟಾಪ್ ವಿತರಿಸಿದರು. ರೋಟರಿ ಮೈಸೂರು ಉತ್ತರ ಅಧ್ಯಕ್ಷ ಎಂ.ಚಂದ್ರಶೇಖರ್, ಪದಾಧಿಕಾರಿಗಳಾದ ಎ.ವಿ.ವಿರೂಪಾಕ್ಷ, ಬಿ.ಆರ್.ಶಿವಕುಮಾರ್, ರಾಜು, ಎಂ.ಕೆ.ನಂಜಯ್ಯ, ರಾಮಪ್ರಸಾದ್, ಆನಂದ್ ಮತ್ತಿತರರು ಹಾಜರಿದ್ದರು.

ರಾಮಕೃಷ್ಣ ವಿದ್ಯಾ ಕೇಂದ್ರದ ವಿದ್ಯಾರ್ಥಿ ಜಿಲ್ಲಾ ಮಟ್ಟಕ್ಕೆ ಆಯ್ಕೆ



ಮೈಸೂರು: ಮೈಸೂರಿನ ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿ ಕಿಶನ್. ಆರ್ ಮೈಸೂರು ನಗರ ಹಾಗೂ ತಾಲೂಕು ಮಟ್ಟದ 3000 ಮೀಟರ್ ಓಟದ ಸ್ಪರ್ಧೆಯಲ್ಲಿ ಚಿನ್ನದ ಪದಕಗಳಿಸುವ ಮೂಲಕ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

14 ಪಾಕಿಸ್ತಾನಿ ಉಗ್ರರು ಎಂಟ್ರಿ

ಮುಂಬೈ ಪೊಲೀಸರು ತಿಳಿಸಿದ್ದಾರೆ. ಬೆದರಿಕೆ ಸಂದೇಶ ಬಂದ ಕೂಡಲೇ ಮುಂಬೈ ಸಂಚಾರ ಪೊಲೀಸರು, ಅಪರಾಧ ವಿಭಾಗಕ್ಕೆ ಮಾಹಿತಿ ರವಾನಿಸಿದ್ದಾರೆ. ಮುಂಬೈ ಪೊಲೀಸರು ಫುಲ್ ಅಲರ್ಟ್ ಆಗಿದ್ದು, ಇಡೀ ರಾಜ್ಯದಲ್ಲಿ ಭದ್ರತೆ ಹೆಚ್ಚಿಸಲಾಗಿದೆ. ಅಲ್ಲದೇ ಬೆದರಿಕೆಯ ಪ್ರತಿಯೊಂದು ಸಾಧ್ಯತೆ ಮತ್ತು ಮೂಲವನ್ನು ತನಿಖೆ ಮಾಡಲಾಗುತ್ತಿದೆ. ಅನಂತ ಚತುರ್ದಶಿಯ ಹತ್ತು ದಿನಗಳ ಕಾಲ ನಡೆಯುವ ಗಣೇಶೋತ್ಸವ ಅಥವಾ ಗಣೇಶ ಚತುರ್ಥಿ ಹಬ್ಬದ ಕೊನೆಯ ದಿನದಂದು ಭಕ್ತರು ಸಾಮೂಹಿಕವಾಗಿ ಗಣೇಶ ವಿಸರ್ಜನೆ ನೆರವೇರಿಸುತ್ತಾರೆ. ಕಳೆದ ಆಗಸ್ಟ್ 29ರಂದು ಪಾಟ್ನಾ ಸಿವಿಲ್ ನ್ಯಾಯಾಲಯದ ಅಧಿಕಾರಿಗಳಿಗೆ ಇಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು. ಇದಕ್ಕೂ ಮುನ್ನ ಪಾಕಿಸ್ತಾನದ ಮೂವರು ಭಯೋತ್ಪಾದಕರು ನೇಪಾಳ ಮೂಲಕ ಮಹಾರಾಷ್ಟ್ರಕ್ಕೆ ಪ್ರವೇಶಿಸಿದ್ದಾರೆ ಎಂದು ಪೊಲೀಸರಿಗೆ ಮಾಹಿತಿ ಬಂದಿತ್ತು.

80 ಸಾವಿರ ಹುದ್ದೆ ನೇರ ನೇಮಕಾತಿ ರದ್ದು

ಹಳೆಯ ನಿರ್ಣಯಕ್ಕೆ ಗ್ರಹಣ: ಕಳೆದ ಅಕ್ಟೋಬರ್‌ನಲ್ಲಿ ಸರ್ಕಾರ ತೆಗೆದುಕೊಂಡಿದ್ದ ಹಳೆಯ ನಿರ್ಣಯವನ್ನು ಬದಲಿಸಲು ಈ ಹೊಸ ತೀರ್ಮಾನ ಕೈಗೊಳ್ಳಲಾಗಿದೆ. ಹಿಂದೆ ಪ್ರಕಟಿಸಿದ್ದ ಎಲ್ಲಾ ನೇಮಕಾತಿ ಅಧಿಸೂಚನೆಗಳನ್ನು ಹಿಂತೆಗೆದು ಕೊಳ್ಳುವ ನಿರ್ಧಾರವೂ ಸಂಪುಟ ಸಭೆಯಲ್ಲಿ ಅಂಗೀಕರಿಸಲಾಯಿತು.

ಹೊಸ ತೀರ್ಮಾನದಿಂದ ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ, ಕೃಷಿ, ಪಶುಸಂಗೋಪನೆ, ಗ್ರಾಮೀಣಾಭಿವೃದ್ಧಿ ಸೇರಿದಂತೆ ಹಲವು ಇಲಾಖೆಗಳ 80 ಸಾವಿರಕ್ಕೂ ಹೆಚ್ಚು ಹುದ್ದೆಗಳ ನೇಮಕಾತಿ ಪ್ರಕ್ರಿಯೆ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ.

ಈ ತೀರ್ಮಾನದಿಂದಾಗಿ ಹಲವು ತಿಂಗಳು ಗಳಿಂದ ಸರ್ಕಾರಿ ಉದ್ಯೋಗ ಕ್ಕಾಗಿ ತಯಾರಿ ನಡೆಸುತ್ತಿದ್ದ ಸಾವಿರಾರು ಅಭ್ಯರ್ಥಿಗಳಿಗೆ ನಿರಾಶೆ ಉಂಟಾಗಿದೆ. ಈಗ ಸರ್ಕಾರ ಒಳ ಮೀಸಲಾತಿ ಉಪವರ್ಗೀಕರಣಕ್ಕೆ ಸಂಬಂಧಿಸಿದಂತೆ ಹೊಸ ಆದೇಶ ಹೊರಡಿಸುವವರೆಗೂ ಯಾವುದೇ ನೇಮಕಾತಿ ಪ್ರಕ್ರಿಯೆ ಆರಂಭವಾಗುವುದಿಲ್ಲ.

ಗಿರೀಶ್ ಮಟ್ಟಣ್ಣನವರ್!

ಕಳುಹಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ ತಿಮರೋಡಿ ತೋಟ ದಿಂದ ಬುರುಡೆ ತಂದದ್ದು ಸಾಬೀ ತಾದರೆ ಮತ್ತೆ ಹಲವು ಪ್ರಶ್ನೆಗಳು ಏಳುತ್ತದೆ. ಈ ಬುರುಡೆ ತಿಮರೋಡಿ ತೋಟದಲ್ಲಿ ಮೊದಲೇ ಇತ್ತಾ? ಮೊದಲೇ ತೋಟದಲ್ಲಿ ಇದ್ದರೆ ಹಾಗಾದರೆ ಯಾರದ್ದೂ ಎಂಬ ಪ್ರಶ್ನೆ ಏಳುತ್ತದೆ. ಒಂದು ವೇಳೆ ಪ್ರಕರಣ ಆರಂಭಿಸಲು ಲ್ಯಾಬ್ ಅಥವಾ ಬೇರೆ ಯಾವುದೋ ಜಾಗದಿಂದ ಬುರುಡೆ ತಂದು ಈ ಮಣ್ಣಿನಲ್ಲಿ ಹೂತು ಬಳಿಕ ಎತ್ತಿದ್ದಾರೋ ಎಂಬ ಪ್ರಶ್ನೆಯೂ ಎದ್ದಿದೆ. ಬುರುಡೆ ಪ್ರಕರಣದಲ್ಲಿ ಪದೇ ಪದೆ ಗಿರೀಶ್ ಮಟ್ಟಣ್ಣನವರ್ ಅವರ ಹೆಸರು ಕೇಳಿಬಂದಿದ್ದರಿಂದ ಎಸ್‌ಐಟಿ ವಿಚಾರಣೆಗೆ ಹಾಜರಾಗುವಂತೆ ಅಧಿಕೃತ ನೋಟಿಸ್ ನೀಡಿತ್ತು. ಇಂದು ಗಿರೀಶ್ ಮಟ್ಟಣ್ಣವರ್ ಬೆಳ್ತಂಗಡಿಯ ಎಸ್‌ಐಟಿ ಕಚೇರಿಗೆ ಹಾಜರಾಗಿದ್ದು ತೀವ್ರ ವಿಚಾರಣೆ ಎದುರಿಸುತ್ತಿದ್ದಾರೆ. ಬುರುಡೆ ಚಿನ್ನಯ್ಯ ವಿಚಾರಣೆ ಸಂದರ್ಭದಲ್ಲಿ ಆತ ಹೇಳಿರುವ ಕೆಲವು ಸೂಕ್ಷ್ಮ ವಿಷಯಗಳ ಹಿನ್ನೆಲೆಯಲ್ಲಿ ಇಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ ಹಿನ್ನೆಲೆಯಲ್ಲಿ ಗಿರೀಶ್ ಹಾಜರಾಗಿದ್ದು, ಅವರ ವಿಚಾರಣೆ ನಡೆಯುತ್ತಿದೆ.

ಡಾ.ಅಂಬೇಡ್ಕರ್ ಮರೆತು ಮಾತನಾಡುವವರು ದೇಶದ ನಾಗರಿಕನಾಗಲು ಅರ್ಹನೂ ಅಲ್ಲ, ಯೋಗ್ಯನೂ ಅಲ್ಲ

● ಮೈಸೂರು ಗಾಂಧಿನಗರದ ಉರಿಲಿಂಗಿಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಅಭಿಮತ ● ಅಂಬೇಡ್ಕರ್ ಕುರಿತ ಇತಿಹಾಸ ಪ್ರಾಧ್ಯಾಪಕ ಪ್ರೊ.ಸದಾಶಿವ ಅವರ ಹೇಳಿಕೆಗೆ ತೀವ್ರ ಆಕ್ಷೇಪ

ಮೈಸೂರು, ಸೆ.5(ಎಂಕೆ)– ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಮರೆತು ಮಾತನಾಡುವ ಯಾವುದೇ ಸಮುದಾಯವಾಗಲೀ, ವ್ಯಕ್ತಿಯಾಗಲಿ ಈ ದೇಶದ ನಾಗರಿಕನಾಗಲು ಅರ್ಹನಲ್ಲ... ಯೋಗ್ಯಾನೂ ಅಲ್ಲ... ಎಂದು ಮೈಸೂರು ಗಾಂಧಿನಗರದ ಉರಿಲಿಂಗಿಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಹೇಳಿದರು.

ಮೈಸೂರು ವಿವಿ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ, ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟದ ವತಿಯಿಂದ 'ನಾಗ, ಮಹಾರ್, ಹೊಲೆಯ, ಛಲವಾದಿ ಸಮುದಾಯದ ಸಾಂಸ್ಕೃತಿಕ ಮತ್ತು ಐತಿಹಾಸಿಕ ಹಿನ್ನೆಲೆ ಕುರಿತು ವಿಚಾರ ಸಂಕಿರಣ'ದಲ್ಲಿ ಮೈಸೂರು ವಿವಿ ಇತಿಹಾಸ ಪ್ರಾಧ್ಯಾಪಕ ಕೆ.ಸದಾಶಿವ ಅವರ ಹೇಳಿಕೆ ಉಲ್ಲೇಖಿಸಿ ಮಾತನಾಡಿದ ಅವರು, ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಮರೆತು ಮಾತನಾಡುವ ವ್ಯಕ್ತಿ ಮನುಷ್ಯನಾಗಲಾರ... ಈ ದೇಶದ ನಾಗರಿಕನಾಗಲೂ ಯೋಗ್ಯನಲ್ಲ... ಇದನ್ನು ಅವರು ತಿಳಿದುಕೊಳ್ಳಬೇಕು ಎಂದು ವಾಗ್ದಾಳಿ ನಡೆಸಿದರು.

ನಾವು ಭಗವಾನ್ ಬುದ್ಧರ ಪ್ರಿನ್ಸಿಪಲ್ ನಂತೆ ಪಾಸಿಟಿವ್ ಆಗಿದ್ದೇವೆ. ಆದರೂ ನಮ್ಮಿಬ್ಬರನ್ನು(ಬಲಗೈ–ಎಡಗೈ) ಬೇರ್ಪಡಿಸಿ, ಶಾಶ್ವತ ಶತ್ರುಗಳನ್ನಾಗಿ ಮಾಡಬೇಕು ಎನ್ನುವ ಷಡ್ಯಂತ್ರವನ್ನು ನೂರಾರು ಕೋಟಿ ರೂ. ಖರ್ಚು ಮಾಡಿ ಮಾಡುತ್ತಿದ್ದಾರೆ. ಇದು ಒಬ್ಬ ಪ್ರೊಫೆಸರ್ ಆಡುವ ಮಾತುಗಳಲ್ಲ. ನೂರಾರು ಶಕ್ತಿಗಳು ಆ ಮಾತುಗಳನ್ನಾಡಿಸುತ್ತಿವೆ. ಈ ಪ್ರಕ್ರಿಯೆ ಇವತ್ತಿನದಲ್ಲ. ಮೈಸೂರು ವಿವಿಯಲ್ಲಿ ಆ ಮಾತುಗಳು ಬರುತ್ತಿವೆ ಎಂದರೆ ಯೋಚನೆ ಮಾಡಬೇಕಾದ ಅನಿವಾರ್ಯತೆ ಇದೆ ಎಂದು ಎಚ್ಚರಿಸಿದರು.

ಪಶ್ಚಿಮ ಬಂಗಾಳದ ನ್ಯಾಯಮೂರ್ತಿಗಳಾಗಿದ್ದ ಎಂ.ಸಿ.ಚಾಗ್ಲಾ ಅವರು, ಭಾರತದ ಪ್ರತಿಯೊಬ್ಬ ಪ್ರಜೆ, ಇಡೀ ದಿನ ಏನೆಲ್ಲಾ ಅನುಭವಿಸುತ್ತಾನೋ ಅದಕ್ಕೆಲ್ಲಾ ಅಂಬೇಡ್ಕರ್ ಅವರ ಋಣ ಕಾರಣ. ನಾವೆಲ್ಲರೂ ಅಂಬೇಡ್ಕರ್ ಅವರ ಋಣದ ಮಕ್ಕಳು ಎಂದಿದ್ದಾರೆ. ಈ ಮಾತು ನಮ್ಮ ಸಹೋದರನಿಗೆ(ಕೆ.ಸದಾಶಿವ) ಗೊತ್ತಾಗಬೇಕಿದೆ. ಅವರಿಗೆ ಅರಿವಿನ ಕೊರತೆ ಇದ್ದು, ಜೊತೆಗೆ ತಮ್ಮ ಮೆದುಳನ್ನು ಇನ್ನೊಬ್ಬರಿಗೆ ಗಿರಿವಿ ಇಟ್ಟಿದ್ದಾರೆ... ಮಾರಿಕೊಂಡಿದ್ದಾರೆ. ಅವರ ಮೆದುಳು ಅವರ ಬಳಿಯೇ ಇದ್ದಿದ್ದರೆ ಈ ಮಾತುಗಳನ್ನು ಹೇಳುತ್ತಿರಲಿಲ್ಲ ಎಂದು ಚಾಟಿ ಬೀಸಿದರು.

ಯಾರನ್ನೂ ಎಲ್ಲಿಯೂ ಟಾರ್ಗೆಟ್ ಮಾಡಿ ಮಾತನಾಡುವ ಅವಶ್ಯಕತೆ ನಮಗಿಲ್ಲ. ಏಕೆಂದರೆ, ಹೆಚ್.ಜೆ.ಖಾಂಡೇಕರ್ ಅವರು, ಸಂವಿಧಾನ ಸಭೆಯಲ್ಲಿ ಎದ್ದು ನಿಂತು, 'ಸನ್ಮಾನ್ಯ ಅಧ್ಯಕ್ಷರೇ, ಈ ದೇಶದಲ್ಲಿ ಎರಡು ಸಂವಿಧಾನವಿದ್ದು, ಒಂದು ಮನು ಸಂವಿಧಾನ. ಮತ್ತೊಂದು ಮಹಾರ್ ಸಂವಿಧಾನ. ಬಾಬಾ ಸಾಹೇಬ್ ಅವರು ರಚಿಸಿದಂತಹ ಸಂವಿಧಾನವನ್ನು ನಾನು ಮಹಾರ್ ಸಂವಿಧಾನವೆಂದು ಕರೆಯುತ್ತೇನೆ. ಮನು ಸಂವಿಧಾನ ದೇಶದ ಜನರನ್ನು ನರಕದಲ್ಲಿಟ್ಟರೆ, ಮಹಾರ್ ಸಂವಿಧಾನ ಈ ದೇಶವನ್ನು ಸ್ವರ್ಗವನ್ನಾಗಿ ಮಾಡುತ್ತೆ ಎಂಬ ವಿಶ್ವಾಸವಿದೆ' ಎಂದಿದ್ದಾರೆ. ಇದರ ಬಗ್ಗೆ ದಾಖಲೆ ಇದೆ. ಸದಾಶಿವ ಯಾವ ವಿವಿಯಲ್ಲಿ ಓದಿದ್ದಾರೋ ಗೊತ್ತಿಲ್ಲ ಎಂದು ವ್ಯಂಗ್ಯವಾಡಿದರು.

ಪ್ರಥಮ ಫಲಾನುಭವಿ!: ಯಾರೂ ಜಾತಿಗಳಿಂದ ಮುಕ್ತರಾಗಿಲ್ಲ. ಒಂದು ಮಹತ್ತರವಾದ ಸಾಧನೆ ಮಾಡಬೇಕಾದರೆ, ಅಷ್ಟೇ ಮಹತ್ತರವಾದ ತ್ಯಾಗವನ್ನು ಮಾಡಬೇಕು. ಇವತ್ತು ಶಿಕ್ಷಕರ ದಿನವಾಗಿದ್ದು, ಬಾಬಾ ಸಾಹೇಬರೇ ನಮ್ಮೆಲ್ಲರಿಗೂ ಮಹಾಗುರು. ಅವರು ಈ ದೇಶಕ್ಕೆ ನೀಡಿದ ಸಂವಿಧಾನದ ಪ್ರಥಮ ಫಲಾನುಭವಿ ಬಾಬು ಜಗಜೀವನ್ ರಾಮ್. ಕೇಂದ್ರದಿಂದ ಅವರ ತಲೆಗೆ ಎಲ್ಲವೂ ಫೀಡ್ ಆಗುತ್ತಿದೆ. ಇಂತಹ ಸಂದರ್ಭದಲ್ಲಿ ಅಂಬೇಡ್ಕರ್ ವಂಶಸ್ಥರು ನಿದ್ದೆ ಮಾಡಿದರೆ, ಎಲ್ಲವೂ ನಾಶವಾಗುತ್ತದೆ ಎಂದರು.

ನಂತರ 'ನಾಗ, ಮಹಾರ್, ಹೊಲೆಯ, ಛಲವಾದಿ ಸಮುದಾಯದ ಸಾಂಸ್ಕೃತಿಕ ಹಿನ್ನೆಲೆ ಮತ್ತು ಭೀಮಾ ಕೋರೆಗಾಂವ್ ಯುದ್ಧ' ಕುರಿತು ಚಿಂತಕ ಡಾ.ವಿಠ್ಠಲ್‌ವಗ್ಗನ್ ವಿಚಾರ ಮಂಡಿಸಿದರೆ, ಡಾ.ಅಂಬೇಡ್ಕರ್ ರವರು ಪ್ರತಿಪಾದಿಸಿದ 'ಬೇರ್ಪಟ್ಟ ಸಮುದಾಯ ಸಿದ್ಧಾಂತ' ಕುರಿತು ಸಾಹಿತಿ ಹೊ.ಬ.ರಘೋತ್ತಮ, 'ಅಂಬೇಡ್ಕರ್ ಮತ್ತು ಬೌದ್ಧ ಧರ್ಮ' ಕುರಿತು ಅಕ್ಕ ಐಎಎಸ್ ಅಕಾಡೆಮಿ ನಿರ್ದೇಶಕ ಡಾ.ಶಿವಕುಮಾರ್ ಹಾಗೂ 'ಹೊಲೆಯ ಸಾಂಸ್ಕೃತಿಕ ಇತಿಹಾಸ; ಒಂದು ವಸ್ತುನಿಷ್ಠ ವಿಶ್ಲೇಷಣೆ' ಕುರಿತು ಡಾ.ಎನ್.ಚಿನ್ನಸ್ವಾಮಿ ಸೋಸಲೆ ವಿಚಾರ ಮಂಡಿಸಿದರು. ವಿಧಾನಮಂಡಲಗಳ ಪರಿಶಿಷ್ಟ ಜಾತಿ–ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ, ನಿವೃತ್ತ ಇಂಜಿನಿಯರ್ ಹೆಚ್.ಆರ್.ಶಿವರಾಮು, ಮಾಜಿ ಮೇಯರ್ ಪುರುಷೋತ್ತಮ್ ಮತ್ತಿತರರಿದ್ದರು.



ಮೈಸೂರು ವಿವಿ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ, ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟದ ವತಿಯಿಂದ 'ನಾಗ, ಮಹಾರ್, ಹೊಲೆಯ, ಛಲವಾದಿ ಸಮುದಾಯದ ಸಾಂಸ್ಕೃತಿಕ ಮತ್ತು ಐತಿಹಾಸಿಕ ಹಿನ್ನೆಲೆ ಕುರಿತು ವಿಚಾರ ಸಂಕಿರಣ' ಶುಕ್ರವಾರ ನಡೆಯಿತು.

ಅಂಬೇಡ್ಕರ್ ಅವರು ಈ ದೇಶದಲ್ಲಿ ಹುಟ್ಟದೇ ಹೋಗಿದ್ದರೆ ನಮ್ಮ ಗತಿಯೇನು?

ಮೈಸೂರು ವಿವಿ ಜಗಜೀವನ್ ರಾಮ್ ಅಧ್ಯಯನ ಸಂಸ್ಥೆ ನಿರ್ದೇಶಕ ಹಾಗೂ ಇತಿಹಾಸ ಪ್ರಾಧ್ಯಾಪಕ ಪ್ರೊ.ಸದಾಶಿವ ಅವರು, ಕಳೆದ ಆ.20 ರಂದು ಹರಿಹರದ ಕೃಷ್ಣಪ್ಪ ಸ್ಮಾರಕ ಭವನದಲ್ಲಿ 'ಮಾದಿಗ ಸಮುದಾಯ ಮುಂದೇನು' ಚಿಂತನಾ ಕಾರ್ಯಕ್ರಮದಲ್ಲಿ ಮಾದಿಗರ ಅಭಿವೃದ್ಧಿ, ಸಂಘಟನೆ ಬಗ್ಗೆ ಮಾತನಾಡದೆ, ಹೊಲೆಯ ಸಂಬಂಧಿತ ಜಾತಿಗಳು, ಬುದ್ಧ ಮತ್ತು ಅಂಬೇಡ್ಕರ್ ಹಾಗೂ ಭೀಮಾ ಕೋರೆಗಾಂವ್ ಯುದ್ಧವನ್ನು ಹೀಯಾಳಿಸಿ ಮಾತನಾಡಿದ್ದಾರೆ. ಜಗಜೀವನ್ ರಾಮ್ ಅವರಿಗೆ ಸಂವಿಧಾನ ಬರೆಯಲು ಎಲ್ಲರೂ ಬಂದು ಕೇಳಿಕೊಂಡರು. ಆಗ ಅವರು ಬೇಡ, ಅಂಬೇಡ್ಕರ್ ಅವರೇ ಬರೆಯಲಿ ಎಂದು ಒತ್ತಾಸೆಯಾದರು. ಅಂಬೇಡ್ಕರ್ ಅವರು, ಇಂದ್ರಾಣಿ(ಜಗಜೀವನ್ ರಾಮ್ ಅವರ ಪತ್ನಿ) ಅವರ ಬಳಿ ಹೋಗಿ ನನ್ನನ್ನು ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷನನ್ನಾಗಿ ಮಾಡಲು ನಿಮ್ಮ ಪತಿಯವರಿಗೆ ಹೇಳಿ ಎಂದು ಕೇಳಿಕೊಂಡರು. ಆಗ ಇಂದ್ರಾಣಿ ಅವರು, ಪತಿಯ ಮೇಲೆ ಒತ್ತಡ ಹಾಕಿದ್ದಕ್ಕೆ ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಮಿತಿ ಅಧ್ಯಕ್ಷರಾದರು. ಇದಕ್ಕೆ ಬಾಬು ಜೀವನ್ ರಾಮ್ ಕಾರಣಕರ್ತರಾದರು ಎಂದು ಏನೇನೋ ಹೇಳಿದ್ದಾರೆ. ಸದಾಶಿವ ಅವರೇ ನಿಮಗೆ ಸಾಂಸ್ಕೃತಿಕವಾಗಿ ಉತ್ತರ ಕೊಡಲು ಈ ವಿಚಾರ ಸಂಕಿರಣದಲ್ಲಿ ಸೇರಿದ್ದೇವೆ ಎಂದು ಸವಾಲು ಹಾಕಿದ ಚಂದ್ರಶೇಖರಯ್ಯ, ಅಂಬೇಡ್ಕರ್ ಅವರು ಈ ದೇಶದಲ್ಲಿ ಹುಟ್ಟದೇ ಹೋಗಿದ್ದರೆ ನೀವು ಇಂದಿಗೂ ಚಪ್ಪಲಿ ಹೊಲೆಯುತ್ತಿದ್ದಿರಿ. ಅದನ್ನು ಬಿಟ್ಟು ಬೇರೆ ಏನೂ ಮಾಡಲು ಆಗುತ್ತಿರಲಿಲ್ಲ. ನಾನೂ ಕೂಡ ಯಾರದೋ ಮನೆಯಲ್ಲಿ ಕೂಲಿ ಮಾಡುತ್ತಿದ್ದೆ.

- ಡಿ.ಚಂದ್ರಶೇಖರಯ್ಯ, ಅಧ್ಯಕ್ಷ, ಕರ್ನಾಟಕ ರಾಜ್ಯ ಸರ್ಕಾರಿ ಎಸ್ಸಿ–ಎಸ್ಟಿ ನೌಕರರ ಸಂಘ

ಪ್ರವರ್ಗ–ಬಿ ಎಂದರೆ ಸತ್ತಂತೆ...!

ದೇಶದ 140 ಕೋಟಿ ಜನರಿಗೆ ಬದುಕನ್ನು ಕೊಟ್ಟ ಸಮುದಾಯ ಯಾವುದೆಂದರೆ ಅದು ಮಹಾರ್ ಸಮುದಾಯ ಅರ್ಥಾತ್ ಅಂಬೇಡ್ಕರ್ ಸಮುದಾಯ. ಇಂತಹ ಸಮುದಾಯವನ್ನು 'ಪ್ರವರ್ಗ–ಬಿ'(ಪರಿಶಿಷ್ಟ ಜಾತಿ ಒಳಮೀಸಲಾತಿ ಹಂಚಿಕೆಯಲ್ಲಿ ಬಲಗೈ ಸಮುದಾಯಗಳನ್ನು ಪ್ರವರ್ಗ–ಬಿ ಎಂದು ಉಲ್ಲೇಖಿಸಲಾಗಿದೆ)ಯಲ್ಲಿ ನಮೂದಿಸುತ್ತಾರೆ ಎಂದರೆ ಸತ್ರಿ ಅಂತ... 'ಪ್ರವರ್ಗ–ಎ' ನಲ್ಲಿರಬೇಕಾದವರು 'ಬಿ' ನಲ್ಲಿರುವುದು ಅತ್ಯಂತ ಅಪಾಯ. ಸರ್ಕಾರಿ ಹುದ್ದೆಗಳ ನೇಮಕಾತಿ ರೋಸ್ಟರ್ ಆರಂಭವಾಗುವುದೇ 'ಪ್ರವರ್ಗ–ಎ' ಯಿಂದ. ಮತ್ತೆ ಎಲ್ಲಿಂದ ಬಲಗೈ ಸಮುದಾಯದವರಿಗೆ ಅವಕಾಶ ಸಿಗುತ್ತೆ. ಹಾಗಾಗಿ ಎಚ್ಚೆತ್ತುಕೊಳ್ಳಬೇಕಿದೆ. ಕೋತಿಗಳು ಕುಸ್ತಿ ಮಾಡಿ ಗೆದ್ದ ಕಜ್ಜಾಯವನ್ನು ನರಿಗಳ ಕೈಯ್ಯಲ್ಲಿ ಕೊಟ್ಟಂತಾಗಿದೆ. ಹಾಗಾಗಿ ಇಂತಹ ಜಾಗೃತ ಸಭೆಗಳು ವಿಭಾಗ ಮಟ್ಟದಲ್ಲಿ ನಡೆಯಬೇಕು. ಮಕ್ಕಳ ಮುಂದಿನ ಭವಿಷ್ಯಕ್ಕೆ ಬಾಬಾ ಸಾಹೇಬರ ಪ್ಲಾಟ್‌ಫಾರಂನಲ್ಲಿದ್ದರೆ ಮಾತ್ರ ಸೇಫ್ಟಿ.

- ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಉರಿಲಿಂಗಿಪೆದ್ದಿ ಮಠ, ಗಾಂಧಿನಗರ, ಮೈಸೂರು

ಸಮಾನತೆ ಕಾಯ್ದುಕೊಳ್ಳದಿದ್ದರೆ ದಂಗೆಯಾಗುತ್ತಿತ್ತು...

ಸ್ವಾತಂತ್ರ್ಯ ನಂತರವೂ ಈ ಜಾತಿಯ ವಿಷಯಗಳಲ್ಲಿ ದೇಶದ ಉದ್ದಲಕ್ಕೂ ಚರ್ಚೆಗಳು ನಡೆಯುತ್ತಿರುವುದನ್ನು ಕಾಣುತ್ತೇವೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಮೀಸಲಾತಿ ಅವಕಾಶವನ್ನು ಕಲ್ಪಿಸಿಕೊಡದಿದ್ದರೆ, ನಾವ್ಯಾರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಸ್ವಾವಲಂಬಿ ಬದುಕನ್ನು ಸಾಗಿಸಲು ಸಾಧ್ಯವಾಗುತ್ತಿರಲಿಲ್ಲ. ಪರಿಶಿಷ್ಟ ಜಾತಿ ಒಳಮೀಸಲಾತಿ ಹಂಚಿಕೆ ಸಂಬಂಧ ಎರಡು ಬಾರಿ ಸಮೀಕ್ಷೆ ಆಗಿದ್ದು, ಒಳಮೀಸಲಾತಿ ಹಂಚಿಕೆಯಲ್ಲಿ ಸಮಾನತೆ ಕಾಯ್ದುಕೊಳ್ಳದಿದ್ದರೆ ದಂಗೆಯಾಗುತ್ತಿತ್ತು. ಸಮೀಕ್ಷೆಯಲ್ಲಿ ಸಾಕಷ್ಟು ಮಂದಿ ಜಾತಿ ನಮೂದಿಸಿಲ್ಲ. ಇದರಿಂದ ನಿಮ್ಮ ಮಕ್ಕಳಿಗೆ ನೀವೇ ವಂಚನೆ ಮಾಡಿದಂತಾಗುತ್ತದೆ. ಹಾಗಾಗಿ ಹೆಮ್ಮೆಯಿಂದ ಜಾತಿ ಹೇಳಿಕೊಳ್ಳಿ.

- ಎ.ಆರ್.ಕೃಷ್ಣಮೂರ್ತಿ, ಶಾಸಕ, ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ

ಶಾಸಕ ಕೆ.ಹರೀಶ್‌ಗೌಡರಿಂದ 4 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಚಾಮರಾಜ ಕ್ಷೇತ್ರದಲ್ಲಿ ನಾಲ್ಕು ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್ ಗೌಡ ಶುಕ್ರವಾರ ಚಾಲನೆ ನೀಡಿದರು.

ಮೈಸೂರು, ಸೆ.5(ಜಿಎ)–ಚಾಮರಾಜ ಕ್ಷೇತ್ರದಲ್ಲಿ 4 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್ ಗೌಡ ಶುಕ್ರವಾರ ಚಾಲನೆ ನೀಡಿದರು.

ಮೈಸೂರು ಮಹಾನಗರ ಪಾಲಿಕೆಯ ವಲಯ ಕಛೇರಿ–5ರ ವ್ಯಾಪ್ತಿಯ ವಾರ್ಡ್ ನಂ.2ರ ಮಂಚೇಗೌಡನ ಕೊಪ್ಪಲು ಗಣಪತಿ ದೇವಸ್ಥಾನದ ರಸ್ತೆ ಸಂಗಮ ವೃತ್ತದ ಉದ್ಯಾನವನದ ಪಕ್ಕದ ರಸ್ತೆ ಅಭಿವೃದ್ಧಿ ಹಾಗೂ ಹೆಬ್ಬಾಳಿನ ಯಲ್ಲಮ್ಮ ದೇವಸ್ಥಾನದ ಮುಂಭಾಗ ಹಾಗೂ ಅಡ್ಡ ರಸ್ತೆಗಳ ಕಾಂಕ್ರೀಟ್ ರಸ್ತೆ ಮತ್ತು ಮಳೆನೀರು ದೊಡ್ಡ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಕಾಲಭೈರವೇಶ್ವರ ಸ್ವಾಮಿ ದೇವಸ್ಥಾನದ ಮುಂಭಾಗ ಗುದ್ದಲಿಪೂಜೆ ನೆರವೇರಿಸಿದರು.

ವಾರ್ಡ್ ನಂ 20ರ ವಿಜಯನಗರದ ಜನರಲ್ ತಿಮ್ಮಯ್ಯ ರಸ್ತೆಯಿಂದ 20ನೇ ಮುಖ್ಯ ರಸ್ತೆವರೆಗೆ ದೊಡ್ಡ ಮಳೆ ನೀರು ಚರಂಡಿ ಅಭಿವೃದ್ಧಿ, ಹೆಬ್ಬಾಳು ಸರ್ವೆ ನಂ. 272ರಲ್ಲಿರುವ ಪ್ರಾಧಿಕಾರದ ಖಾಲಿ ಜಾಗದ ಸುತ್ತ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸುವ ಕಾಮಗಾರಿಗೆ ಗುದ್ದಲಿ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ವಾರ್ಡ್ ಅಧ್ಯಕ್ಷ ಶ್ರೀಧರ್, ಮಾಜಿ ಉಪ ಮೇಯರ್ ಮಹದೇವಪ್ಪ ಮುಖಂಡರಾದ ಡೆಲ್ಲಿ ರವಿ, ಕೇಬಲ್ ಪುಟ್ಟರಾಜು, ಲೋಕೇಶ್, ಡಿ.ರಾಮಚಂದ್ರು, ಪಟೇಲ್ ಸೋಮಣ್ಣ, ರಾಮಚಂದ್ರು ಪುಟ್ಟಸ್ವಾಮಿ , ಟಿವಿಎಸ್ ರಮೇಶ್, ಕಾಂತರಾಜು, ಲಾರಿ ಕುಮಾರ್, ನಗರ ಪಾಲಿಕೆ ಮಾಜಿ ಸದಸ್ಯ ಸುಬ್ಬಯ್ಯ ಇನ್ನಿತರರಿದ್ದರು.

ನಿವೃತ್ತ ಶಿಕ್ಷಕರಿಗೆ ಸನ್ಮಾನ



ಶಿಕ್ಷಕರ ದಿನಾಚರಣೆ ಅಂಗವಾಗಿ ನಿವೃತ್ತ ಶಿಕ್ಷಕರಾದ ಶ್ರೀಮತಿ ವಿ.ಸತ್ಯವತಿ ಹಾಗೂ ಎಂ.ಎಸ್ ಜಯದೇವ ಅವರನ್ನು ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್(ಎಂಟಿಎ) ಅಧ್ಯಕ್ಷ ಬಿ.ಎಸ್. ಪ್ರಶಾಂತ್, ಗೌರವ ಅಧ್ಯಕ್ಷ ಸಿ.ಎ.ಜಯಕುಮಾರ್, ಮಾಜಿ ಅಧ್ಯಕ್ಷ ಹೆಚ್.ಶಿವಲಿಂಗಯ್ಯ, ಉಪಾ ಧ್ಯಕ್ಷ ಪಿ.ಡೇವಿಡ್ ರಾಜ್, ಕಾರ್ಯದರ್ಶಿ ಕೆ.ಮಂಜುನಾಥ್, ಶ್ರೀಮತಿ ಅನಿತಾ ಡೇವಿಡ್ ರಾಜ್ ಸನ್ಮಾನಿಸಿದರು.

ಧರ್ಮಸ್ಥಳ ಪ್ರಕರಣ; ಕಾಂಗ್ರೆಸ್ ಮುಖಂಡರು ತನಿಖೆಗೆ ಧಕ್ಕೆಯುಂಟಾಗುವ ಹೇಳಿಕೆ ನೀಡದಂತೆ ನಿರ್ದೇಶನ ನೀಡಲು ಸೋನಿಯಾ ಗಾಂಧಿಗೆ ಪತ್ರ

ಬೆಂಗಳೂರು, ಸೆ.4–ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಸರಣಿ ಹತ್ಯೆ ಆರೋಪ ಸಂಬಂಧ ರಾಜ್ಯ ಸರಕಾರವು ಎಸ್‌ಐಟಿ ತನಿಖೆ ನಡೆಸುತ್ತಿದ್ದು, ಕಾಂಗ್ರೆಸ್ ಪಕ್ಷದ ಮುಖಂಡರು ಎಸ್‌ಐಟಿ ಕಾರ್ಯಾಚರಣೆಗೆ ಮತ್ತು ನ್ಯಾಯೋಚಿತ ತನಿಖೆಗೆ ಧಕ್ಕೆಯುಂಟುಮಾಡುವಂತಹ ಹೇಳಿಕೆ ನೀಡುವುದನ್ನು ನಿಲ್ಲಿಸಲು ನಿರ್ದೇಶನ ನೀಡಬೇಕು ಎಂದು ಕೋರಿ 'ಕೊಂದವರು ಯಾರು?' ಎಂಬ ಸಂಘಟನೆಯು ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದೆ.

ಗುರುವಾರ ಕಾಂಗ್ರೆಸ್ ಪಕ್ಷದ ಮುಖಂಡರಾದ ಸೋನಿಯಾ ಗಾಂಧಿಗೆ 'ಕೊಂದವರು ಯಾರು?' ಎಂಬ ಸಂಘಟನೆಯ ಹೆಸರಿನಲ್ಲಿ ಪತ್ರಕರ್ತೆ ವಿಜಯಮ್ಮ, ಅರುಂಧತಿ ನಾಗ್, ಡಾ.ಸಬಿತಾ ಬನ್ನಾಡಿ, ಪದ್ಮಾವತಿ ರಾವ್, ಕವಿತಾ ಲಂಕೇಶ್, ಡಿ.ಸುಮನ ಕಿತ್ತೂರು, ಅಕ್ಕೈ ಪದ್ಮಶಾಲಿ, ಪ್ರೊ. ಎ.ಆರ್.ವಾಸವಿ, ಪ್ರೊ. ಜಾನಕಿ ನಾಯರ್, ಸಿ.ಜಿ. ಮಂಜುಳಾ,



ಡಾ. ವಸುಂಧರಾ ಭೂಪತಿ, ಡಾ. ಸಬಿಹಾ ಭೂಮಿ ಗೌಡ, ಡಾ.ಎಚ್.ಎಸ್.ಅನುಪಮಾ ಸೇರಿ 40ಕ್ಕೂ ಅಧಿಕ ಮಹಿಳಾ ಹೋರಾಟಗಾರರು ಪತ್ರ ಬರೆದಿದ್ದಾರೆ.

ಕಾಂಗ್ರೆಸ್ ಮುಖಂಡರು ತನಿಖೆಗೆ ಧಕ್ಕೆಯುಂಟುಮಾಡುವಂತಹ ಹೇಳಿಕೆ ನೀಡುವ ಬದಲಿಗೆ, ಮಹಿಳೆಯರ ಮೇಲೆ ಆಗಿರುವ ಹಿಂಸೆಯನ್ನು ಗಂಭೀರವಾಗಿ ಪರಿಗಣಿಸಿ, ಅದಕ್ಕೆ ನ್ಯಾಯ ಕೊಡಿಸುವುದಕ್ಕೆ ಒತ್ತು ನೀಡಬೇಕು. ಹಿಂಸೆಗೆ ಕಾರಣವಾಗಿರುವ ಹಾಗೂ ಆಳವಾಗಿ ಬೇರೂರಿರುವ ರಚನೆಗಳನ್ನು ವಿರೋಧಿಸುವುದಕ್ಕೆ ದನಿ ಜೋಡಿಸಬೇಕು ಎಂದು ಮಹಿಳಾ ಹೋರಾಟಗಾರರು ಒತ್ತಾಯಿಸಿದ್ದಾರೆ.

ಧರ್ಮಸ್ಥಳ ಪ್ರದೇಶದಲ್ಲಿ ನಡೆದಿರುವ ಅಸಹಜ ಸಾವುಗಳು ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣಗಳ ತನಿಖೆಯು ಒತ್ತಡ ಮುಕ್ತವಾಗಿ ನಿಷ್ಪಕ್ಷಪಾತವಾಗಿ ನಡೆಯಬೇಕು. ಈ ನಿಟ್ಟಿನಲ್ಲಿ ಎಸ್‌ಐಟಿಯು ದೃಢವಾಗಿ ಗಮನ ಕೇಂದ್ರೀಕರಿಸಬೇಕು. ಈ ಅಸಹಜ ಸಾವುಗಳ ಬಗ್ಗೆ ಮತ್ತು ಇದರಲ್ಲಿ ಸ್ಥಳೀಯ ಪೊಲೀಸ್ ಮತ್ತು ಇತರ ಅಧಿಕಾರಿ ವರ್ಗವು ಶಾಮೀಲಾಗಿರುವ ಬಗ್ಗೆ ಮಾಹಿತಿ ಹಕ್ಕು ವರದಿ ಮತ್ತು 2018ರ ಉಗ್ರಪ್ಪ ಸಮಿತಿಯ ವರದಿಗಳೂ ಸೂಚಿಸಿವೆ. ಹೀಗಾಗಿ ಸಂತ್ರಸ್ತರಿಗೆ ನ್ಯಾಯ ಸಿಗಬೇಕು, ಅಪರಾಧ ಎಸಗಿರುವವರನ್ನು ಬಂಧಿಸಬೇಕು, ಕರ್ತವ್ಯ ನಿರ್ವಹಿಸಲು ವಿಫಲರಾದ ಅಧಿಕಾರಿ ವರ್ಗವನ್ನು ಹೊಣೆಗಾರರನ್ನಾಗಿಸಬೇಕು ಎಂದು ಆಗ್ರಹಿಸಿದ್ದಾರೆ.

ತಮ್ಮ ಹೊಣೆಗಾರಿಕೆಯನ್ನು ಖಾತ್ರಿಪಡಿಸುವ ಸಲುವಾಗಿ ಸೌಜನ್ಯ ಪ್ರಕರಣದಲ್ಲಿನ ತನಿಖೆಗೆ ಎಡವಟ್ಟು ಮಾಡಿದ್ದಕ್ಕೆ ಕಾರಣರಾದ, ತಪ್ಪು ಮಾಡಿದ ಅಧಿಕಾರಿಗಳ ವಿರುದ್ಧ ಸರಕಾರ ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕು ಎಂದು 2024ರ ಸೆ.13 ರಂದು ಹೈಕೋರ್ಟ್ ನೀಡಿದ ತೀರ್ಪನ್ನು ಜಾರಿಗೊಳಿಸಬೇಕು ಎಂದು ಹೇಳಿದ್ದಾರೆ.

ಸೋನಿಯಾ ಗಾಂಧಿಯವರೇ, ಇದು ಧರ್ಮಸ್ಥಳ ಗ್ರಾಮದ ಕತೆಯಷ್ಟೇ ಅಲ್ಲ. ಮಹಿಳೆಯರ ಮೇಲಿನ ಹಿಂಸೆಯೊಂದಿಗೆ ಶಾಮೀಲಾಗುವ ವ್ಯವಸ್ಥೆಯನ್ನು ಸರಕಾರ ಎದುರಿಸುತ್ತದೆಯೇ ಎಂಬುದರ ಜೊತೆಗೆ ಕರ್ನಾಟಕದ ಮಹಿಳೆಯರಾದ ನಮ್ಮ ಜೀವಗಳೂ ಸರಕಾರಕ್ಕೆ ಮುಖ್ಯವೆಂಬುದನ್ನು ನಂಬಬಹುದೇ? ಎಂಬ ಪ್ರಶ್ನೆಯೂ ಇದೆ. ಹೀಗಾಗಿ ಧರ್ಮಸ್ಥಳ ಗ್ರಾಮದ ಮಹಿಳೆಯರಿಗೆ ನ್ಯಾಯ ದೊರಕಿಸಲು ತಾವು ಮಧ್ಯಸ್ಥಿಕೆಯನ್ನು ವಹಿಸಬೇಕು ಎಂದು ಮಹಿಳಾ ಹೋರಾಟಗಾರರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

60 ಕೋಟಿ ವಂಚನೆ ಪ್ರಕರಣ: ನಟಿ ಶಿಲ್ಪಾ ಶೆಟ್ಟಿ, ಪತಿ ರಾಜ್ ಕುಂದ್ರಾ ವಿರುದ್ಧ ಲುಕ್ ಔಟ್ ನೋಟಿಸ್ ಜಾರಿ



ಮುಂಬೈ: 60 ಕೋಟಿ ರೂಪಾಯಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಮತ್ತು ಅವರ ಪತಿ ಉದ್ಯಮಿ ರಾಜ್ ಕುಂದ್ರಾ ವಿರುದ್ಧ ಮುಂಬೈ ಪೊಲೀಸರು ಲುಕ್ ಔಟ್ ನೋಟಿಸ್ (ಎಲ್‌ಒಸಿ) ಹೊರಡಿಸಲಾಗಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ದಂಪತಿ ಆಗಾಗ್ಗೆ ಅಂತರರಾಷ್ಟ್ರೀಯ ಪ್ರವಾಸಗಳನ್ನು ಮಾಡುವುದರಿಂದ ನಗರ ಪೊಲೀಸರ ಆರ್ಥಿಕ ಅಪರಾಧಗಳ ವಿಭಾಗವು ಎಲ್‌ಒಸಿ ಹೊರಡಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಾಲ ಮತ್ತು ಹೂಡಿಕೆಯಲ್ಲಿ ಉದ್ಯಮಿಯೊಬ್ಬರಿಗೆ ಸುಮಾರು 60 ಕೋಟಿ ರೂ. ವಂಚನೆ ಮಾಡಿದ್ದಾರೆ ಎಂಬ ಆರೋಪದ ಮೇಲೆ ಆಗಸ್ಟ್ 14 ರಂದು ಜುಹು ಪೊಲೀಸ್ ಠಾಣೆಯಲ್ಲಿ ನಟಿ ಮತ್ತು ಅವರ ಪತಿಯ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಅವರು ಹೇಳಿದರು.

ಅಂದು 'ಕ್ವಿಟ್ ಇಂಡಿಯಾ ಚಳವಳಿ'; ಈಗ 'ಕ್ವಿಟ್ ಕೆಮಿಕಲ್' ಜನಾಂದೋಲನ!

ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಚಂದನ್‌ಗೌಡರಿಂದ ಹೊಸ ಅಭಿಯಾನ

ಮೈಸೂರು, ಸೆ.5– ಅಂದು ದೇಶದಿಂದ ಬ್ರಿಟಿಷರನ್ನು ತೊಲಗಿಸಲು ಮಹಾತ್ಮ ಗಾಂಧೀಜಿಯವರು ಕ್ವಿಟ್ ಇಂಡಿಯಾ ಚಳವಳಿ ನಡೆಸಿದಂತೆ, ಇಂದು ಕೃಷಿ ರಂಗದಲ್ಲಿ 'ಕ್ವಿಟ್ ಕೆಮಿಕಲ್ಸ್' ಜನಾಂದೋಲನವನ್ನು ರಾಜ್ಯ ರೈತ ಕಲ್ಯಾಣ ಸಂಘದಿಂದ ಪ್ರಾರಂಭಿಸಲಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್ ಗೌಡ ತಿಳಿಸಿದರು.

ಸರಗೂರು ತಾಲೂಕಿನ ಸಾಗರೆ ಮತ್ತು ಅಗತ್ತೂರು ಗ್ರಾಮದಲ್ಲಿ ನಡೆದ ರೈತ ಕಲ್ಯಾಣ ಸಂಘದ ಉದ್ಘಾಟನೆ ಹಾಗೂ ನಾಮಫಲಕ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈಗಾಗಲೇ ಮಣ್ಣು ರಕ್ಷಿಸಿ ಅಭಿಯಾನದ ಮುಖಾಂತರ ರೈತರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಹಾಗೆಯೇ ಮಣ್ಣಿನ ಫಲವತ್ತತೆಯಿಂದ ಮಾತ್ರ ರೈತನ ಪ್ರಗತಿ, ಅಭಿವೃದ್ಧಿ ಸಾಧ್ಯ, ಮಣ್ಣು ಜೀವಂತವಾಗಿದ್ದರೆ ಮಾತ್ರ ರೈತನ ಬದುಕು ಜೀವಂತವಾಗಿರಲು ಸಾಧ್ಯ ಎನ್ನುವುದನ್ನು ಮನದಟ್ಟು ಮಾಡಿಕೊಡುವ ಆಶಯ ಹೊಂದಿದ್ದೇವೆ ಎಂದರು.



ರೈತ ಕಲ್ಯಾಣ ಸಂಘದ ಉದ್ಘಾಟನೆ ಹಾಗೂ ನಾಮಫಲಕ ಅನಾವರಣ ಕಾರ್ಯಕ್ರಮದಲ್ಲಿ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್ ಗೌಡ ಮತ್ತಿತರ ಪದಾಧಿಕಾರಿಗಳು, ರೈತರು ಪಾಲ್ಗೊಂಡಿದ್ದರು.

ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಕ್ವಿಟ್ ಇಂಡಿಯಾ ಚಳುವಳಿ ಮಾದರಿಯಲ್ಲಿ ಇಂದು ರೈತರು ಹಾಗೂ ಕೃಷಿ ರಕ್ಷಣೆಗಾಗಿ 'ಕ್ವಿಟ್ ಕೆಮಿಕಲ್ಸ್' ಜನಂದೋಲನವನ್ನು ಪ್ರಾರಂಭಿಸಲಾಗಿದೆ. ರಾಸಾಯನಿಕ ಬಳಕೆ ಮನುಕುಲಕ್ಕೆ ಆಪತ್ತು ಎನ್ನುವುದನ್ನು ಅರಿತು ಮುಂದಿನ ದಿನಗಳಲ್ಲಿ ರೈತ ಬಾಂಧವರು ರಾಸಾಯನಿಕ ಮುಕ್ತವಾದ ಸಾವಯವ ಹಾಗೂ ಸಹಜ ಕೃಷಿಯತ್ತ ಗಮನ ಹರಿಸಬೇಕು ಎಂದು ಮನವಿ ಮಾಡಿದರು.

ಮಣ್ಣು ಉಳಿಯದೆ ಮನುಕುಲ ಉಳಿಯದು. ಮಣ್ಣಿನ ಆರೋಗ್ಯದಿಂದ ಮಾತ್ರ ಮನುಷ್ಯರ ಆರೋಗ್ಯ ಸುಧಾರಣೆ ಸಾಧ್ಯ. ಅತೀ ಹೆಚ್ಚು ರಸಗೊಬ್ಬರ ಬಳಸುವ ಮೂಲಕ ಮಣ್ಣಿಗೆ ವಿಷ ಹಾಕುವುದನ್ನು ರೈತಬಾಂಧವರು ಮಾಡಬಾರದು. ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸಲು ಮಣ್ಣು ರಕ್ಷಿಸಿ ಅಭಿಯಾನಕ್ಕೆ ಸರಗೂರು ತಾಲೂಕಿನ ಸಾಗರೆ ಗ್ರಾಮದಲ್ಲೂ ಚಾಲನೆ ನೀಡಲಾಗಿದೆ ಎಂದರು.

ಮಣ್ಣಿನಲ್ಲಿ ಕೃಷಿಗೆ ಪೂರಕವಾದ ಕೋಟ್ಯಾನುಕೋಟಿ ಸೂಕ್ಷ್ಮಜೀವಿಗಳಿವೆ. ಅವು ಕಾರ್ಮಿಕರಂತೆ ಕೆಲಸ ಮಾಡುತ್ತಿರುತ್ತವೆ. ರಸಗೊಬ್ಬರ, ಕೀಟನಾಶಕ, ಕಳೆನಾಶಕ ವಿಪರೀತವಾಗಿ ಬಳಸಿದರೆ ರೈತಮಿತ್ರ ಎರೆಹುಳು ಸೇರಿದಂತೆ ಸೂಕ್ಷ್ಮಾಣು ಜೀವಿಗಳು ನಾಶವಾಗುತ್ತವೆ. ಮಣ್ಣಿನ ಭೌತಿಕ, ಜೈವಿಕ, ರಾಸಾಯನಿಕ ರೂಪ ಹಾಳಾಗುತ್ತದೆ. ರೈತರು ಸಾಂಪ್ರದಾಯಿಕ ಕೃಷಿ ಸಾಕ್ಷಾತ್ಕಾರಕ್ಕೆ ಮುಂದಾಗಬೇಕು. ಭೂಮಿತಾಯಿಯ ರಕ್ಷಣೆಗೆ ಪಣ ತೊಡಬೇಕು ಎಂದು ಮನವಿ ಮಾಡಿದರು. ಈ ವೇಳೆ ಸಂಘದ ರಾಜ್ಯ, ಜಿಲ್ಲೆ, ತಾಲೂಕು ಘಟಕದ ಪದಾಧಿಕಾರಿಗಳು, ಗ್ರಾಮದ ಮುಖಂಡರು, ಗ್ರಾಮಸ್ಥರು, ರೈತರು ಉಪಸ್ಥಿತರಿದ್ದರು.

ದೇಶ - ವಿದೇಶ

ಲವರ್ ಜೊತೆಗೆ ಪತ್ನಿಯ ಮದುವೆ ಮಾಡಿಸಿ ಕೈತೊಳೆದುಕೊಂಡ ಪತಿರಾಯ

ಉತ್ತರ ಪ್ರದೇಶ: ಉತ್ತರ ಪ್ರದೇಶದ ಧಾಂಗ್ವಾ ಪೊಲೀಸ್ ಠಾಣಾ ವ್ಯಾಪ್ತಿಯ ಕಟಾರ್ ಮಿಶ್ರಾ ಗ್ರಾಮದ ಬಬ್ಲು ಎಂಬಾತ ತನ್ನ ಪತ್ನಿ ರಾಧಿಕಾಳನ್ನು ಆಕೆಯ ಲವರ್ ವಿಶಾಲ್ ಕುಮಾರ್ ಜೊತೆಗೆ ಮದುವೆ ಮಾಡಿಸಿದ್ದಾರೆ. ಬೇರೆ ರಾಜ್ಯದಲ್ಲಿ ಕೂಲಿ ಕೆಲಸ ಮಾಡುವ ಬಬ್ಲು 2017 ರಲ್ಲಿ ಮೂಲತಃ ಗೋರಖ್‌ಪುರ ಜಿಲ್ಲೆಯ ರಾಧಿಕಾ ಅವರನ್ನು ವಿವಾಹವಾಗಿದ್ದರು. ಅವರಿಗೆ ಇಬ್ಬರು ಮಕ್ಕಳಿದ್ದಾರೆ. ರಾಧಿಕಾ ಕಳೆದ ಒಂದೂವರೆ ವರ್ಷದಿಂದ ಅದೇ ಗ್ರಾಮದ ವಿಶಾಲ್ ಎಂಬಾತನ ಜೊತೆ ಸಂಬಂಧ ಹೊಂದಿದ್ದಳು ಎಂದು ಸ್ಥಳೀಯರು ಹೇಳುತ್ತಾರೆ.

ಬಬ್ಲುವಿಗೆ ಈ ಸಂಬಂಧ ಗೊತ್ತಾಗಿದ್ದು, ಅದನ್ನು ಕೊನೆಗೊಳಿಸುವಂತೆ ರಾಧಿಕಾಳಿಗೆ ಎಷ್ಟೇ ಹೇಳಿದರೂ ಆಕೆ ಸಂಬಂಧ ಮುಂದುವರೆಸಿದ್ದಾಳೆ. ಇದರಿಂದ ಆಗಾಗ್ಗೆ ಇಬ್ಬರ ನಡುವೆ ಜಗಳ ಉಂಟಾಗುತ್ತಿದ್ದರಿಂದ ಕೊನೆಗೆ ಅವರಿಬ್ಬರ ಮದುವೆ ಮಾಡಿಸಲು ಬಬ್ಲು ನಿರ್ಧರಿಸಿದ್ದಾನೆ.

ವಿಶಾಲ್ ಜೊತೆಗೆ ಸಂಬಂಧ ಕಡಿತಗೊಳಿಸುವಂತೆ ಪದೇ ಪದೇ ಹೇಳಿದ್ದರೂ ರಾಧಿಕಾ ನಿರಾಕರಿಸುತ್ತಿದ್ದಳು. ಹೀಗಾಗಿ ಮುಂದೆ ಆಗಬಹುದಾದ ಅಪಾಯವನ್ನು ತಪ್ಪಿಸಲು ಅವರ ಮದುವೆ ಮಾಡಿಸಲು ನಿರ್ಧರಿಸಿದೆ. ಇತ್ತೀಚಿನ ದಿನಗಳಲ್ಲಿ ಗಂಡಂದಿರನ್ನು ಅವರ ಹೆಂಡತಿಯರು ಕೊಲ್ಲುವುದನ್ನು ನಾವು ನೋಡಿದ್ದೇವೆ" ಎಂದು ಬಬ್ಲು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮೋದಿ ಜತೆಗಿನ ಟ್ರಂಪ್ ವೈಯಕ್ತಿಕ ಬಾಂಧವ್ಯ ಹಳಸಿದೆ: ಬೋಲ್ಟನ್



ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಭಾರತದ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಉತ್ತಮ ವೈಯಕ್ತಿಕ ಬಾಂಧವ್ಯ ಹೊಂದಿದ್ದರು. ಆದರೆ ಆ ಬಾಂಧವ್ಯ ಈಗ ಇಲ್ಲ ಎಂದು ಅಮೆರಿಕದ ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಜಾನ್ ಬೋಲ್ಟನ್ ಹೇಳಿದ್ದಾರೆ.

ಬ್ರಿಟಿಷ್ ಮಾಧ್ಯಮ ಪೋರ್ಟಲ್ ಎಲ್‌ಬಿಸಿಗೆ ಅವರು ಇತ್ತೀಚೆಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿ, ಅಂತರರಾಷ್ಟ್ರೀಯ ಸಂಬಂಧವನ್ನು ಟ್ರಂಪ್ ಅವರು ತೀರಾ ವೈಯಕ್ತಿಕವಾಗಿ ಪರಿಗಣಿಸುತ್ತಾರೆ ಎಂದು ನಾನು ಭಾವಿಸಿದ್ದೇನೆ. ಪುಟಿನ್ ಅವರೊಂದಿಗೆ ಟ್ರಂಪ್ ಉತ್ತಮ ಸಂಬಂಧ ಹೊಂದಿದ್ದರೆ, ರಷ್ಯಾ ಕೂಡ ಅಮೆರಿಕದೊಂದಿಗೆ ಉತ್ತಮ ರೀತಿಯಲ್ಲಿರುತ್ತಿತ್ತು ಎಂದು ಹೇಳಿದ್ದಾರೆ.

ಟ್ರಂಪ್ ಅವರು ಮೋದಿ ಅವರೊಂದಿಗೆ ವೈಯಕ್ತಿಕವಾಗಿ ಉತ್ತಮ ಸಂಬಂಧ ಹೊಂದಿದ್ದರು. ಆದರೆ ಈಗ ಆ ಸಂಬಂಧ ಹಳಸಿದೆ. ಇದು ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಸೇರಿದಂತೆ ಎಲ್ಲರಿಗೂ ಒಂದು ಪಾಠ. ವೈಯಕ್ತಿಕ ಸಂಬಂಧಗಳು ಕೆಲವೊಮ್ಮೆ ಸಹಾಯ ಮಾಡಬಹುದು. ಆದರೆ ಅದು ನಿಮ್ಮನ್ನು ಕೆಟ್ಟ ಪರಿಸ್ಥಿತಿಯಿಂದ ರಕ್ಷಿಸುವುದಿಲ್ಲ ಎಂದು ಹೇಳಿದ್ದಾರೆ.

'ಸ್ಪೈ ಕ್ಯಾಮೆರಾ' ಮೂಲಕ ಮಹಿಳೆಯ ಆಕ್ಷೇಪಾರ್ಹ ವಿಡಿಯೋ ರೆಕಾರ್ಡ್; ಪೈಲಟ್ ಬಂಧನ

ನವದೆಹಲಿ: ಮಹಿಳೆಯೊಬ್ಬರ ಆಕ್ಷೇಪಾರ್ಹ ವಿಡಿಯೋ ರೆಕಾರ್ಡ್ ಮಾಡಿದ್ದಕ್ಕಾಗಿ ದೆಹಲಿಯಲ್ಲಿ ಖಾಸಗಿ ವಿಮಾನಯಾನ ಸಂಸ್ಥೆಯ ಪೈಲಟ್ ಒಬ್ಬನನ್ನು ಬಂಧಿಸಲಾಗಿದೆ. ಆತನಿಂದ ಲೈಟರ್ ಆಕಾರದ ಸಣ್ಣ, ಗುಪ್ತ ಸ್ಪೈ ಕ್ಯಾಮೆರಾವನ್ನು ವಶಪಡಿಸಿಕೊಳ್ಳಲಾಗಿದೆ.

ಆರೋಪಿಯನ್ನು ಉತ್ತರ ಪ್ರದೇಶದ ಆಗ್ರಾದ ಸಿವಿಲ್ ಲೈನ್ಸ್ ಪ್ರದೇಶದ ನಿವಾಸಿ ಮೋಹಿತ್ ಪ್ರಿಯದರ್ಶಿ (31) ಎಂದು ಗುರುತಿಸಲಾಗಿದೆ. ಮಹಿಳೆಯೊಬ್ಬರು ದಾಖಲಿಸಿದ ದೂರಿನ ಮೇರೆಗೆ ದೆಹಲಿಯ ನೈಋತ್ಯ ಜಿಲ್ಲೆಯ ಕಿಶನ್‌ಗಢ ಪೊಲೀಸ್ ಠಾಣೆಯ ಸಿಬ್ಬಂದಿ ಆತನನ್ನು ಬಂಧಿಸಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಕಿಶನ್‌ಗಢ ಗ್ರಾಮದ ನಿವಾಸಿಯಾಗಿರುವ ದೂರುದಾರರು, ಆ.30 ರಂದು ರಾತ್ರಿ 10.20 ರ ಸುಮಾರಿಗೆ ಕಿಶನ್‌ಗಢ ಗ್ರಾಮದ ಶನಿ ಬಜಾರ್‌ನಲ್ಲಿದ್ದಾಗ, ವ್ಯಕ್ತಿಯೊಬ್ಬ ಹಿಡನ್ ಕ್ಯಾಮೆರಾ ಅಳವಡಿಸಿದ ಲೈಟರ್ ಆಕಾರದ ಸಣ್ಣ ಸಾಧನವನ್ನು ಬಳಸಿಕೊಂಡು ತನ್ನ ಒಪ್ಪಿಗೆಯಿಲ್ಲದೆ ತನ್ನ ಆಕ್ಷೇಪಾರ್ಹ ವಿಡಿಯೋಗಳನ್ನು ರೆಕಾರ್ಡ್ ಮಾಡಲು ಪ್ರಯತ್ನಿಸುತ್ತಿರುವುದನ್ನು ಗಮನಿಸಿರುವುದಾಗಿ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

ಆಕ್ಸ್‌ಫರ್ಡ್ ವಿವಿಯಲ್ಲಿ ಪೆರಿಯಾರ್ ಭಾವಚಿತ್ರ ಅನಾವರಣ

ಲಂಡನ್: ದ್ರಾವಿಡ ಚಳುವಳಿಯ ನೇತಾರ ಮತ್ತು



ಸಮಾಜ ಸುಧಾರಕ ಇ.ವಿ. ರಾಮಸ್ವಾಮಿ ಪೆರಿಯಾರ್ ಅವರ ವೈಚಾರಿಕ ಹಣತೆ, ಇಂದು ಜಗತ್ತಿಗೆ ದಾರಿದೀಪವಾಗಿ ಬೆಳಗುತ್ತಿದೆ ಎಂದು ತಮಿಳುನಾಡು ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಹೇಳಿದ್ದಾರೆ. ಇಂಗ್ಲೆಂಡ್‌ನ ಪ್ರತಿಷ್ಠಿತ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಪೆರಿಯಾರ್ ಅವರ ಭಾವಚಿತ್ರವನ್ನು ಅನಾವರಣಗೊಳಿಸಿ ಮಾತನಾಡಿದ ತಮಿಳುನಾಡು ಸಿಎಂ, ಆಕ್ಸ್‌ಫರ್ಡ್ ವಿವಿಯಲ್ಲಿ ಪೆರಿಯಾರ್ ಭಾವಚಿತ್ರ ಅನಾವರಣಗೊಳಿಸಿರುವುದು ನನ್ನ ಜೀವಮಾನದ ಶ್ರೇಷ್ಠ ಗೌರವ ಎಂದು ಬಣ್ಣಿಸಿದರು.

ಪೆರಿಯಾರ್‌ವಾದ ಸ್ವಾಭಿಮಾನ, ವೈಚಾರಿಕತೆ, ಸಮಾನತೆ, ಮಾನವೀಯತೆ, ಮಹಿಳಾ ಸಬಲೀಕರಣ, ಜಾತ್ಯತೀತತೆ, ವೈಜ್ಞಾನಿಕ ಮನೋಭಾವನೆ ಬೆಂಬಲಿಸುತ್ತದೆ. ಅದೇ ರೀತಿ ಇದು ಜಾತಿ ಮತ್ತು ಲಿಂಗ ತಾರತಮ್ಯವನ್ನು ತಿರಸ್ಕರಿಸುತ್ತದೆ. ಪೆರಿಯಾರ್ ಹೆಚ್ಚು ಪ್ರೀತಿಸುತ್ತಿದ್ದ ಪದವಾದ ಸ್ವಾಭಿಮಾನ ಅವರ ದ್ರಾವಿಡ ಚಳುವಳಿಗೆ ಮೂಲ ಆಧಾರ ಎಂದು ಸಿಎಂ ಸ್ಟಾಲಿನ್ ಹೇಳಿದರು. ಒತ್ತಾಯದ ಹಿಂದಿ ಹೇರಿಕೆಯನ್ನು ವಿರೋಧಿಸುವ ಎಂಕೆ ಸ್ಟಾಲಿನ್, ಭಾಷಾ ಯುದ್ಧಕ್ಕೆ ಸಿದ್ಧರಾಗುವಂತೆ ಕರೆ ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು.

ಶ್ರೀಲಂಕಾದಲ್ಲಿ 1,000 ಅಡಿ ಆಳದ ಪ್ರಪಾತಕ್ಕೆ ಉರುಳಿ ಬಿದ್ದ ಬಸ್; 15 ಮಂದಿ ಸಾವು

ಕೊಲಂಬೊ: ಶ್ರೀಲಂಕಾದ ಪರ್ವತ ಪ್ರದೇಶದಲ್ಲಿ



ಪ್ರಯಾಣಿಕ ಬಸ್ಸೊಂದು ಪ್ರಪಾತಕ್ಕೆ ಉರುಳಿ ಬಿದ್ದ ಪರಿಣಾಮ 15 ಜನರು ಸಾವಿಗೀಡಾಗಿದ್ದು, 16 ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸ್ ವಕ್ತಾರರು ಶುಕ್ರವಾರ ತಿಳಿಸಿದ್ದಾರೆ. ರಾಜಧಾನಿ ಕೊಲಂಬೊದಿಂದ ಪೂರ್ವಕ್ಕೆ ಸುಮಾರು 280 ಕಿಲೋಮೀಟರ್ ದೂರದಲ್ಲಿರುವ ವೆಲ್ಲವಾಯ ಪಟ್ಟಣದ ಬಳಿ ಗುರುವಾರ ರಾತ್ರಿ ಈ ಅಪಘಾತ ಸಂಭವಿಸಿದ್ದು, ಬಸ್ ಸುಮಾರು 1,000 ಅಡಿ ಆಳದ ಪ್ರಪಾತಕ್ಕೆ ಬಿದ್ದಿದೆ ಎಂದು ಪೊಲೀಸ್ ವಕ್ತಾರ ಫ್ರೆಡ್ರಿಕ್ ವೂಟ್ಲರ್ ತಿಳಿಸಿದ್ದಾರೆ.

ಚಾಲಕನು ಅತಿ ವೇಗದಲ್ಲಿ ಬಸ್ ಅನ್ನು ಚಲಾಯಿಸುತ್ತಿದ್ದ ಮತ್ತು ನಿಯಂತ್ರಣ ಕಳೆದುಕೊಂಡ. ಮತ್ತೊಂದು ವಾಹನಕ್ಕೆ ಡಿಕ್ಕಿ ಹೊಡೆದ ನಂತರ ಬಂಡೆಯಿಂದ ಕೆಳಗೆ ಬಸ್ ಉರುಳಿಬಿದ್ದಿದೆ ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ.

ಪ್ರಪಾತದಲ್ಲಿ ಬಿದ್ದಿರುವ ಬಸ್ ಸಂಪೂರ್ಣವಾಗಿ ಹಾನಿಯಾಗಿದ್ದು, ಈ ದೃಶ್ಯಗಳನ್ನು ಸ್ಥಳೀಯ ಮಾಧ್ಯಮವು ತೋರಿಸಿದೆ. ಸೈನಿಕರು, ಪೊಲೀಸ್ ಅಧಿಕಾರಿಗಳು ಮತ್ತು ಸ್ವಯಂಸೇವಕರು ಸೇರಿ ದಂತೆ ರಕ್ಷಣಾ ಸಿಬ್ಬಂದಿ ರಾತ್ರಿಯಿಡೀ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದು, ಗಾಯಾಳುಗಳನ್ನು ಆಸ್ಪತ್ರೆಗೆ ಕಳುಹಿಸಿದ್ದಾರೆ ಎನ್ನಲಾಗಿದೆ.

ಸೆ.27, ಕೊಡವ ಸಮಾಜದ ಕೈಲ್‌ಪೊಳ್ದ್ ನಮ್ಮೆ



ಪತ್ರಿಕಾಗೋಷ್ಠಿಯಲ್ಲಿ ಅಮ್ಮಣಿಚಂಡ ರತ್ನಾ ಸುಬ್ರಮಣಿ ಮಾತನಾಡಿದರು.

ವಿರಾಜಪೇಟೆ, ಸೆ.5–ಕೊಡವ ಸಮಾಜದ ವತಿಯಿಂದ ವರ್ಷಂಪ್ರತಿ ನಡೆಸಿಕೊಂಡು ಬರುತ್ತಿರುವ ಕೈಲ್‌ಪೊಳ್ದ್ ನಮ್ಮೆಯನ್ನು ಸೆ.27 ರಂದು ಕೊಡವ ಸಮಾಜದ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಕೊಡವ ಸಮಾಜದ ಕ್ರೀಡಾ ಕಾರ್ಯದರ್ಶಿ ಅಮ್ಮಣಿಚಂಡ ರತ್ನಾ ಸುಬ್ರಮಣಿ ಹೇಳಿದರು.


ಮಹಿಳೆಯರಿಗೆ ಮತ್ತು ಪುರುಷರಿಗೆ ತೆಂಗಿನಕಾಯಿಗೆ ಗುಂಡು ಹೊಡೆಯುವುದು, ಹಗ್ಗಜಗ್ಗಾಟ, ವಾಲಗದ ಕುಣಿತ, ಭಾರದ ಗುಂಡು ಎಸೆತ ಸೇರಿದಂತೆ ಹಲವಾರು ಪೈಪೋಟಿಗಳನ್ನು ನಡೆಸಲಾಗುವುದು. ಪೂರ್ವಾಹ್ನ 9.30ಕ್ಕೆ ನಡೆಯುವ ಕಾರ್ಯಕ್ರಮವನ್ನು ಕೊಡವ ಸಮಾಜದ ಅಧ್ಯಕ್ಷ ಅಮ್ಮಣಿ ಚಂಡ ರವಿಉತ್ತಪ್ಪ ಉದ್ಘಾಟಿಸಲಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಕೊಡವ ಸಮಾಜದ ಅಧ್ಯಕ್ಷ ಅಮ್ಮಣಿಚಂಡ ರವಿಉತ್ತಪ್ಪ, ಉಪಾಧ್ಯಕ್ಷ ಕಾಣತಂಡ ಜಗದೀಶ್, ಕಾರ್ಯದರ್ಶಿ ಮಾಳೇಟಿರ ಶ್ರೀನಿವಾಸ್, ಮರಣನಿಧಿ ಕಾರ್ಯದರ್ಶಿ ಮಾದೇಯಂಡ ಸಂಪಿ ಪೂಣಚ್ಚ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪತ್ರಕರ್ತರ ಸಂಘದ ಕ್ಷೇಮಾಭಿವೃದ್ಧಿ ಸಮಿತಿಯಿಂದ ಸೆ.12, ಉಚಿತ ಆರೋಗ್ಯ ತಪಾಸಣೆ ಶಿಬಿರ



ಮಡಿಕೇರಿ, ಸೆ.5– ಪತ್ರಕರ್ತರ ಸಂಘದ ಕ್ಷೇಮಾಭಿವೃದ್ಧಿ ಸಮಿತಿ ವತಿಯಿಂದ ಸೆ.12 ರಂದು ಪತ್ರಕರ್ತರು, ಪತ್ರಿಕಾ ವಿತರಕರು ಹಾಗೂ ಕುಟುಂಬದವರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಸಲಿದೆ. ನಗರದ ಕಾವೇರಿ ಹಾಲ್‌ನಲ್ಲಿ ಬೆಳಗ್ಗೆ 9 ಗಂಟೆಯಿಂದ ನಡೆಯಲಿರುವ ಶಿಬಿರವನ್ನು ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ಮಂತರ್ ಗೌಡ ಉದ್ಘಾಟಿಸಲಿದ್ದಾರೆ. ಶಿಬಿರದಲ್ಲಿ ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ನೇತ್ರ ತಜ್ಞರು, ಜನರಲ್ ಮೆಡಿಸಿನ್, ಮೂಳೆ ತಜ್ಞರು, ಇಎನ್‌ಟಿ ತಜ್ಞರು, ಶ್ವಾಸಕೋಶ ತಜ್ಞರು, ದಂತ ವೈದ್ಯಕೀಯ, ಶಸ್ತ್ರ ಚಿಕಿತ್ಸಕರು, ಮಕ್ಕಳ ತಜ್ಞರು, ಸ್ತ್ರೀ ರೋಗ ತಜ್ಞರು, ಶ್ರವಣ ಆರೋಗ್ಯ ತಜ್ಞರು, ಮಾನಸಿಕ ಆರೋಗ್ಯ ತಜ್ಞರು ಸೇರಿದಂತೆ 15 ವಿಭಾಗಗಳ ನುರಿತ ತಜ್ಞರು ಪಾಲ್ಗೊಳ್ಳಲಿದ್ದಾರೆ. ಅಲ್ಲದೆ ಸರ್ಕಾರದ ಯೋಜನೆಗಳ ಬಗ್ಗೆ ಆಯುಷ್ಮಾನ್ ಭಾರತ್ ಯೋಜನಾಧಿಕಾರಿ ಪಾಲ್ಗೊಂಡು ಮಾಹಿತಿ ನೀಡಲಿದ್ದಾರೆ. ಪತ್ರಕರ್ತರು ಮತ್ತವರ ಕುಟುಂಬವರ್ಗದವರು, ಪತ್ರಿಕಾ ವಿತರಕರು ಹಾಗೂ ಕುಟುಂಬಸ್ಥರು ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಕೊಡಗು ಪತ್ರಕರ್ತರ ಸಂಘದ ಕ್ಷೇಮಾಭಿವೃದ್ಧಿ ಸಮಿತಿ ಮನವಿ ಮಾಡಿದೆ.



ಕುಡಿಯರ ಬೋಜಪ್ಪ ನಿಧನ

ನಾಪೋಕ್ಲು, ಸೆ.5– ಇಲ್ಲಿಗೆ ಸಮೀಪದ ಕಕ್ಕಬೆ ಯಾವಕಪಾಡಿ ಗ್ರಾಮದ ನಿವಾಸಿ ಕುಯಿನಾಲಾ ಮಲೆ ಕುಡಿಯರ ಬೋಜಪ್ಪ (72) ಗುರುವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಶುಕ್ರವಾರ ಅವರ ಸ್ವಗೃಹದಲ್ಲಿ ನೆರವೇರಿಸಲಾಯಿತು. ಮೃತರು ಪತ್ನಿ ಹಾಗೂ ಎರಡು ಮಕ್ಕಳು ಸೇರಿದಂತೆ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

ಅರೆಯಡ ರಮೇಶ್ ನಂಜಪ್ಪ



ನಾಪೋಕ್ಲು,ಸೆ.5–ಇಲ್ಲಿಯ ಗ್ರಾಮದ ನಿವಾಸಿ ನಿವೃತ್ತ ಶಿಕ್ಷಕ ಅರೆಯಡ ರಮೇಶ್ ನಂಜಪ್ಪ(78) ಶುಕ್ರವಾರ ನಿಧನರಾದರು.

ಮೃತರ ಅಂತ್ಯಕ್ರಿಯೆಯು ಅರೆಯಡ ಕುಟುಂಬದ ರುದ್ರ ಭೂಮಿಯಲ್ಲಿ ನೆರವೇರಿಸಲಾಯಿತು. ಮೃತರು ಪತ್ನಿ ಸೇರಿದಂತೆ ಅಪಾರ ಬಂಧು ಭಾಂಧವರನ್ನು ಅಗಲಿದ್ದಾರೆ.

ದೇವರಾಜ ಅರಸು ಜನ್ಮ ದಿನಾಚರಣೆ



ಡಿ.ದೇವರಾಜ್ ಅರಸು ಅವರ 110ನೇ ಜನ್ಮ ದಿನಾಚರಣೆಯ ಪ್ರಯುಕ್ತ ಸೆಸ್ಕ್ ನೌಕರರನ್ನು ಸನ್ಮಾನಿಸಿದರು.

ಮಡಿಕೇರಿ,ಸೆ.5–ದಲಿತ ಸಂಘರ್ಷ ಸಮಿತಿ ಜಿಲ್ಲಾ ಘಟಕದ ವತಿಯಿಂದ ಮಾಜಿ ಮುಖ್ಯಮಂತ್ರಿ, ಡಿ.ದೇವರಾಜ್ ಅರಸು ಅವರ 110ನೇ ಜನ್ಮ ದಿನಾಚರಣೆಯ ಪ್ರಯುಕ್ತ ಸೆಸ್ಕ್ ನೌಕರರನ್ನು ಸನ್ಮಾನಿಸಲಾಯಿತು.

ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾಧ್ಯಕ್ಷ ಎಂ.ಪಿ.ಕೇಶವ ಕಾಮತ್, ಉದ್ಘಾಟಿಸಿ ವಿದ್ಯುತ್ ಇಲ್ಲದೆ ದಿನ ಕಳೆಯಲು ಸಾಧ್ಯವಿಲ್ಲ. ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುವ ನಿಟ್ಟಿನಲ್ಲಿ ಸೆಸ್ಕ್ ನೌಕರರು ಹಗಲು ರಾತ್ರಿ ಎನ್ನದೆ, ಗಾಳಿ, ಮಳೆ, ಚಳಿಯನ್ನು ಲೆಕ್ಕಿಸದೆ ದಿನದ ಇಪ್ಪತ್ತಾಲ್ಕು ಗಂಟೆಯೂ ನಾಗರಿಕರ ಸೇವೆಗೆ ಶ್ರಮಿಸುತ್ತಿರುವುದು ಶ್ಲಾಘನೀಯ. ಸಾರ್ವಜನಿಕರು ನೌಕರರ ಸಮಸ್ಯೆಯನ್ನು ಅರಿತು ಅವರಿಗೆ ಉತ್ತಮ ಸಹಕಾರ ನೀಡಬೇಕು ಎಂದರು.

ಸಹಮತ ವೇದಿಕೆಯ ಅಧ್ಯಕ್ಷ ಟಿ.ಪಿ. ರಮೇಶ್ ಮಾತನಾಡಿದರು. ದಸಂಸ ಜಿಲ್ಲಾ ಸಂಚಾಲಕ ಹೆಚ್.ಎಲ್. ದಿವಾಕರ್ ಮಾತನಾಡಿ, ಪ್ರತಿವರ್ಷ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಹಾಗೂ ಶಾಲೆಗೆ ಶೇ.100ರಷ್ಟು ಫಲಿತಾಂಶ ಗಳಿಸಿದ ಶಿಕ್ಷಕರನ್ನು ಗೌರವಿಸುವ ಕೆಲಸ ಮಾಡುತ್ತಿದೆ. ಆ ಮೂಲಕ 15 ವರ್ಷಗಳಿಂದ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಪ್ರೋತ್ಸಾಹ ನೀಡಲಾಗುತ್ತಿದೆ ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಲ್ಯಾಣಾಧಿಕಾರಿ ಹೆಚ್.ಎ. ಮೋಹನ್ ಕುಮಾರ್ ಮಾತನಾಡಿದರು. ಕಸಾಪ ಜಿಲ್ಲಾಧ್ಯಕ್ಷ ಕೇಶವ ಕಾಮತ್, ಹೆಚ್.ಎ. ಮೋಹನ್ ಕುಮಾರ್‌ರನ್ನು ಸನ್ಮಾನಿಸಲಾಯಿತು. ಸಹಮತ ವೇದಿಕೆಯ ಅಧ್ಯಕ್ಷ ಟಿ.ಪಿ. ರಮೇಶ್‌ರಿಗೆ ಅಹಿಂದ ಭೂಷಣ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ದಸಂಸ ತಾಲೂಕು ಸಂಚಾಲಕ ದೀಪಕ್ ಪೊನ್ನಪ್ಪ, ಕಾಂಗ್ರೆಸ್ ಮುಖಂಡ ಜೆ.ಮೋಹನ್ ಮೌರ್ಯ, ಡಿಎಸ್‌ಎಸ್ ಪೊನ್ನಂಪೇಟೆ ತಾಲೂಕು ಸದಸ್ಯ ಹೆಚ್. ಆರ್.ಜಗದೀಶ್, ದಸಂಸ ಸದಸ್ಯ ರಮೇಶ್, ರಾಜ್ಯ ಸಮಿತಿ ಸದಸ್ಯ ವೀರ ಭದ್ರಯ್ಯ, ಹೆಚ್.ಆರ್.ಜಗದೀಶ್ ಹಾಜರಿದ್ದರು.

ಸೆ.7ರಂದು ರಾಷ್ಟ್ರಮಟ್ಟದ ಕೊಡಗು ಮಾನ್ಸೂನ್ ಹಾಲ್ಫ್ ಮ್ಯಾರಥಾನ್

ಗೋಣಿಕೊಪ್ಪ, ಸೆ.5–ಕರುಂಬಯ್ಯಾಸ್ ಅಕಾಡೆಮಿಕ್ ಲರ್ನಿಂಗ್ ಸ್ಕೂಲ್, ಅಶ್ವಿನಿ ಸ್ಪೋರ್ಟ್ಸ್ ಫೌಂಡೇಷನ್, ಎನ್‌ಇಬಿ, ಫೆಡರಲ್ ಬ್ಯಾಂಕ್, ಟಾಟಾ ಕಾಫಿ ಹಾಗೂ ಲೋಪಮುದ್ರ ಹಾಸ್ಪಿಟಲ್ ಸಹಯೋಗದಲ್ಲಿ ಸೆ.7 ರಂದು ರಾಷ್ಟ್ರಮಟ್ಟದ ಕೊಡಗು ಮಾನ್ಸೂನ್ ಹಾಫ್ ಮ್ಯಾರಥಾನ್ ಹಮ್ಮಿಕೊಂಡಿದೆ ಎಂದು ಕ್ಯಾಲ್ಸ್ ಮುಖ್ಯಸ್ಥ ದತ್ತ ಕರುಂಬಯ್ಯ ತಿಳಿಸಿದ್ದಾರೆ.

ಶಾಲಾ ಆವರಣದಿಂದ ಬೆಳಗ್ಗೆ 6 ಕ್ಕೆ ಮ್ಯಾರಥಾನ್ ಆರಂಭಗೊಳ್ಳಲಿದೆ. 6.45ಕ್ಕೆ 10ಕೆ. 8 ಗಂಟೆಗೆ 5 ಕೆ. ಸ್ಪರ್ಧೆ ನಡೆಯಲಿದೆ. 10 ಕಿಮೀ, 5 ಕಿಮೀ. ದೂರ ನಡೆಯುವ ಸ್ಪರ್ಧೆ ಕೈಕೇರಿ, ಕಳತ್ಮಾಡ್, ಪಾಲಿಬೆಟ್ಟ ಟಾಟಾ ಕಾಫಿ ಮೂಲಕ ಹಿಂತಿರುಗಲಿದೆ.

ಭಾವೈಕ್ಯತೆಯ ಪ್ರತೀಕ ಓಣಂ ಹಬ್ಬ : ಸಂಭ್ರಮದಿಂದ ಆಚರಣೆ

ಕುಶಾಲನಗರ: ಕೇರಳದ ನಾಡಹಬ್ಬ ಭಾವೈಕ್ಯತೆಯ ಪ್ರತೀಕವಾದ ಓಣಂ ಹಬ್ಬವನ್ನು ಪಟ್ಟಣ ಮತ್ತು ಸುತ್ತಮುತ್ತಲಿನಲ್ಲಿರುವ ಮಲಯಾಳಿ ಭಾಷಿಕರು ಸಡಗರ ಸಂಭ್ರಮದಿಂದ ಆಚರಿಸಿದರು.

ಹೋಬಳಿ ವ್ಯಾಪ್ತಿಯ ಗುಡ್ಡೆ ಹೊಸೂರು, ಏಳನೇ ಹೊಸಕೋಟೆ, ಹಾರಂಗಿ, ಚಿಕ್ಕತ್ತೂರು, ಕೂಡಿಗೆ, ಸಿದ್ಧಲಿಂಗಪುರ, ಅರಸಿಣಕುಪ್ಪೆ, ನಾಕುರು–ಶಿರಂಗಾಲ, ನಂಜರಾಯಪಟ್ಟಣ ಗ್ರಾಮಗಳಲ್ಲಿ ಹಬ್ಬದ ಅಂಗವಾಗಿ ಮಲಯಾಳಿಗಳು ಸಾಂಪ್ರದಾಯಿಕ ಹೊಸ ಉಡುಗೆ ತೊಡುಗೆ ಧರಿಸಿ ದೇವಸ್ಥಾನಗಳಿಗೆ ತೆರಳಿ ಪೂಜೆ ಸಲ್ಲಿಸಿದರು. ಮಲಯಾಳಿ ಭಾಷಿಕರು ಪರಸ್ಪರ ಸಿಹಿ ವಿತರಿಸುವ ಮೂಲಕ ಹಬ್ಬದ ಶುಭಾಶಯ ಹಂಚಿಕೊಂಡರು.

ಗುಮ್ಮಕೊಲ್ಲಿ ನಿವಾಸಿ ಎಂ.ಜಿ. ವಿಶ್ವನಾಥ್ ಮಾತನಾಡಿ, ಮಲಯಾಳಿ ಭಾಷಿಗರ ರಾಷ್ಟ್ರೀಯ ಹಬ್ಬವಾದ ಓಣಂ ಆಚರಣೆ ಹತ್ತು ದಿನಗಳ ಕಾಲ ನಡೆಯುತ್ತದೆ.



ಈ ಓಣಂ ಆಚರಣೆಗೆ ಕೇವಲ ಮನೆಗಳು ಅಲ್ಲದೆ ಇಡೀ ನಾಡೇ ತೆರೆದು ಕೊಳ್ಳುತ್ತದೆ. ಹಾಗಾಗಿ ಇಲ್ಲೂ ವಿಶೇಷವಾಗಿ ಆಚರಿಸಿದ್ದಾಗಿ ಹೇಳಿದರು.

ಸಂಗೀತ ಸ್ಪರ್ಶದಿಂದ ಮಗುವಿನ ಒರಟುತನ ದೂರ

ಸಂಗೀತ ಸ್ಪರ್ಧೆಯಲ್ಲಿ ಸಂಕೇತ್ ಪೂವಯ್ಯ ಅಭಿಮತ



ಸಾಹಿತ್ಯಪ್ರೇಮಿ ವೆಂಕಟೇಶ್ ಕಾಮತ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸಂಕೇತ್ ಪೂವಯ್ಯ ಉದ್ಘಾಟಿಸಿದರು.

ವಿರಾಜಪೇಟೆ, ಸೆ.5–ಪ್ರತಿಯೊಬ್ಬ ಮಗುವಿಗೆ ಸಂಗೀತ ಸ್ಪರ್ಶವಾದಲ್ಲಿ ಒರಟುತನ ದೂರವಾಗಿ ಮೃದುವಂತಿಕೆ ದೊರೆಯಲಿದೆ ಎಂದು ರಾಜ್ಯ ವನ್ಯಜೀವಿ ಸಂರಕ್ಷಣಾ ಮಂಡಳಿಯ ಸದಸ್ಯ ಮೇರಿಯಂಡ ಸಂಕೇತ್ ಪೂವಯ್ಯ ಹೇಳಿದರು.

ಸಾಹಿತ್ಯಪ್ರೇಮಿ ವೆಂಕಟೇಶ್ ಕಾಮತ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ವಾಯ್ಸ್ ಆಫ್ ವಿರಾಜಪೇಟೆ ಸಂಗೀತ ಸ್ಪರ್ಧೆ ಉದ್ಘಾಟಿಸಿದ ಪೂವಯ್ಯ, ಕಾಮತ್ ರಾಜ್ಯದಲ್ಲಿಯೇ ಅತ್ಯುನ್ನತ ದಸ್ತಾವೇಜು ಬರಹಗಾರರಾಗಿ ಖ್ಯಾತಿ ಪಡೆದಿದ್ದರು. ಅವರಿಗೆ ಕನ್ನಡ ಸಾಹಿತ್ಯದ ಬಗ್ಗೆ ಅಪಾರ ಪ್ರಮಾಣದ ಆಸಕ್ತಿ ಮತ್ತು ಒಲವನ್ನು ಹೊಂದಿದ್ದರು. ಅಪಾರ ಪಾಂಡಿತ್ಯ ಹೊಂದಿ ಅತ್ಯಂತ ಸರಳ ಜೀವಿಯಾಗಿ, ಸಜ್ಜನ ವ್ಯಕ್ತಿಯಾ ಗಿದ್ದ ವ್ಯಕ್ತಿಯಾಗಿ ಗೋವು ಪ್ರೇಮಿ ಯಾಗಿದ್ದರು. ಮನೆಯಲ್ಲಿ ತಮ್ಮ ಮಕ್ಕಳಂತೆ ಗೋವುಗಳನ್ನು ಸಾಕಿ ಸಲಹಿದ್ದರು

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದಕ್ಷಿಣ ಕನ್ನಡ ಜಿಲ್ಲೆಯ ತುಳಸಿ ಫಾರ್ಮ್‌ನ ಮಣಿಕಾರ್ ಲಕ್ಷ್ಮಿ ನಾರಾಯಣ ಶಾನ್‌ಬೋಗ್ ಮಾತನಾಡಿದರು. ತೀರ್ಪುಗಾರರಾಗಿದ್ದ ವಕೀಲ ಪ್ರಶಾಂತ್ ಬಾಳಿಗಾ ಮಾತನಾಡಿ, ಪ್ರತಿಯೊಬ್ಬರಲ್ಲಿಯು ಒಳ್ಳೆಯ ಆಲೋಚನೆ ಇದ್ದಲ್ಲಿ ಉತ್ತಮ ದಾರಿಯತ್ತ ತೆರಳುತ್ತೇವೆ. ಯಾವುದೇ ವಿಷಯವನ್ನಾದರೂ ಶ್ರದ್ಧೆಯಿಂದ ಕಲಿಯಬೇಕು. ಯಶಸ್ಸಿನ ಶಿಖರ ಏರಬೇಕು. ಅದಕ್ಕೆ ನಿತ್ಯವು ಪರಿಶ್ರಮವಿರಬೇಕು. ಕಲಾವಿದರಿಗೆ ಇದೊಂದು ಅವಕಾಶ ಎಲ್ಲರೂ ಕೂಡ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು

ಉತ್ಸವ ಸಮಿತಿ ಅಧ್ಯಕ್ಷ ರವೀಂದ್ರನಾಥ್ ಕಾಮತ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಹೊಸ ಜಿಎಸ್‌ಟಿ ನೀತಿ ದೇಶದ ಅಭಿವೃದ್ಧಿಗೆ ಪೂರಕ



ರವಿ ಕಾಳಪ್ಪ

ಮಡಿಕೇರಿ,ಸೆ.5–ಕೇಂದ್ರ ಸರ್ಕಾರ ಇತ್ತೀಚೆಗೆ ಘೋಷಿಸಿರುವ ಹೊಸ ಜಿಎಸ್‌ಟಿ ನೀತಿ ದೇಶದ ಅಭಿವೃದ್ಧಿಗೆ ಪೂರಕವಾಗಿದೆ. ಶೇ.12 ಮತ್ತು ಶೇ.28ರ ತೆರಿಗೆ ಸ್ಲ್ಯಾಬ್‌ಗಳನ್ನು ತೆಗೆದು ಹಾಕಿ ಶೇ.5 ಮತ್ತು ಶೇ.18ರ ಸ್ಲ್ಯಾಬ್ ಅನ್ನು ಮಾತ್ರ ಉಳಿಸಿರುವುದು ಸ್ವಾಗತಾರ್ಹ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ತಿಳಿಸಿದ್ದಾರೆ.

ನಾಲ್ಕು ಹಂತದ ಜಿಎಸ್‌ಟಿ ನೀತಿಯನ್ನು ಕಡಿತಗೊಳಿಸಿ 2ಕ್ಕೆ ಸೀಮಿತಗೊಳಿಸುವ ಮೂಲಕ ಜನಪರ ಕಾಳಜಿ ತೋರಿದೆ. ಈ ಕ್ರಮದಿಂದ ಅನೇಕ ವಸ್ತುಗಳ ಬೆಲೆ ಕಡಿಮೆಯಾಗಲಿದ್ದು, ಬಡವರ ಹಾಗೂ ಜನಸಾಮಾನ್ಯರ ಆರ್ಥಿಕ ಬಲ ಸುಧಾರಣೆಯಾಗಲಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆರೋಗ್ಯಕ್ಕೆ ಪೂರಕವಾದ ಅನೇಕ ಜೀವನಾವಶ್ಯಕ ಮತ್ತು ಜೀವರಕ್ಷಕ ಸಂಬಂಧಿಸಿದ 33 ಔಷಧಿಗಳು, ವೈಯುಕ್ತಿಕ ವಿಮೆ, ಕ್ಯಾನ್ಸರ್ ಚಿಕಿತ್ಸೆ ಹಾಗೂ ಸ್ಟೇಷನರಿಗಳು ಶೂನ್ಯ ತೆರಿಗೆ ವ್ಯಾಪ್ತಿಗೆ ಬರಲಿದೆ. ರಸಗೊಬ್ಬರ, ಕೃಷಿ ಯಂತ್ರೋಪಕರಣ, ಟ್ರ್ಯಾಕ್ಟರ್, ಸ್ಪಿಂಕ್ಲರ್ ಮತ್ತು ತುಂತುರು ನೀರಾವರಿಗೆ ಸಂಬಂಧಿಸಿದ ವಸ್ತುಗಳ ಮೇಲಿನ ತೆರಿಗೆಯನ್ನು ಶೇ.12ರಿಂದ ಶೇ.5ಕ್ಕೆ ಇಳಿಕೆ ಮಾಡುವ ಮೂಲಕ ಕೇಂದ್ರ ಸರಕಾರ ರೈತರ ಪ್ರಗತಿ ಹಾಗೂ ದೇಶದ ಅಭಿವೃದ್ಧಿಗೆ ದೊಡ್ಡ ಕೊಡುಗೆಯನ್ನೇ ನೀಡಿದೆ. ದೇಶದಲ್ಲಿ ದೊಡ್ಡ ಆರ್ಥಿಕ ಕ್ರಾಂತಿಯೇ ನಡೆಯಲಿದ್ದು, ಇತರ ರಾಷ್ಟ್ರಗಳಿಗೆ ಭಾರತ ಅಭಿವೃದ್ಧಿ ಮೂಲಕವೇ ಪ್ರತ್ಯುತ್ತರ ನೀಡಲಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

ಕೇಂದ್ರ ಸರ್ಕಾರ ಜನಪರ ಕಾಳಜಿಯಿಂದ ಅನೇಕ ತೆರಿಗೆ ಸುಧಾರಣೆಗಳನ್ನು ಮಾಡಿದ್ದರೂ ರಾಜ್ಯ ಸರಕಾರ ಕೇವಲ ಜಿಎಸ್‌ಟಿ ನೀತಿಯನ್ನು ಟೀಕಿಸುವುದರಲ್ಲೇ ಕಾಲಾಹರಣ ಮಾಡುತ್ತಿದೆ. ರಾಜ್ಯದಲ್ಲಿ ತಾನು ವಿಧಿಸಿರುವ ಹೆಚ್ಚಿನ ಸೆಸ್ ಮತ್ತು ತೆರಿಗೆಗಳನ್ನು ಇಳಿಕೆ ಮಾಡುವಲ್ಲಿ ಸರಕಾರ ವಿಫಲವಾಗಿದೆ ಎಂದು ಟೀಕಿಸಿದ್ದಾರೆ.

ತಿಮ್ಮರಾಜಿಪುರದಲ್ಲಿ ಆಟವಾಡುತ್ತಿದ್ದ ಮಗುವಿನ ಮೇಲೆ ನಾಯಿ ದಾಳಿ

ಕೊಳ್ಳೇಗಾಲ, ಸೆ.5– ಮನೆಯ ಮುಂದಿನ ಅಂಗಳದಲ್ಲಿ ಆಟವಾಡುತ್ತಿದ್ದ ಮಗುವಿನ ಮೇಲೆ ಬೀದಿ ನಾಯಿಯೊಂದು ದಾಳಿ ನಡೆಸಿ ಕಚ್ಚಿದ ಘಟನೆ ನಡೆದಿದೆ.



ನಾಯಿ ದಾಳಿಗೆ ಗಾಯಗೊಂಡ ಮಗು

ತಿಮ್ಮರಾಜೀಪುರ ಗ್ರಾಮದ ಶಶಿ ಮತ್ತು ಸುಧಾ ದಂಪತಿ ಪುತ್ರಿ, 3 ವರ್ಷದ ದಿಶಾಳ ಕೆನ್ನೆ, ಕತ್ತು, ಕಿವಿಯ ಭಾಗವನ್ನು ಕಚ್ಚಲು ಆರಂಭಿಸುತ್ತಿದ್ದಂತೆ ನೆರೆದಿದ್ದ ನಾಗರಿಕರು, ಪೋಷಕರು ನಾಯಿಯನ್ನು ಓಡಿಸಿ ಮಗುವನ್ನು ರಕ್ಷಿಸಿದ್ದಾರೆ. ಅಸ್ವಸ್ಥಗೊಂಡ ಮಗುವನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿದೆ.

ತಾಲೂಕಿನ ತಿಮ್ಮರಾಜಿಪುರ ಗ್ರಾಮದಲ್ಲಿ ಕಳೆದ ಒಂದು ತಿಂಗಳಿಂದ ನಾಲ್ಕು ಮಂದಿಗೆ ನಾಯಿ ಕಚ್ಚಿ ಗಾಯಗೊಳಿಸಿದ್ದು ಇತ್ತೀಚಿನ ದಿನಗಳಲ್ಲಿ ಗ್ರಾಮದಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿದ್ದು ಸಂಬಂಧಪಟ್ಟವರು ಕ್ರಮಕೈಗೊಳ್ಳುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ. ಹಿಂದೆ ಗ್ರಾ.ಪಂ ಸದಸ್ಯ ಕೆಂಪರಾಜು ಅವರಿಗೂ ಸಹ ನಾಯಿ ಕಚ್ಚಿದ್ದು ಇನ್ನೂ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಲ್ಲದೆ ಗ್ರಾಮದ ಕೆಂಪಯ್ಯ ಹಾಗೂ ಮಲ್ಲು ಸೇರಿದಂತೆ ಹಲವರಿಗೆ ನಾಯಿ ಕಚ್ಚಿತ್ತು. ಈ ಸಂಬಂಧ ಜಿಲ್ಲಾಡಳಿತ, ತಾಲೂಕು ಆಡಳಿತ ತಕ್ಷಣ ಕ್ರಮಕೈಗೊಂಡು ನಾಯಿಗಳ ಹಾವಳಿಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದ್ದಾರೆ

ಗುಂಡ್ಲುಪೇಟೆಯಲ್ಲಿ ಸಂಭ್ರಮದ ಓಣಂ ಆಚರಣೆ



ಓಣಂ ಅಂಗವಾಗಿ ಯುವತಿಯರು ಪುಷ್ಪರಂಗೋಲಿ ಬಿಡಿಸಿ ಸಂಭ್ರಮಿಸಿದರು.

ಗುಂಡ್ಲುಪೇಟೆ, ಸೆ–5 (ಸೋಮ್.ಜಿ)– ಪಟ್ಟಣ ಹಾಗೂ ತಾಲೂಕಿನಲ್ಲಿ ನೆಲೆಸಿರುವ ಕೇರಳಿಗರು ಶುಕ್ರವಾರ ತಮ್ಮ ಮನೆಗಳಲ್ಲಿ ಓಣಂ ಹಬ್ಬವನ್ನು ಸಡಗರ ಸಂಭ್ರಮಗಳಿಂದ ಆಚರಿಸಿದರು.

ಕೇರಳದ ಗಡಿಯಲ್ಲಿರುವ ತಾಲೂಕಿನಲ್ಲಿ ಸಾವಿರಾರು ಮಲಯಾಳಿ ಕುಟುಂಬಗಳು ನೆಲೆಸಿದ್ದು, ತಮ್ಮ ತಮ್ಮ ಮನೆಗಳಲ್ಲಿ ಓಣಂ ಹಬ್ಬವನ್ನು ಶ್ರದ್ಧಾ ಭಕ್ತಿಗಳಿಂದ ಆಚರಿಸಿದರು. ಕೇರಳದ ರಾಜನಾಗಿದ್ದ ಮಹಾಬಲಿಯು ವರ್ಷಕ್ಕೊಮ್ಮೆ ಭೂಮಿಗೆ ಬರುತ್ತಾನೆ ಎಂಬ ನಂಬಿಕೆಯಿಂದ ಓಣಂ ಹಬ್ಬವನ್ನು ಆಚರಿಸಲಾಗುತ್ತಿದೆ. ಕೇರಳದಲ್ಲಿ ಹತ್ತು ದಿನಗಳ ಕಾಲ ನಡೆಯುವ ಹಬ್ಬದ ಕೊನೆಯ ದಿನವಾದ ಶುಕ್ರವಾರ ತಾಲೂಕಿನಲ್ಲಿ ನೆಲೆಸಿರುವ ಮಲೆಯಾಳಿಗಳು ಆಚರಿಸುತ್ತಾ ಬಂದಿದ್ದಾರೆ.

ಈ ಅಂಗವಾಗಿ ಶುಕ್ರವಾರ ಮುಂಜಾನೆ ಶುಭ್ರವಸ್ತ್ರಧರಿಸಿದ ಮಹಿಳೆಯರು ಮಹಾಬಲಿ ಚಕ್ರವರ್ತಿಯನ್ನು ಸ್ವಾಗತಿಸುವ ಸಲುವಾಗಿ ತಮ್ಮ ಮನೆಗಳಲ್ಲಿ ನಾನಾ ವರ್ಣದ ಹೂವುಗಳಿಂದ ಪುಷ್ಪ ರಂಗೋಲಿ ಬಿಡಿಸಿ ನಡುವೆ ಅಲಂಕರಿಸಿದ ದೀಪ ಹಚ್ಚಿದರೆ ಶ್ವೇತವಸ್ತ್ರಧಾರಿಗಳಾದ ಪುರುಷರು ಹಾಗೂ ಕುಟುಂಬದವರು ತಮ್ಮ ಬಂಧು ಬಾಂಧವರನ್ನು ಮನೆಗೆ ಕರೆದು ಹಬ್ಬ ಆಚರಿಸಿದರು.

ಇಂದು ಕುದೇರು ಗ್ರಾಮದ ಶ್ರೀ ಸ್ವರ್ಣಗೌರಿ ವಿಸರ್ಜನೆ

ಚಾಮರಾಜನಗರ: ತಾಲೂಕಿನ ಕುದೇರು ಗ್ರಾಮದ ಗೌರಿ ದೇವಸ್ಥಾನದಲ್ಲಿ ಪ್ರತಿಷ್ಠಾಪನೆ ಮಾಡಲಾಗಿದ್ದ ಶ್ರೀಸ್ವರ್ಣಗೌರಿ ಅಮ್ಮನವರ ಮೂರ್ತಿಯನ್ನು ಸೆ.6ರ ಬೆಳಿಗ್ಗೆ 10 ಗಂಟೆಗೆ ವಿಸರ್ಜನೆ ಮಾಡಲಾಗುವುದು. ಗ್ರಾಮದ ಕಾವಿಬಸವೇಶ್ವರ ದೇವಸ್ಥಾನದಿಂದ ಶ್ರೀಮಲ್ಲಿಕಾರ್ಜುನಸ್ವಾಮಿ ಅಡ್ಡ ಪಲ್ಲಕ್ಕಿ ಉತ್ಸವ ಆರಂಭವಾಗುತ್ತದೆ. ಉತ್ಸವದಲ್ಲಿ ಕೇರಳದ ಚಂಡಿ ಮೇಳ ತಮಿಳುನಾಡಿನ ಸುಪ್ರಸಿದ್ಧ ಕರಗ, ವೀರಗಾಸೆ, ನಂದಿ ಧ್ವಜ, ಗಾರುಡಿ ಗೊಂಬೆ, ಮಂಗಳವಾದ್ಯಗಳೊಂದಿಗೆ ಮೆರವಣಿಗೆ ನಡೆಸಿ, ಗೌರಿ ಕಟ್ಟೆಯಲ್ಲಿ ತೆಪ್ಪೋತ್ಸವದೊಂದಿಗೆ ಗೌರಿ ಮೂರ್ತಿ ವಿಸರ್ಜನೆ ಮಾಡಲಾಗುತ್ತದೆ.

ರಾಮದಾಸ್ ಅಮಾನತಿಗೆ ಒತ್ತಾಯಿಸಿ ಪ್ರತಿಭಟನೆ



ಯುವಸೇನೆ ಕರ್ನಾಟಕ ಸೇವಾ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಸೆ.5–ಪೌರಾಯುಕ್ತ ಸೇವೆಯಿಂದ ಬಿಡುಗಡೆಗೊಂಡಿರುವ ರಾಮದಾಸ್ ವಿರುದ್ಧ ತನಿಖೆ ನಡೆಸಿ ಸೇವೆಯಿಂದ ಅಮಾನತ್ತು ಪಡಿಸಬೇಕು ಎಂದು ಒತ್ತಾಯಿಸಿ ಯುವಸೇನೆ ಕರ್ನಾಟಕ ಸೇವಾ ಸಂಘದ ವತಿಯಿಂದ ಕಂಸಾಳೆ ಹೊಡೆಯುವ ಮೂಲಕ ವಿನೂತನ ಪ್ರತಿಭಟನೆ ನಡೆಸಲಾಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಸಂಜೆ ಯುವಸೇನೆ ಕರ್ನಾಟಕ ಸೇವಾ ಸಂಘದ ಪ್ರತಿಭಟನಾನಿರತರು ಪೌರಾಯುಕ್ತ ರಾಮದಾಸ್ ಭಾವಚಿತ್ರ ಹಿಡಿದು ತೊಲಗಲಿ, ತೊಲಗಲಿ ರಾಮದಾಸ್ ತೊಲಗಲಿ ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಯುವಸೇನೆ ಕರ್ನಾಟಕ ಸೇವಾ ಸಂಘ ಅಧ್ಯಕ್ಷ ನಮ್ಮನೆ ಪ್ರಶಾಂತ್ ಮಾತನಾಡಿ, ನಗರಸಭೆಯಲ್ಲಿ ಸಾಕಷ್ಟು ಅಕ್ರಮ ಎಸಗಿದ ಪೌರಾಯುಕ್ತ ರಾಮದಾಸ್ ಅವರನ್ನು ಜಿಲ್ಲಾಧಿಕಾರಿಗಳು ಸೇವೆಯಿಂದ ಬಿಡುಗಡೆಗೊಳಿಸಿರುವುದು ಸ್ವಾಗತಾರ್ಹ. ಅವರು ಮತ್ತೆ ಪೌರಾಯುಕ್ತರಾಗಿ ಬರಲು ಪ್ರಯತ್ನ ಮಾಡುತ್ತಿದ್ದಾರೆ. ಯಾವುದೇ ಕಾರಣಕ್ಕೂ ಇಂತಹ ಭ್ರಷ್ಟ ಅಧಿಕಾರಿಯನ್ನು ಮತ್ತೆ ನಗರಸಭೆ ಪೌರಾಯುಕ್ತರಾಗಿ ಮುಂದುವರಿಸಬಾರದು ಎಂದು ಆಗ್ರಹಿಸಿದರು.

ಸಭೆಗೆ ದಕ್ಷ, ಪ್ರಾಮಾಣಿಕ ಪೌರಾಯುಕ್ತರನ್ನು ನೇಮಿಸಿ ನಗರದ ಅಭಿವೃದ್ಧಿ ಜಿಲ್ಲಾಧಿಕಾರಿಗಳು ಸಹಕರಿಸಬೇಕು. ನಗರಸಭೆಗೆ ಹೊಸ ಪೌರಾಯುಕ್ತರನ್ನು ನೇಮಿಸುವಂತೆ ಒತ್ತಾಯಿಸಿದರು. ಒಂದು ವೇಳೆ ಮತ್ತೆ ರಾಮದಾಸ್ ಅವರನ್ನು ಪೌರಾಯುಕ್ತರಾಗಿ ಮುಂದುವರಿಸಿದರೆ ಅನಿರ್ದಿಷ್ಟ ಧರಣಿ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಭಾನುಪ್ರಕಾಶ್, ಶಿವಶಂಕರಚಟ್ಟು, ವಿಜಯಕುಮಾರ್ ಜಟ್ಟಪ್ಪ, ನಾಗರಾಜು, ಸಿದ್ದನಾಯಕ, ಡಿ.ಎನ್, ಉಷಾ, ಮಹೇಶ್‌ಬಜಾಜ್, ಕಂಸಾಳೆ ಮಹದೇವ, ಕಂಸಾಳೆ ರಾಜಣ್ಣ, ಆಚಾರ್ ಮಧು, ಚಂದ್ರು, ಮಂಜು, ಇತರರು ಭಾಗವಹಿಸಿದ್ದರು.

ಇಂದು ಹನೂರು ತಾಲೂಕು ಮಟ್ಟದ ಕ್ರೀಡಾಕೂಟ

ಚಾಮರಾಜನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಹನೂರು ತಾಲ್ಲೂಕು ಮಟ್ಟದ ಗ್ರಾಮೀಣ ಕ್ರೀಡಾಕೂಟವನ್ನು ಸೆ.6ರಂದು ಬೆಳಿಗ್ಗೆ 10 ಗಂಟೆಗೆ ಹನೂರಿನ ಶ್ರೀ ಮಲೆಮಹದೇಶ್ವರ ತಾಲೂಕು ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಶಾಸಕ ಎಂ.ಆರ್. ಮಂಜುನಾಥ್ ಕಾರ್ಯಕ್ರಮ ಉದ್ಘಾಟಿಸಿ, ಅಧ್ಯಕ್ಷತೆ ವಹಿಸುವರು. ಪಪಂ ಅಧ್ಯಕ್ಷೆ ಮುಮ್ತಾಜ್ ಭಾನು, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷರಾದ ಹೆಚ್.ವಿ. ಚಂದ್ರು ಪಾಲ್ಗೊಳ್ಳುವರು.

ಈದ್ ಮಿಲಾದ್ ಪ್ರಯುಕ್ತ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ

ಯಳಂದೂರು, ಸೆ.5 (ವಿ.ನಾಗರಾಜು)– ಈದ್ ಮಿಲಾದ್ ಪ್ರಯುಕ್ತ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ ಕಾರ್ಯಕ್ರಮವನ್ನು ಪಟ್ಟಣದ ಮುಸ್ಲಿಂ ಮುಖಂಡರಿಂದ ಹಮ್ಮಿಕೊಳ್ಳಲಾಗಿತ್ತು.

ಧರ್ಮ ಗುರುಗಳಾದ ಅಬ್ರಹಂ ಅಹಮದ್ ಮಾತನಾಡಿ, ಈದ್–ಎ–ಮಿಲಾದ್–ಉನ್–ನಬಿ ಪ್ರವಾದಿ ಮುಹಮ್ಮದ್ ಅವರ ಜನ್ಮದಿನದ ಆಚರಣೆಯಾಗಿದ್ದು, ಇಸ್ಲಾಮಿಕ್ ಕ್ಯಾಲೆಂಡರ್‌ನ ಮೂರನೇ ತಿಂಗಳಾದ ರಬಿ–ಉಲ್–ಅವ್ವಲ್‌ನ 12ನೇ ದಿನದಂದು ಆಚರಿಸಲಾಗುತ್ತದೆ. ಕೆಲ ಮುಸ್ಲಿ ಮರು ಉಪವಾಸವನ್ನೂ ಮಾಡುತ್ತಾರೆ ಮತ್ತು ಬಡವರಿಗೆ, ನಿರ್ಗತಿಕರಿಗೆ ಆಹಾರ ಮತ್ತು ಬಟ್ಟೆಗಳನ್ನು ದಾನ ಮಾಡುತ್ತಾರೆ ಎಂದು ತಿಳಿಸಿದರು.

ಮುಖಂಡರಾದ ನಯಾಜ್ ಖಾನ್ ಮಾತನಾಡಿ, ಈದ್ ಮಿಲಾದ್ ಪ್ರವಾದಿಯವರ ದಯೆ, ಸಹಾನುಭೂತಿ ಮತ್ತು ಬೋಧನೆಗಳನ್ನು ನೆನಪಿಸಲು ಮೀಸಲಾಗಿದೆ. ಈ ದಿನವನ್ನು ಪ್ರೀತಿ, ಏಕತೆ ಮತ್ತು ಆಧ್ಯಾತ್ಮಿಕ ಅರಿವಿನ ಸಂಕೇತವೆಂದು ಪರಿಗಣಿಸಲಾಗುತ್ತದೆ. ಇದರಿಂದ ಮುಸ್ಲಿಮರು ಪ್ರವಾದಿಯ ಆದರ್ಶಗಳನ್ನು ಅಳವಡಿಸಿಕೊಳ್ಳಲು ಪ್ರತಿಜ್ಞೆ ಮಾಡುತ್ತಾರೆ ಎಂದು ತಿಳಿಸಿದರು.

ಪಟ್ಟಣದಲ್ಲಿರುವ ಮಸೀದಿಯನ್ನು ವಿವಿಧ ಹೂವುಗಳಿಂದ ಅಲಂಕರಿಸಲಾಗಿತ್ತು ಪಟ್ಟಣದ ಜಾಮಿಯಾ ಮಸೀದಿಯಲ್ಲಿ ಈದ್ ಮಿಲಾದ್ ಪ್ರಯುಕ್ತ ವಿಶೇಷ ಪ್ರಾರ್ಥನೆಯನ್ನು ಸಲ್ಲಿಸಲಾಯಿತು. ಪಟ್ಟಣ ಪಂಚಾಯಿತಿ ಸದಸ್ಯರಾದ ಮುನಾವರ್ ಬೇಗ್, ಆರೋಗ್ಯ ರಕ್ಷಣಾ ಸಮಿತಿ ಸದಸ್ಯರಾದ ಜಮೀರ್, ಮುಖಂಡರಾದ ಇರ್ಫಾನ್, ಜಿಬ್ರಾನ್, ಜಮೀಲ್, ರಿಜ್ವಾನ್, ಜಮೀರ್, ತನ್ವೀರ್, ರೆಹಮಾನ್, ನಿಜಾಂ, ನವಾಬ್, ಮುನಾವರ್ ಪಾಷಾ, ಅಲ್ತಾಫ್, ಪರ್ವೇಜ್ ಪಾಷ ಸೇರಿದಂತೆ ನೂರಾರು ಮುಸ್ಲಿಂ ಮುಖಂಡರು ಹಾಜರಿದ್ದರು

ಇಂದು ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸಭೆ

ಚಾಮರಾಜನಗರ,ಸೆ.5 – ಹೋಬಳಿ ಮಟ್ಟದ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆ ಹಾಗೂ ಸಂವಾದ ಕಾರ್ಯಕ್ರಮವನ್ನು, ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆಯಲ್ಲಿ ಸೆ.6ರ ಬೆಳಿಗ್ಗೆ 11 ಗಂಟೆಗೆ ಬಂಡಿಗೆರೆ ಗ್ರಾಮದ ಉಪ್ಪಾರ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ ಎಂದು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆ.8, ಗೋತಳಿ ಸಂರಕ್ಷಣೆ ಬಗ್ಗೆ ಕಾರ್ಯಾಗಾರ

ಗುಂಡ್ಲುಪೇಟೆ, ಸೆ.5 (ಸೋಮ್.ಜಿ)– ತಾಲೂಕಿನ ಕೃಷಿಕರಿಗೆ ಸಾವಯವ ಕೃಷಿ ಮತ್ತು ಗೋತಳಿ ಸಂರಕ್ಷಣೆಯ ಬಗ್ಗೆ ಸೆ–8ರ ಸೋಮವಾರ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಭಾರತೀಯ ಕಿಸಾನ್ ಸಂಘದ ತಾಲೂಕು ಅಧ್ಯಕ್ಷ ಕೆ.ಎಲ್.ಮಹದೇವಸ್ವಾಮಿ ಹೇಳಿದರು.

ಈಗಾಗಲೇ ಮಿತಿ ಮೀರಿದ ರಾಸಾಯನಿಕ ಬಳಕೆಯಿಂದ ಮಣ್ಣಿನ ಆರೋಗ್ಯ ಹಾಳಾಗಿದ್ದು ಭೂ ಫಲವತ್ತತೆ ನಾಶವಾಗಿದೆ. ಆದ್ದರಿಂದ ರಾಸಾಯನಿಕ ಮುಕ್ತ ಬೆಳೆ ಬೆಳೆದು ಸಮಾಜದ ಉತ್ತಮ ಆರೋಗ್ಯ ಕಾಪಾಡುವ ಅಗತ್ಯ ಹೆಚ್ಚಾಗಿದೆ. ಆದ್ದರಿಂದ ಎಲ್ಲರೂ ಸಾವಯವ ಕೃಷಿಗೆ ಮರಳುವುದರಿಂದ ಭೂಮಿಯ ಫಲವತ್ತತೆ ನಾಶ ತಡೆಗಟ್ಟಲು ದೇಸಿ ಹಸುಗಳ ಸಾಕಾಣಿಕೆ ಮತ್ತು ನೈಸರ್ಗಿಕ ಕೃಷಿಗೆ ಒತ್ತುಕೊಟ್ಟು ಆರೋಗ್ಯವಂತ ಮತ್ತು ಸುಭಿಕ್ಷ ಸಮಾಜ ನಿರ್ಮಾಣಕ್ಕೆ ಆದ್ಯತೆ ನೀಡಬೇಕಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬೆಳಗ್ಗೆ 9ಕ್ಕೆ ಪಟ್ಟಣದ ಸಿಎಂಎಸ್ ಕಲಾಮಂದಿರದಲ್ಲಿ ಕನ್ನೇರಿ ಕಾಡ ಸಿದ್ದೇಶ್ವರ ಸ್ವಾಮೀಜಿವರಿಂದ ನೈಸರ್ಗಿಕ ಕೃಷಿ ಮತ್ತು ನಾಟಿಹಸುಗಳ ಸಾಕಾಣಿಕೆ ಮಹತ್ವದ ಬಗ್ಗೆ ಕಾರ್ಯಾಗಾರ ಆಯೋಜಿಸಿದೆ. ತಾಲೂಕಿನ ಪಡಗೂರು ಅಡವಿ ಮಠದ ಶಿವಲಿಂಗೇಂದ್ರ ಸ್ವಾಮೀಜಿ, ಮೂಡಗೂರು ಮಠದ ಇಮ್ಮಡಿ ಉದ್ದಾನ ಸ್ವಾಮೀಜಿ, ದೇಪಾಪುರ ಮಠದ ಬಸವಣ್ಣ ಸ್ವಾಮೀಜಿ ಹಾಗೂ ಕಬ್ಬಹಳ್ಳಿ ಮಠದ ಗುರುಸಿದ್ದ ಸ್ವಾಮೀಜಿ ಪಾಲ್ಗೊಳ್ಳುತ್ತಿದ್ದಾರೆ. ಸಾವಯವ ಮತ್ತು ರಾಸಾಯನಿಕ ಮುಕ್ತ ಕೃಷಿಗೆ ಪೂರಕ ಮಾಹಿತಿ ಅಗತ್ಯ ವಸ್ತು ದೊರಕಿಸಲು ಸಾವಯವ ವಸ್ತು ಪ್ರದರ್ಶನ ಮಳಿಗೆಗಳನ್ನು ತೆರೆಯಲಾಗುತ್ತಿದೆ ಎಂದರು.

ಸಂಘದ ಜಿಲ್ಲಾಧ್ಯಕ್ಷ ಸಿಎಸ್‌ಪಿ ಶಿವಪ್ರಕಾಶ್(ರವಿ), ಜಿಲ್ಲಾ ಉಪಾಧ್ಯಕ್ಷ ನಾಗೇಶ್, ತಾಲೂಕು ಪ್ರಧಾನ ಕಾರ್ಯದರ್ಶಿ ದೊಡ್ಡತುಪ್ಪೂರು ಶಶಿಕುಮಾರ್, ವೀರಭದ್ರಸ್ವಾಮಿ, ಪ್ರಕಾಶ್, ಸ್ವಾಮಿ, ಶಾಂತಪ್ಪ, ಬಸವಣ್ಣ ಇತರರು ಇದ್ದರು.



ಬೊಮ್ಮನಹಳ್ಳಿ ಸಮೀಪ ನಿರ್ಮಾಣವಾಗಿರುವ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯ ಕಾಮಗಾರಿ ಪ್ರಗತಿಯನ್ನು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ವೀಕ್ಷಿಸಿದರು. ಲೋಕೋಪಯೋಗಿ ಇಲಾಖೆಯ ಎಇಇ ರವಿಕುಮಾರ್, ಅಧಿಕಾರಿಗಳು ಇದ್ದರು.

ರಾಜಗೋಪುರ ನಿರ್ಮಾಣಕ್ಕೆ ಗುದ್ದಲಿಪೂಜೆ



ಹರದನಹಳ್ಳಿ ದಿವ್ಯಲಿಂಗೇಶ್ವರ ದೇವಾಲಯದ ರಾಜಗೋಪುರ ನಿರ್ಮಾಣ ಕಾಮಗಾರಿಗೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಚಾಮರಾಜನಗರ: ತಾಲೂಕಿನ ಹರದನಹಳ್ಳಿ ಗ್ರಾಮದ ದಿವ್ಯಲಿಂಗೇಶ್ವರ ದೇವಾಲಯದ ರಾಜಗೋಪುರ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಶುಕ್ರವಾರ ಗುದ್ದಲಿಪೂಜೆ ನೆರವೇರಿಸಿದರು.

15 ವರ್ಷಗಳ ಹಿಂದೆ ರಾಜಗೋಪುರ ಮಳೆಯ ಪರಿಣಾಮ ನೆಲಕ್ಕುರುಳಿದ್ದು, ಸಿದ್ದರಾಮಯ್ಯ ನಮ್ಮ ಮನವಿಗೆ ಸ್ಪಂದಿಸಿ, ವಿಶೇಷ ಅಭಿವೃದ್ಧಿ ಯೋಜನೆಯಡಿ ರಾಜಗೋಪುರ ನಿರ್ಮಾಣಕ್ಕೆ 3.62 ಕೋಟಿ ರೂ. ಅನುದಾನ ಮಂಜೂರು ಮಾಡಿದ್ದಾರೆ. ದೇವಾಲಯದ ಆವರಣವನ್ನು ದುರಸ್ತಿಪಡಿಸಲು ಭಕ್ತಾದಿಗಳು ತಮ್ಮ ಕೈಲಾದ ನೆರವು ನೀಡಬೇಕು, ಅಭಿವೃದ್ಧಿಗೆ ತಾವು ಕೂಡಾ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ದೊರಕಿಸಿಕೊಡುವುದಾಗಿ ಭರವಸೆ ನೀಡಿದರು.

ದಿವ್ಯಲಿಂಗೇಶ್ವರ ದೇವಾಲಯದ ಅಭಿವೃದ್ಧಿ ಸೇವಾ ಸಮಿತಿ ಅಧ್ಯಕ್ಷ ಶಿವರಾಂ, ಪ್ರಧಾನ ಕಾರ್ಯದರ್ಶಿ ಜಯಸ್ವಾಮಿ, ಉಪಾಧ್ಯಕ್ಷ ನಾಗೇಂದ್ರ ಸ್ವಾಮಿ, ಖಜಾಂಚಿ ರವಿಕುಮಾರ್, ವಾಸುದೇವ ಮೂರ್ತಿ, ಗ್ರಾಪಂ ಅಧ್ಯಕ್ಷ ಮಂಜು ನಾಥ್, ಜಿಪಂ ಮಾಜಿಸದಸ್ಯರಾದ ಕಾವೇರಿ ಶಿವಕುಮಾರ್, ರಮೇಶ್, ತಾಪಂ ಮಾಜಿ ಸದಸ್ಯ ಮಹದೇವಶೆಟ್ಟಿ, ಪಿ.ಕುಮಾರ್ ನಾಯಕ್, ಹರದನಹಳ್ಳಿಬಂಡಿಗೆರೆ ಗ್ರಾಮದ ರಂಗಸ್ವಾಮಿ ನಾಯಕ, ಬಂಗಾರಶೆಟ್ಟಿ, ಮಹದೇವಯ್ಯ, ವೆಂಕಟೇಶ್, ರಾಮಚಂದ್ರ, ಬಸವರಾಜು, ಚಾ.ನಗರದ ಲಕ್ಷ್ಮೀನರಸಿಂಹ, ತಮಿಳುನಾಡಿನ ಧರ್ಮಲಿಂಗಂ, ವೇಲುಸ್ವಾಮಿ, ಆರ್ಮುಗಂ. ಚೆಲುವರಾಜು, ಜಡೆಯಪ್ಪ, ಶಂಕರ್, ಗಣೇಶ್, ಚಿಕ್ಕರಾಜು, ನಟರಾಜು, ಪಿಡಿಓ ಮಹೇಶ್ವರಿ, ಹರದನಹಳ್ಳಿ ಬಂಡಿಗೆರೆ ಹಾಗೂ ಸುತ್ತಮುತ್ತಲ ಗ್ರಾಮಸ್ಥರು, ಪ್ರತಿನಿಧಿಗಳು ಸದಸ್ಯರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಹೋಟೆಲ್ ಕೆಲಸಕ್ಕೆ ಭಟ್ಟರು ಬೇಕಾಗಿದ್ದಾರೆ
ಸ್ಥಳ : ಮೈಸೂರು
Thandoor Master -1
All Rounder - 1
Indian Master -1
Ph : 7349020108

WANTED
J K Golden Embassy Hotel, Mysore
1) Accountant
(Local candidate Preferred)
Intrested Candidate Can Call or send me your resume to my watsup no
8867059358

ASHIRWADH GROCERY
Suppliers & Wholesale Dealers
WE'RE HIRING. JOB OPPORTUNITY
Position : 1) Marketing Executive ; 2) Loaders & Unloaders (Grocery Company). Experience : Freshers / Minimum 1 Year. Location : Mysore. Qualifications : PUC / Any Degree. Eligibility : Males. Benefits : Attractive Salary on experience & Traveling Allowance. Language : Kannada & English
Contact: S Rajeshwar Rao.
Mob: 9845700612

ನಿರ್ಮಲಧಾರ ಸಲ್ಯೂಷನ್ಸ್
ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
Mob: 9740893554

ನಿಮ್ಮ ವಯಸ್ಸಾದ ವೃದ್ಧರನ್ನು ಇರಿಸಲು ಸುಸಜ್ಜಿತವಾದ, ಮೆಡಿಕಲ್ ಸೌಲಭ್ಯವಿರುವ, ಶುದ್ಧ ಸಸ್ಯಾಹಾರಿ ಆಹಾರ, 24/7 ಬಿಸಿ ನೀರು, ಯೋಗ, ಮನರಂಜನೆ ಎಲ್ಲವೂ ಉಳ್ಳ ಒಂದು ಸುಂದರ ವೃದ್ಧಾಶ್ರಮಕ್ಕಾಗಿ ಇಂದೇ ಒಮ್ಮೆ ಭೇಟಿ ಕೊಡಿ. ಸ್ಥಳ: ನಾಯ್ಡು ನಗರ, ಮೈಸೂರು.
Mob: 9916905188

ಸೋಲಾರ್ ಸರ್ವೀಸ್
ಅನು. ಕಂಪನಿ ಕಡೆಯಿಂದ 700 ರೂ.ಗೆ 1-9-2025ರಿಂದ 15-09-2025 ರವರೆಗೆ ಮಾಡಿಕೊಡಲಾಗುತ್ತದೆ.
Mob : 9008711654

EAST FACE
MUDA APPROVED
40X60
SITE FOR SALE
NITYANANDASAGARA HUILALU MYSORE
8217851695

FLAT FOR RENT
Kuvempu Nagar M Block, Nrupathunga Road, Rent 20,000 Advance 2 Lakhs
9448324232
9480606154

MEGA OFFER UPS & BATTERRY
1) 150 A.H. Battery 1.K.V UPS SW : 16,500/-
2) 165 A.H. Battery 1.2 K.V.A UPS SW: 20500/-
S.R.Enterprises
Ramavilas Road, Mysuru-04
7676899663

ಮುಡಾ ಅಪ್ರೂವ್ಡ್ ಸೈಟ್ ತಕ್ಷಣ ಮನೆ ಕಟ್ಟಲು ನಮ್ಮ ಲೇಔಟ್‌ನಲ್ಲಿ ಲಭ್ಯ
ವಿಜಯನಗರ 4ನೇ ಸ್ಟೇಜ್ ಪಕ್ಕ & ಬೋಗಾದಿ ರಸ್ತೆ ಟ್ರೆಂಡ್ಸ್ ಸಮೀಪ 48.52 ಲಕ್ಷ
ಕೆಎಸ್‌ಆರ್‌ಟಿಸಿ ಲೇಔಟ್ ಆಲನಹಳ್ಳಿ 58 ಲಕ್ಷ
ಆರ್‌ಟಿ ನಗರ ರಿಂಗ್ ರಸ್ತೆ ಹತ್ತಿರ 55 ಲಕ್ಷ
ಲಲಿತಾದ್ರಿಪುರ ರಿಂಗ್ ರಸ್ತೆ ಹತ್ತಿರ 37.5 ಲಕ್ಷ
20x30 ಇಲವಾಲ ಬಸ್ ಸ್ಟ್ಯಾಂಡ್ ಹತ್ತಿರ 20 ಲಕ್ಷ
Broker Excuse
ಸಂಪರ್ಕಿಸಿ: 81230 75038

REQUIRED IMMEDIATELY
DRIVERS
(MYSORE TO BANGALORE)
9141835175
6366610175
careersmysuru@gmail.com
Ilwala, Near Belawadi Check Post, Mysore.

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654

Site For Sale
30x40 NORTH Site For Sale in SUNCITY HOME IN ELWALA, Mysore READY TO BUILT WITH BORE
8217851695

---

4 SITES FOR SALE
(30X50) "SURYA LAYOUT" (NEAR THALUR CIRCLE) KADAKOLA TVS FACTORY ROAD, READY TO BUILD DTCP APPROVED 19 LAKHS
9538839926

RENT & SALE
40X60 House for Rent in Saraswathipuram, Kuvempunagar, Ramakrishna Nagar, Dattagalli, 40x60 Site Sale in Saraswathipuram, Kuvepunagar, Dattagalli
7353430309

HOUSE FOR SALE
30×40 w/n door 2 BHK 8 years old single floor in Dattagalli, Mysore price 1.55cr final
Broker excuse
9663166809

ಜಮೀನು ಮಾರಾಟಕ್ಕೆ ಇದೆ
ಕುಶಾಲನಗರದ ಬಳಿ ಇರುವ ಬೈಲುಕೊಪ್ಪದಲ್ಲಿ 5 ಎಕರೆ 9 ಗುಂಟೆ ಜಮೀನು ಮಾರಾಟಕ್ಕೆ ಇದೆ ಸುತ್ತಲೂ ಫೆನ್ಸ್ ಹಾಕಲಾಗಿದೆ, ಒಳ್ಳೆ ನೀರಿನ ವ್ಯವಸ್ಥೆ ಇದೆ, ಲೇಔಟ್, ರೆಸಾರ್ಟ್, ಹೋಮ್ ಸ್ಟೇ, ಕಾಫಿ ಎಸ್ಟೇಟ್ ಮಾಡಲು ಒಳ್ಳೆ ಜಾಗ. ಆಸಕ್ತಿವುಳ್ಳವರು ಕರೆ ಮಾಡಿ. ಕಮಿಷನ್ ಅನ್ವಯವಾಗುತ್ತದೆ.
Mob: 9900846129

SITE FOR SALE
NORTH PHASE Vijayanagar 4th Stage, 2nd Phase 20x30.
9380338443
9611339705

SITE FOR SALE
1472 sq.ft.,
NORTH EAST CORNER
Gateway Mysore near Manipal Hospital, Mysore
Call : 80504 55505

ಬಸವ ಮಾರ್ಗ ವ್ಯಸನಮುಕ್ತ ಕೇಂದ್ರ (ರಿ)
54ನೇ ಉಚಿತ ಕುಡಿತ ಬಿಡಿಸುವ ಶಿಬಿರ.
ಸೆಪ್ಟೆಂಬರ್ 7 ರಿಂದ 16ರ ವರೆಗೆ.
8803344999
9742559999

ಶ್ರೀ ಸಂಜೀವಿನಿ ಗೋಲ್ಡ್
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ, ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ ಚಿನ್ನಕ್ಕೆ : 9400(24CT)
9108146123

ಸೈಟು ಮಾರಾಟಕ್ಕಿದೆ
30x40 E/F, 40x60 W/F ಗಾಯತ್ರಿ ಲೇಔಟ್ 30x40 S/F ಶ್ರೀನಗರ ಹತ್ತಿರ, 30x50 E/F ವರುಣ ಹತ್ತಿರ, 40x60 S/F MIT ಕಾಲೇಜು ಹತ್ತಿರ, 40x60 S/F ಪರಶುರಾಮ ಲೇಔಟ್, ಬನ್ನೂರು ರಸ್ತೆ
9900372792

SITE FOR SALE
40x60
North Site Sale Suvarna nagar Opp park
9880273834

REQUIRED
HOSTEL WARDENS
MALE
Graduate with relevant experience in a Residential PU College.
Remuneration as per industry norms. Accommodation with PF & ESI facilities.
Contact:
9108481695

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಮನೆ ಮಾರಾಟಕ್ಕಿದೆ
28x49, 3 BHK, corner house
ರೈಲ್ವೆ ಲೇಔಟ್, ಮೈಸೂರು.
Mob: 9591991143

DTCP & RERA APPROVED SITE
30x40 WEST FACING @ JUST RS. 20 LAKHS.
BANK LOAN AVAILABLE.
Near JSS International University & adjacent to pheriperal ring road.
Mob: 7795609173

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8660486818

SITES FOR SALE
50x80 MUDA approved Prakruthi layout, Mysore airport back side. 30x40 / 40x60 Citi homes, Nagawala Hunsur road.
9632030718

ಸೈಟು ಮಾರಾಟಕ್ಕಿದೆ
ನಿವೇಶನ ಸಂಖ್ಯೆ 04
30X40
ಪೂರ್ವ ದಿಕ್ಕಿನ ಸೈಟ್ ಮಾರಾಟಕ್ಕಿದೆ ಮಾನಸಿ ನಗರ 2ನೇ ಬ್ಲಾಕ್ ಲೇಔಟ್
9663661460, 7411621727

ನಿವೃತ್ತ ನೌಕರರಿಗೆ ಉದ್ಯೋಗ
ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ರಾಜ್ಯ / ಕೇಂದ್ರ ಸರ್ಕಾರಿ ನಿವೃತ್ತ ನೌಕರರಿಗೆ ಉದ್ಯೋಗ ವೇತನ ರೂ. 10 ರಿಂದ 30 ಸಾವಿರ. ಸಂಪರ್ಕಿಸಿ:
Mob: 8660764095

WANTED
SURVEY EXECUTIVE (Male)
Collecting quality leads with activities (field work)
Fix salary + incentive 12k up to 20k. 12th and above
Birla Sunlife (Sr. Agency, Partner Office)
Saraswathipuram Mysore
Mob: 9900844455

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

URGENT REQUIREMENT
1) Nurses -male / female -1000 Nos.
2) Nutritionist- 500 Nos
3) Doctors MBBS/ BAMS/ BYNS - 200 Nos
Unlimited salary for right candidate
9632082448 9036961447

REQUIRE
Built house in 40x60 site Saraswathipuram surrounding areas.
Mob: 9342104452

SITE FOR SALE
40x60
South face Roopa nagar
9880273834

SITES FOR SALE
IN Srinagara, JP Nagara. Dimention : 10890 Facing : North 40 feet Road, Opp. to MMG Ambari Layout Close to Airport Conversion Land
9342114717

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಉತ್ತಮ ವೇತನ, ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ.
ಸ್ಥಳ: ನಂಜನಗೂಡು ಮತ್ತು ಮೈಸೂರು ಸಿಟಿ.
7829393555 / 9886200104

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು. ವಯೋಮಿತಿ: 50 ವರ್ಷದೊಳಗೆ. ಸಂಬಳ: 18,000/- (8 hours, 26 days). ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819, 9620667819

ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7483296927

Sites For Sale
30x40 S/F Behind Empro Hotel, Sathagalli. 20x30 S/F Opp Park, BSNL Layout, Sathagalli.
6361194562
9481878254

WANTED
Computer Document Typist, Kannada & English Near Sub Register Office, Andolana Circle, Mysore
9448246291, 9483760666

ಬೇಕರಿ ಮತ್ತು juice ಅಂಗಡಿಗೆ ಬೇಕಾಗಿದ್ದಾರೆ
Part Time Full Time
ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ
ಸಂಬಳ : 12000 ರಿಂದ 14000
7022282392
9886574589

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

DTCP SITES FOR SALE
THALUR CIRCLE,
OFF SRIRAMPURA RING ROAD, HD KOTE RDAD, MYSURU.
₹1800/- per Sft.
9611110601

PRAKRUTHI PROPERTIES
FOR SALE
30x40@ 22 lakhs Near RT Nagar
BSNL Lyt Sites Also Avl.
Apartments @ Ramakrishna Nagar
Residential & Commercial Plots in & around Mysore
20x30 New 2BHK House, As Per your Plan With Interiors @ Just 42 Lakh in Bogadi
95386 90359, 90359 90359

ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು ಜಯಪುರ ಹೋಬಳಿ 10 ಗುಂಟೆ, 20 ಗುಂಟೆ, 30.35 ಗುಂಟೆ ಜಮೀನುಗಳು ಮಾರಾಟಕ್ಕಿವೆ ಹಾಗೂ ಕೋಟೆ ತಾಲ್ಲೂಕು ಹಂಪಾಪುರ ಹೋಬಳಿಯಲ್ಲಿ 25 ಗುಂಟೆ, 11 ಗುಂಟೆ, 34 ಮತ್ತು 1 ಎಕರೆ 30 ಗುಂಟೆ ಜಮೀನುಗಳು ಕಬಿನಿ ನದಿ ಪಾತ್ರದಲ್ಲಿ 3 ಎಕರೆ ಜಮೀನು ಮಾರಾಟಕ್ಕಿದೆ.
Mob: 9945661696

ಕಾವೇರಿ ಟೀ ಕಂಪನಿಗೆ ವಿತರಕರು ಬೇಕಾಗಿದ್ದಾರೆ
ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಜಿಲ್ಲೆಗಳಿಗೆ.
ಉತ್ತಮ ಲಾಭ ನೀಡಲಾಗುವುದು.
9164759564

ಸೈಟ್ ಬೇಕಾಗಿದೆ
ಲಾಲ್ ಬಹದ್ದೂರ್ ಶಾಸ್ತ್ರಿ ನಗರ ಶಾಂತವೇರಿ ಗೋಪಾಲಗೌಡ ಮತ್ತು ಪೊಲೀಸ್ ಲೇಔಟ್
9901772178

ಮಾತೃ ವೃದ್ಧಾಶ್ರಮ ಮತ್ತು ಆರೈಕೆ ಕೇಂದ್ರ
ನಮ್ಮ ಸಂಸ್ಥೆಯಲ್ಲಿ ವಯಸ್ಸಾದ ಪುರುಷ ಮತ್ತು ಮಹಿಳೆಯರಿಗೆ ಹಾಸಿಗೆ ಹಿಡಿದ ವೃದ್ಧರು, ಪಾರ್ಶ್ವವಾಯು ಪೀಡಿತರು ಮತ್ತು ಮರೆವು ಖಾಯಿಲೆಯುಳ್ಳವರು, ನಡೆಯಲು ಆಗದಿದ್ದವರನ್ನು ನಮ್ಮ ಆಶ್ರಮದಲ್ಲಿ ಆರೈಕೆ ಮಾಡಿ ನೋಡಿಕೊಳ್ಳಲಾಗುವುದು. ನಮ್ಮಲ್ಲಿ ಸಸ್ಯಹಾರಿ ತಿಂಡಿ ಊಟ ಬಿಸಿ ನೀರಿನ ಸೌಲಭ್ಯ ನಿಯಮಿತ ವೈದ್ಯಕೀಯ ಸೌಲಭ್ಯವಿರುತ್ತದೆ ಇಚ್ಛೆವುಳ್ಳವರು ಸಂಪರ್ಕಿಸಿ
8861637804, 9380419534

Sites For Sale
30x50 E/F bhoomika PR Valley, Hunsur Road. 40x43 SW/ Corner Opp. Park. KHB Kenchalagudu.
6361194562
9481878254

R S CONSTRUCTION
ENGINEERS & CONTRACTORS
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವಿ ನಿರ್ಮಿಸಿ ಕೊಡುತ್ತೇವೆ.
ದರ 1.85.000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ
9538575009, 7019151884

ಮಾರಾಟಕ್ಕಿದೆ
30X40 ಸೈಟ್ ದಟ್ಟಗಳ್ಳಿ, 20X30 ಮನೆ ದಟ್ಟಗಳ್ಳಿ, 30X50 ಮನೆ ದಟ್ಟಗಳ್ಳಿ, 30X40 ಡ್ಯುಪ್ಲೆಕ್ಸ್ ದಟ್ಟಗಳ್ಳಿ, 20X30 ಡ್ಯುಪ್ಲೆಕ್ಸ್ ದಟ್ಟಗಳ್ಳಿ
9945042875

ಬೇಕಾಗಿದ್ದಾರೆ
ಪ್ರತಿಷ್ಠಿತ ಕಂಪನಿಯಲ್ಲಿ 8 ಗಂಟೆಗಳ ಕಾಲ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ
ಸ್ಥಳ : ನಂಜನಗೂಡು
8088716663, 9353046663

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ ಮತ್ತು ಸೂಪರ್‌ವೈಸರ್, 8 ಘಂಟೆ ಪಾಳಿಗೆ, ಕೂರ್ಗಳ್ಳಿ, ಹೆಬ್ಬಾಳ್, ಬನ್ನಿಮಂಟಪ ಇಂಡಸ್ಟ್ರಿಯಲ್ ಏರಿಯಾದಲ್ಲಿ ಸಂಪರ್ಕಿಸಿ
9035367083
6361548626

ಬನ್ನೂರು ರಸ್ತೆಯ ವಾಜಮಂಗಲ ಗ್ರಾಮಕ್ಕೆ ಹೊಂದಿಕೊಂಡಂತೆ ಮುಡಾದಿಂದ ಅನುಮೋದನೆಗೊಂಡ ಪೂರ್ವ ಮತ್ತು ಉತ್ತರ ದಿಕ್ಕಿನಲ್ಲಿರುವ 1850 sq.ft. ಇರುವ ಖಾಲಿ ನಿವೇಶನಗಳು ಮಾರಾಟಕ್ಕಿವೆ.
Mob: 6360633036

Solar Water Heaters
Built for Modern Living
JUPITER SOLAR
Solar Water Heater SALES & SERVICE
20 ವರ್ಷಗಳ ವ್ಯಾರಂಟಿ



SUNZONE SOLAR SYSTEM
VM Double Road, Kuvempunagar, Mysuru
9845175443

HP ಪ್ರಾಪರ್ಟೀಸ್ ಮೈಸೂರು
1) ಸನ್ ಸಿಟಿ ಹೋಮ್ಸ್ 30x40 S/E ಕಾರ್ನರ್ ಸೈಟ್ 40x60 E/F, 26 ಲಕ್ಷ.
2) ಭೂಮಿಕ ಕೃಷ್ಣ ಮೇಗಳಪುರ 30x40 E/F, 29 ಲಕ್ಷ. 20x30 W/F, 17 ಲಕ್ಷ
ನಮ್ಮಲ್ಲಿ ಇಲವಾಲ ಸುತ್ತ ಮುತ್ತ ನಿವೇಶನಗಳು ದೊರೆಯುತ್ತದೆ
8553540950

HOUSE FOR RENT / LEASE
@ RAMAKRISHNA NAGAR 6th CROSS, MYSORE
FIRST FLOOR - 2 BHK
SECOND FLOOR - 1 BHK
Call
9972021708
9740881961

SITE WANTED
Sardar Vallabhai Patel Nagar, J.S.S Layout, K.S.R.T.C. Layout.
MEASUREMENT:
30x40, 30x50, 40x60
Mob: 9663906675

HOUSE FOR SALE
3 BHK(E) Area 1500 Sq ft Well Built & Vasthu in Vijayanagar 4th Stage, Near KBL, Gardenia
9986014168
(Broker's Excuse)

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಮತ್ತು ಬೋಗಾದಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು ಸಂಬಳ : 20000 + W/o (8hrs) ಸಂಪರ್ಕಿಸಬೇಕಾದ ಸಂಖ್ಯೆಗಳು:
9880727819, 9620667819

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

1399 per sq.ft.
"ಕೇವಲ ಮೂರು ದಿನಗಳು ಮಾತ್ರ"
ರಿಯಾಯಿತಿ ದರದಲ್ಲಿ ಸೈಟುಗಳು ಲಭ್ಯ. ಹೆಚ್.ಡಿ. ಕೋಟೆ ರಸ್ತೆಗೆ ಹೊಂದಿಕೊಂಡಂತೆ ಮುಳ್ಳೂರು ಗ್ರಾಮದ ಸರ್ವೆ ನಂಬರಿನಲ್ಲಿ ಬರುವ DTCP ಯಿಂದ ಅನುಮೋದನೆಗೊಂಡ ಸೈಟುಗಳು ಮಾರಾಟಕ್ಕಿದೆ.
Mob: 9148436347

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಕಂಪನಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
Security Guard : 13000/- ರಿಂದ 19000/-
Gun Man : 18000/- ರಿಂದ 20000/-
Door Man : 15000/- ರಿಂದ 16000/-
Security (Supervisor) : 17000/- ರಿಂದ 21000/-
ESI, PF ಊಟ ವಸತಿ ಇರುತ್ತದೆ.
Contact No : 9060106667, 9880116412, 9620613034

ಮಳಿಗೆ ಬಾಡಿಗೆಗೆ ಇದೆ
10x10 ಭ್ರಮಾರಂಬ ಥಿಯೇಟರ್ ಎದುರು ಗೋಪಿ ಕ್ಯಾಂಟಿನ್ ಪಕ್ಕ ಚಾಮರಾಜನಗರ
Mobile
9901655556, 9741634366

ಮೈಸೂರು–ಇಲವಾಲ ಬೈಪಾಸ್ ರಸ್ತೆಯ ಸೈಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ಎದುರು ಭಾಗ ಅಲೋಕ ರಸ್ತೆಯ ಬಳಿ ಡಿಸಿ ಕನ್ವರ್ಷನ್ ಆದ 40x60 ಅಳತೆಯ ನಿವೇಶನ ಮಾರಾಟಕ್ಕಿದೆ. ಇಲ್ಲಿ 2 ಅಂಗಡಿ ಮಳಿಗೆ ಬಾಡಿಗೆಗೆ ಲಭ್ಯವಿದೆ. ಸಂಪರ್ಕಿಸಿ
9449992940

REQUIRED IMMEDIATELY
Receptionists Male and Female Candidates, Eagle Fantacy Lodge, Near Bogadi Signal, Mysore
Contact:
8884133411

ಕಳೆದಿದೆ
ಶ್ರೀಮತಿ ಜಯಮ್ಮ W/o ಲೇಟ್ ಚಿಕ್ಕಮಾದು # 5939, 2ನೇ ಕ್ರಾಸ್, 2ನೇ ಮೇನ್, ವಿಜಯನಗರ, ಮೈಸೂರು, ಇಲ್ಲಿ ವಾಸವಿದ್ದು ಹುಣಸೂರು ತಾಲೂಕು, ಸಿಂಗರಮಾರನಹಳ್ಳಿ, ಸರ್ವೆ ನಂ 100ರ ಜಮೀನಿನ ಮೂಲ ದಾಖಲಾತಿಗಳು ಕಳೆದು ಹೋಗಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ
9902241098

ಶ್ರೀ ಚಾಮುಂಡೇಶ್ವರಿ ಮಹಿಳಾ ಕೆಲಸಗಾರರ ಬಳಕೆದಾರರ ಸಹಕಾರ ಸಂಘ ನಿ, ವಿದ್ಯಾರಣ್ಯಪುರಂ
ಮೇಲ್ಕಂಡ ಸಂಘದ, 2024–2025ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ : 07–09–2025ರ ಭಾನುವಾರ ಬೆಳಗ್ಗೆ 09:00 ಗಂಟೆಗೆ ಸಂಘದ ಆವರಣ ವಿದ್ಯಾರಣ್ಯಪುರಂ, ಮೈಸೂರು ಇಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರುಗಳು ಸಕಾಲದಲ್ಲಿ ಆಗಮಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ.
ಸಹಿ/– ಕಾರ್ಯದರ್ಶಿ – ಜಿ.ಕುಮಾರ್

HOUSE FOR SALE
New 3 BHK Independent House, East Face @ Lalithadri Nagar(South) Near Ring Road Behind Indian Oil Petrol Bunk
9110696752 / 9663452259

ಬೇಕಾಗಿದ್ದಾರೆ
ಸೋನಾಲಿಕಾ ಟ್ರ್ಯಾಕ್ಟರ್ ಷೋರೂಂ ಶ್ರೀ ಮಂಜುನಾಥ ಟ್ರ್ಯಾಕ್ಟರ್ಸ್, ಮೈಸೂರು, ಬೋಗಾದಿ ರಿಂಗ್ ರೋಡ್ ಜಂಕ್ಷನ್ ಮೈಸೂರು, ನಂಜನಗೂಡು, ಟಿ.ನರಸೀಪುರ ಶಾಖೆಗಳಿಗೆ. ಸೇಲ್ಸ್ ಮ್ಯಾನೇಜರ್, ಸೇಲ್ಸ್ ಎಕ್ಸಿಕ್ಯೂಟಿವ್, ಮೆಕ್ಯಾನಿಕ್ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
9880111533, 9880999411

ಮನೆ ಕೆಲಸಕ್ಕೆ ಹಾಗೂ ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ.
ಕುವೆಂಪುನಗರ, ಮೈಸೂರು
9972805819
ಮಹಿಳೆ ಮಾತ್ರ

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ
ಗುರುವಾರ
ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಕೆ.ಆರ್.ನಗರದಲ್ಲಿ ಶ್ರದ್ಧಾಭಕ್ತಿಯ ಈದ್ ಮಿಲಾದ್ ಆಚರಣೆ

ಮುಸ್ಲಿಂ ಬಾಂಧವರಿಂದ ಸಾಮೂಹಿಕ ಪ್ರಾರ್ಥನೆ, ಪರಸ್ಪರ ಶುಭಾಶಯ ವಿನಿಮಯ

ಕೆ.ಆರ್.ನಗರ, ಸೆ.5– ಪಟ್ಟಣದಲ್ಲಿ ಮುಸ್ಲಿಂ ಬಾಂಧವರು ಶುಕ್ರವಾರ ಶ್ರದ್ಧಾಭಕ್ತಿಯಿಂದ ಈದ್ ಮಿಲಾದ್ ಆಚರಿಸಿದರು.

ಪಟ್ಟಣದ ಜಾಮೀಯ ಮಸೀದಿಯಲ್ಲಿ ಶುಕ್ರವಾರ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದ ಮುಸ್ಲಿಂ ಬಾಂಧವರು ಬಳಿಕ ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ಈ ವೇಳೆ ಮಸೀದಿ ಮುಂಭಾಗದಿಂದ ಹೊರಟ ಮೆರವಣಿಗೆಗೆ ಖ್ಯಾತ ಮೂಳೆ ತಜ್ಞ ಹಾಗೂ ಸಮುದಾಯದ ಮುಖಂಡ ಡಾ.ಮೆಹಬೂಬ್ ಖಾನ್ ಚಾಲನೆ ನೀಡಿದರು. ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಂ ಬಾಂಧವರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.



ಕೆ.ಆರ್.ನಗರದಲ್ಲಿ ಈದ್ ಮಿಲಾದ್ ಅಂಗವಾಗಿ ಮುಸ್ಲಿಂ ಬಾಂಧವರು ಮೆರವಣಿಗೆ ನಡೆಸಿದರು.

ಖ್ಯಾತ ಮೂಳೆ ತಜ್ಞ ಹಾಗೂ ಸಮುದಾಯದ ಮುಖಂಡ ಡಾ.ಮೆಹಬೂಬ್ ಖಾನ್ ಮಾತನಾಡಿ, ಪ್ರವಾದಿ ಮಹಮ್ಮದ್ ಪೈಗಂಬರ್ ಅವರ 1500ನೇ ಜನ್ಮದಿನವನ್ನು ಸಾವಿರಾರು ಸಂಖ್ಯೆಯಲ್ಲಿದ್ದ ಮುಸ್ಲಿಂ ಬಾಂಧವರು ಪವಿತ್ರ ಕುರಾನ್ ಶ್ಲೋಕಗಳನ್ನು ಪಠಿಸುವ ಮೂಲಕ ಇಂದು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಎಂದರು. ಈದ್ ಮಿಲಾದ್–ಉನ್–ನಬಿ ಹಬ್ಬವನ್ನು ಇಸ್ಲಾಮಿಕ್ ಕ್ಯಾಲೆಂಡರ್‌ನ 3ನೇ ತಿಂಗಳಾದ ರಬಿ ಉಲ್ ಅವ್ವಾಲ್‌ನ 12ನೇ ದಿನದಂದು ಆಚರಿಸಲಾಗುತ್ತದೆ. ಈ ದಿನ ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಜನ್ಮದಿನವನ್ನು ಸೂಚಿಸುತ್ತದೆ. ಈ ದಿನವು ಪವಿತ್ರ ಪ್ರವಾದಿಯ ದಯೆ, ಸಹಾನುಭೂತಿ ಮತ್ತು ಬೋಧನೆಗಳನ್ನು ನೆನಪಿಸುವುದರಿಂದ ಈ ದಿನವನ್ನು ಅತ್ಯಂತ ಶುಭ ದಿನವೆಂದು ಪರಿಗಣಿಸಲಾಗಿದೆ. ಇಂದು ಈದ್ ಮಿಲಾದ್ ಹಬ್ಬವನ್ನು ಪ್ರಪಂಚದಾದ್ಯಂತ ಆಚರಿಸಲಾಗುತ್ತಿದೆ ಎಂದರು.

ಮೆರವಣಿಗೆ ಉದ್ದಕ್ಕೂ ರಾಷ್ಟ್ರಧ್ವಜದ ಜೊತೆಗೆ ಇಸ್ಲಾಮಿಕ್ ಬಾವುಟಗಳು ರಾರಾಜಿಸಿದವು. ಜೊತೆಗೆ ಮದ್ರಾಸಾದ ವಿದ್ಯಾರ್ಥಿಗಳು, ಪುಟಾಣಿ ಮಕ್ಕಳು ಧಾರ್ಮಿಕ ಪ್ರವಚನ ಹಾಗೂ ದಫ್ ಪ್ರದರ್ಶನ ಮಾಡಿದರು. ಮೆರವಣಿಗೆಯುದ್ದಕ್ಕೂ ತಂಪು ಪಾನೀಯ, ಶುದ್ಧ ಕುಡಿಯುವ ನೀರು ಮತ್ತು ಸಿಹಿ ವಿತರಣೆಗೆ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಮೆರವಣಿಗೆಗೆ ಭದ್ರತೆ ನೀಡಿದ ಪೊಲೀಸ್ ಇಲಾಖೆ ಅಧಿಕಾರಿಗಳಿಗೆ ಮುಸ್ಲಿಂ ಬಾಂಧವರು ಅಭಿನಂದನೆ ಸಲ್ಲಿಸಿದರು.

ಈ ವೇಳೆ ಜಾಮೀಯ ಮಸೀದಿ ಧರ್ಮ ಗುರುಗಳಾದ ಮುಫ್ತಿ ಜೈನೂಲ್ ಅಬಿದೀನ್, ಮೌಲನ ಆಲಿ ಹುಸೇನ್, ಮೌಲನ ಅರ್ಷದುಲ್ ಖಾದ್ರಿ, ಮೌಲನ ತಬ್ರೇಜ್, ಎಕ್ಬಲ್ ಸಾಬ್, ಪುರಸಭಾ ಸದಸ್ಯ ಜಾವೀದ್ ಪಾಷ, ಮಾಜಿ ಸದಸ್ಯ ಸೈಯದ್ ಅಸ್ಲಂ, ಜಾಮಿಯಾ ಮಸೀದಿ ಕಮಿಟಿ ಅಧ್ಯಕ್ಷ ಅಫ್ಸರ್ ಬಾಬು, ಕಾರ್ಯದರ್ಶಿ ತಸವ್ವರ್ ಪಾಷ, ಇರ್ಫಾದ್, ನಸೀರ್, ಮುಜಾಹಿದ್, ಅತ್ತಾವುಲ್ಲ, ನಜೀಬ್, ವಸೀಂ, ಇಮ್ರಾನ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಈದ್ ಮಿಲಾದ್ ಹಿನ್ನೆಲೆ: ಸಿಹಿ ವಿತರಣೆ



ಈದ್ ಮಿಲಾದ್ ಹಬ್ಬದ ಅಂಗವಾಗಿ ಬೆಟ್ಟದಪುರದಲ್ಲಿ ಶುಕ್ರವಾರ ಸಂಜೆ ಮುಸ್ಲಿಂ ಬಾಂಧವರು ಇಲ್ಲಿನ ಮಾರುಕಟ್ಟೆಯ ಪ್ರತಿ ಅಂಗಡಿಗೂ ಸಿಹಿ ಹಂಚಿದರು.

ಇಂದು ಕಾಕವಾಹನೋತ್ಸವ, ಹೂವಿನ ಪಲ್ಲಕ್ಕಿ ಉತ್ಸವ

ಮೂಗೂರು, ಸೆ.5– ಮೂಗೂರಲ್ಲಿ ಶ್ರೀಶನೇಶ್ವರಸ್ವಾಮಿ ಅವರ ಕಾಕವಾಹನೋತ್ಸವ ಹಾಗೂ ಹೂವಿನ ಪಲ್ಲಕ್ಕಿ ಉತ್ಸವ ಸೆ.6 ರಂದು ನಡೆಯಲಿದೆ.

ಬೆಳಗ್ಗೆ 8.30ಕ್ಕೆ ಗ್ರಾಮದ ಶ್ರೀಶನೇಶ್ವರಸ್ವಾಮಿ ದೇವಾಲಯದಿಂದ ಮಧ್ಯದ ಬೀದಿವರೆಗೆ ಕಾಕವಾಹನೋತ್ಸವ ನಡೆಯಲಿದ್ದು, ಸಂಜೆವರೆಗೆ ಗ್ರಾಮಸ್ಥರು ಪೂಜೆ ಸಲ್ಲಿಸುವರು. ಸಂಜೆ 6.30ಕ್ಕೆ ಅಲಂಕೃತ ಹೂವಿನ ಪಲ್ಲಕ್ಕಿಯಲ್ಲಿ ಶ್ರೀಶನೇಶ್ವರಸ್ವಾಮಿ ಅವರ ಉತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಾದ್ಯ ಗೋಷ್ಠಿ, ನಂದಿ ಕಂಬ ಕುಣಿತದೊಂದಿಗೆ ನಡೆಯಲಿದೆ. ರಾತ್ರಿ 11.30ಕ್ಕೆ ಮಧ್ಯದ ಬೀದಿಯ ಚಪ್ಪರದ ಬಳಿ ಬದನವಾಳು ಶಿವಕುಮಾರ ಶಾಸ್ತ್ರೀಯವರಿಂದ ರಾಜ ವಿಕ್ರಮ ಅಥವಾ ಶನಿ ಪ್ರಭಾವ ಎಂಬ ಹರಿಕಥೆ ಏರ್ಪಡಿಸಲಾಗಿದೆ ಎಂದು ವ್ಯವಸ್ಥಾಪಕ ಸಮಿತಿ ತಿಳಿಸಿದೆ.

ನಾಳೆ 3ನೇ ವರ್ಷದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

ಸುದ್ದಿಗೋಷ್ಠಿಯಲ್ಲಿ ವಿಶ್ವಕರ್ಮ ಯುವ ಬ್ರಿಗೇಡ್ ಅಧ್ಯಕ್ಷ ದಾಸಾಚಾರ್

ಹೆಚ್.ಡಿ.ಕೋಟೆ, ಸೆ.5– ತಾಲೂಕು ವಿಶ್ವಕರ್ಮ ಯುವ ಬ್ರಿಗೇಡ್ ವತಿಯಿಂದ ಸೆ.7ರಂದು 3ನೇ ವರ್ಷದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ದಾಸಾಚಾರ್ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ತಾಲೂಕು ವಿಶ್ವಕರ್ಮ ಯುವ ಬ್ರಿಗೇಡ್ ಅಧ್ಯಕ್ಷ ದಾಸಾಚಾರ್ ಮಾತನಾಡಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಗೆ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಆರಂಭವಾಗುವ ಕಾರ್ಯಕ್ರಮವನ್ನು ಶಾಸಕ ಅನಿಲ್ ಉದ್ಘಾಟಿಸಲಿದ್ದಾರೆ. ಧಾರ್ಮಿಕ ದತ್ತಿ ಇಲಾಖೆ ನಿವೃತ್ತ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಪ್ರಭಾಕರ್ ವಿಶ್ವಕರ್ಮ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ಹೈಕೋರ್ಟ್ ಹಿರಿಯ ವಕೀಲ ಎ.ರಾಜೇಶ್ ಅವರು 100ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೆರವೇರಿಸಲಿದ್ದಾರೆ. ವಿಶ್ವಕರ್ಮ ಸೇವಾ ಸಮಾಜದ ತಾಲೂಕು ಅಧ್ಯಕ್ಷ ರಾಜು ಮತ್ತು ವಿಶ್ವಕರ್ಮ ಸಮಾಜದ ತಾಲೂಕು ಅಧ್ಯಕ್ಷ ವೆಂಕಟೇಶ್ ಸಾಧಕರನ್ನು ಅಭಿನಂದಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಶಾಲಾ ಶಿಕ್ಷಣ ಇಲಾಖೆ ನಿರ್ದೇಶಕಿ ವಿಜತ ಈ.ರವಿಕುಮಾರ್, ಮಹದೇಶ್ವರಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರಘು, ಹೃದ್ರೋಗ ತಜ್ಞ ಕೇಶವಮೂರ್ತಿ, ಕೊಡಗು ಜಿಲ್ಲೆ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಶೇಖರ್, ಬಂಡೀಪುರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎಂ.ಎನ್.ಮಧುರಾ ಮೂರ್ತಿ, ಮೈಸೂರು ಕೌಶಲ್ಯಾಭಿವೃದ್ಧಿ ಇಲಾಖೆ ಜಂಟಿ ನಿರ್ದೇಶಕ ಕೆ.ನಾರಾಯಣಮೂರ್ತಿ, ಭಾಮೀಸ್ ಗ್ರೂಪ್‌ನ ಅಧ್ಯಕ್ಷ ಡಾ.ರಾಘವೇಂದ್ರ ಪ್ರಸಾದ್, ಕಬಿನಿ ಜಲಾಶಯದ ಸಹಾಯಕ ಕಾರ್ಯಪಾಲಕ ಅಭಿಯಂತರ ಗಣೇಶ್, ನಿವೃತ್ತ ಉಪನ್ಯಾಸಕ ಬೆಳಗನಹಳ್ಳಿ ವಿ.ತಿರುಮಲಾಚಾರ್, ವಿಶ್ವಕರ್ಮ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್, ಖಾಸಗಿ ವಾಹಿನಿಯ ಮುಖ್ಯಸ್ಥ ರಾಜು ಕಾರ್ಯ ಭಾಗವಹಿಸಲಿದ್ದಾರೆ. ಇದೇ ವೇಳೆ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ. ಇದೇ ವೇಳೆ ಸಂಘದ ಕಾರ್ಯದರ್ಶಿ ನಿಂಗರಾಜು, ಖಜಾಂಚಿ ವಸಂತ ಕುಮಾರ್, ನಿರ್ದೇಶಕ ರವಿಕುಮಾರ್, ರಾಜಾಚಾರಿ, ಶೇಖರ್, ಪ್ರದೀಪ್ ಕುಮಾರ್ ಗೋಷ್ಠಿಯಲ್ಲಿ ಇದ್ದರು.

ದೈಹಿಕ, ಮಾನಸಿಕ ಬೆಳವಣಿಗೆಗೆ ಕ್ರೀಡೆ ಸಹಕಾರಿ

ತಾಲೂಕು ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಪಪಂ ಅಧ್ಯಕ್ಷೆ ರಾಧಿಕಾ

ಸರಗೂರು, ಸೆ.5– ವ್ಯಕ್ತಿಯ ದೈಹಿಕ, ಮಾನಸಿಕ ಬೆಳವಣಿಗೆಗೆ ಕ್ರೀಡೆ ಸಹಕಾರಿಯಾಗಿದ್ದು, ಪ್ರತಿಯೊಬ್ಬರೂ ಕ್ರೀಡಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ತಿಳಿಸಿದರು.

ಪಟ್ಟಣದ ಪ್ರಥಮ ದರ್ಜೆ ಕಾಲೇಜು, ಲಯನ್ಸ್ ಸ್ಕೂಲ್ ಆವರಣದಲ್ಲಿ ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ನಡೆದ ತಾಲೂಕು ಮಟ್ಟದ ದಸರಾ ಕ್ರೀಡಾಕೂಟಕ್ಕೆ ಗುಂಡು ಎಸೆಯುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.



ಗ್ರಾಮೀಣ ದಸರಾ ಕ್ರೀಡಾಕೂಟಕ್ಕೆ ಪಪಂ ಅಧ್ಯಕ್ಷೆ ರಾಧಿಕಾ ಚಾಲನೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ರೋಗದಿಂದ ಮುಕ್ತರಾಗಲು ಕ್ರೀಡೆ ಸಹಕಾರಿಯಾಗಿದೆ. ಮಕ್ಕಳಲ್ಲಿ ಓದುವ ಆಸಕ್ತಿ ಕಡಿಮೆಯಾಗುತ್ತಿದೆ. ಇದನ್ನು ವೃದ್ಧಿಸಲು ಕ್ರೀಡೆ ತುಂಬಾ ಪ್ರಯೋಜನಕಾರಿಯಾಗಿದೆ. ಈ ನಿಟ್ಟಿನಲ್ಲಿ ಎಲ್ಲರೂ ಕ್ರೀಡೆಯನ್ನು ಮೈಗೂಡಿಸಿಕೊಳ್ಳಬೇಕು. ಇದರಿಂದ ಮನುಷ್ಯ ದೈಹಿಕ, ಮಾನಸಿಕವಾಗಿ ಸದೃಢನಾಗಲು ಸಾಧ್ಯ ಎಂದರು. ತಾಲೂಕು ಮಟ್ಟದ ದಸರಾ ಕ್ರೀಡಾಕೂಟದ ಸಂಚಾಲಕ ಎಂ.ವಿಶ್ವ ಮಾತನಾಡಿ, ನಾಡಹಬ್ಬ ದಸರಾ ವೇಳೆ ಗ್ರಾಮೀಣ ಭಾಗದಲ್ಲಿ ಕ್ರೀಡಾಕೂಟ ಆಯೋಜನೆ ಮಾಡುತ್ತಿರುವುದರಿಂದ ಗ್ರಾಮೀಣ ಕ್ರೀಡಾ ಪ್ರತಿಭೆಗಳನ್ನು ಗುರುತಿಸಲು ಸಹಕಾರಿಯಾಗಿದೆ. ಅಲ್ಲದೆ ಅವರನ್ನು ಜಿಲ್ಲಾ ಮಟ್ಟದಲ್ಲಿಯೂ ಗುರುತಿಸಬಹುದು. ಹೀಗಾಗಿ ಎಲ್ಲರೂ ಕ್ರೀಡಾಕೂಟದಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಪ್ರತಿಭೆ ಪ್ರದರ್ಶಿಸಬೇಕು ಎಂದು ಸಲಹೆ ನೀಡಿದರು.

ಸರಗೂರು ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಕ್ರೀಡಾಪಟುಗಳು ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದರು. ವಾಲಿಬಾಲ್, ಥ್ರೋಬಾಲ್, ಖೋ ಖೋ, ಕಬ್ಬಡಿ, ಅಥ್ಲೆಟಿಕ್ಸ್, ಯೋಗದಲ್ಲಿ ವಿಜೇತರಾದವರಿಗೆ ಪ್ರಶಸ್ತಿ ಪತ್ರ ವಿತರಿಸಲಾಯಿತು. ಈ ವೇಳೆ ಪಪಂ ಸದಸ್ಯರಾದ ನೂರಾಳಸ್ವಾಮಿ, ಚಲುವಕೃಷ್ಣ, ವಿನಾಯಕ್ ಪ್ರಸಾದ್, ಮುಖಂಡರಾದ ರಾಮು, ಚೈತ್ರಾ, ದೈಹಿಕ ಶಿಕ್ಷಕ ಶಿವಪ್ಪ, ಪ್ರಾಂಶುಪಾಲ ದಯಾನಂದ, ಪ್ರಗತಿ ವೇಣು, ಲಯನ್ಸ್ ವಿಜಯ್, ಚಿ.ಡಿ. ದಾಸಾಚಾರಿ, ರಾಮು ಇದ್ದರು.

ಬಿ.ಮರಯ್ಯಗೆ ಸನ್ಮಾನ



ಡಾಕ್ಟರೇಟ್ ಪುರಸ್ಕೃತ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಅವರನ್ನು ಕನ್ನಡಸೇನೆ ಜಿಲ್ಲಾ ಕಾರ್ಮಿಕರ ಘಟಕದ ಉಪಾಧ್ಯಕ್ಷ ಕೆ.ರಾಜು ಸನ್ಮಾನಿಸಿದರು. ಕಾರ್ಮಿಕ ಘಟಕದ ನಂಜುಂಡಸ್ವಾಮಿ, ನಾಗರಾಜು ಇದ್ದರು.

ಜಿಲ್ಲಾ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿಗೆ

ಕೆ.ಆರ್.ನಗರ, ಸಾಲಿಗ್ರಾಮ ತಾಲೂಕಿನ 6 ಶಿಕ್ಷಕರು ಆಯ್ಕೆ

ಕೆ.ಆರ್.ನಗರ, ಸೆ.5– ಮೈಸೂರು ಜಿಲ್ಲಾ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿಗೆ ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನ 6 ಮಂದಿ ಶಿಕ್ಷಕರು ಭಾಜನರಾಗಿದ್ದಾರೆ.








ಕೆ.ಆರ್.ನಗರ ತಾಲೂಕಿನ ಹೊಸೂರು ಕಲ್ಲಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಡ್ತಿ ಮುಖ್ಯ ಶಿಕ್ಷಕ ವೀರಭದ್ರಸ್ವಾಮಿ, ಚಾಮಲಾಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕಿ ಆರ್. ಮಂಜುಳಾ, ಕೆಸ್ತೂರು ಕೊಪ್ಪಲು ಸರ್ಕಾರಿ ಪ್ರೌಢಶಾಲೆ ದೈಹಿಕ ಶಿಕ್ಷಣ ಶಿಕ್ಷಕ ಗೋವಿಂದರಾಜು, ಸಾಲಿಗ್ರಾಮ ತಾಲೂಕಿನ ಮುದ್ದನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕಿ ಸಿ.ಎಂ.ಸುಮಾಮಣಿ, ಸಾಲೇಕೊಪ್ಪಲು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಸಹ ಶಿಕ್ಷಕ ಎ.ಜಿ. ಪ್ರಭಾಕರ್, ಸಾಲಿಗ್ರಾಮ ಸರ್ಕಾರಿ ಪ್ರೌಢಶಾಲೆ ಶಿಕ್ಷಕ ಅಂಕನಹಳ್ಳಿ ಮಧುಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ. ಸೆ.6 ರಂದು ಮೈಸೂರಿನ ಕಲಾಮಂದಿರದಲ್ಲಿ ನಡೆಯುವ ಶಿಕ್ಷಕರ ದಿನಾಚರಣೆಯಲ್ಲಿ ಶಿಕ್ಷಕರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪ್ರಶಸ್ತಿ ಬಂದಿರುವ ಹಿನ್ನಲೆಯಲ್ಲಿ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಲಕ್ಕಿಕುಪ್ಪೆ ಶಂಕರೇಗೌಡ, ಶಿಕ್ಷಕರ ಸಂಘದ ಅಧ್ಯಕ್ಷ ಚಿಕ್ಕಕೊಪ್ಪಲು ಸಿ.ಎನ್. ಸ್ವಾಮಿ, ಪ್ರಧಾನ ಕಾರ್ಯದರ್ಶಿ ಸಂಗರಶೆಟ್ಟಹಳ್ಳಿ ಸುರೇಶ್, ಸಾಮರಸ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸಯ್ಯದ್ ರಿಜ್ವಾನ್ ಅಭಿನಂದಿಸಿದ್ದಾರೆ.

6 ಪ್ರಶಸ್ತಿಗಳು ಶಿಕ್ಷಕರ ಕರ್ತವ್ಯದ ಜವಾಬ್ದಾರಿ ಮತ್ತಷ್ಟು ಹೆಚ್ಚಿಸುತ್ತದೆ. ಜೊತೆಗೆ ಇನ್ನಷ್ಟು ಉತ್ತಮವಾಗಿ ಬೋಧನೆ ಹಾಗೂ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಲು ಪ್ರೇರಣೆಯಾಗಲಿದೆ. ಇವರ ಶ್ರಮದಿಂದ ದೊರೆತ ಪ್ರಶಸ್ತಿ ನೂರಾರು ಶಿಕ್ಷಕರಿಗೆ ಪ್ರೇರಣೆಯಾಗಲಿದೆ. ಇದೇ ಸೆ.8ರಂದು ಸೋಮವಾರ ಪಟ್ಟಣದಲ್ಲಿ ನಡೆಯುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ವಿಜೇತರಾದ ಆರು ಶಿಕ್ಷಕರನ್ನು ಅಭಿನಂದಿಸಲಾಗುವುದು.

-ಆರ್.ಕೃಷ್ಣಪ್ಪ, ಬಿಇಓ, ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕು.

ಒಳ ಮೀಸಲಾತಿ ಜಾರಿ; ಸರ್ಕಾರಕ್ಕೆ ಅಭಿನಂದನೆ

ನಂಜನಗೂಡು, ಸೆ.5– ಒಳ ಮೀಸಲಾತಿ ಜಾರಿಯಲ್ಲಿ ಎಡಗೈ ಮತ್ತು ಬಲಗೈ ಹಾಗೂ ಇನ್ನಿತರರಿಗೆ ಅನ್ಯಾಯವಾಗದಂತೆ ಎಲ್ಲಾ ದಲಿತರು ಒಪ್ಪುವಂತಹ ಮೀಸಲಾತಿ ಜಾರಿಗೊಳಿಸಿದ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವನ್ನು ದಲಿತ ಸಮುದಾಯ ಅಭಿನಂದಿಸುತ್ತದೆ ಎಂದು ಮೈಸೂರು ಜಿಲ್ಲಾ ಪ.ಜಾತಿ ಘಟಕದ ಜಿಲ್ಲಾ ಮಾಧ್ಯಮ ವಕ್ತಾರ ಮತ್ತು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಪಿ.ರವಿಪ್ರಕಾಶ್ ತಿಳಿಸಿದರು.



ಕಾಂಗ್ರೆಸ್ ಪಕ್ಷ ಮೊದಲಿನಿಂದಲೂ ದಲಿತರು, ಹಿಂದುಳಿದವರ ಮತ್ತು ಅಲ್ಪ ಸಂಖ್ಯಾತ ವರ್ಗಗಳ ಹಿತ ಕಾಪಾಡಿದೆ. ಜೊತೆಗೆ ಅವರಿಗಾಗಿ ಅನೇಕ ಯೋಜನೆಗಳನ್ನು ಜಾರಿ ಮಾಡುವ ಮೂಲಕ ಮಹತ್ತರ ಕೊಡುಗೆಗಳನ್ನು ನೀಡಿದೆ. ತೀವ್ರ ಗೊಂದಲಮಯವಾಗಿದ್ದ, ಹಲವು ವರ್ಷಗಳಿಂದ ಒಳಮೀಸಲಾತಿ ಜಾರಿಗಾಗಿ ಹೋರಾಡಿದ ದಲಿತರ ಬೇಡಿಕೆಗಳನ್ನು ಮನಗಂಡ ಕಾಂಗ್ರೆಸ್ ಪಕ್ಷ ಕಳೆದ ಚುನಾವಣೆಯಲ್ಲಿ ಒಳ ಮೀಸಲಾತಿ ಜಾರಿಗೊಳಿಸುವುದಾಗಿ ತನ್ನ ಪ್ರಣಾಳಿಕೆಯಲ್ಲಿ ನೀಡಿದ್ದ ಆಶ್ವಾಸನೆಯಂತೆ ಅಧಿಕಾರಕ್ಕೆ ಬಂದ ನಂತರ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿಯನ್ವಯ ಒಳಮೀಸಲಾತಿ ಜಾರಿಗೊಳಿಸಿ ನುಡಿದಂತೆ ನಡೆದ ಸರ್ಕಾರ ಎನಿಸಿದೆ.

ಒಳ ಮೀಸಲಾತಿ ಜಾರಿಯಲ್ಲಿ ಐತಿಹಾಸಿಕ ತೀರ್ಮಾನ ಕೈಗೊಂಡ ಸಿಎಂ ಸಿದ್ದರಾಮಯ್ಯ, ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಪ.ಜಾತಿಯ ಎಲ್ಲಾ ಸಚಿವರು, ಎಸ್ಸಿ ಮೀಸಲು ಕ್ಷೇತ್ರದಿಂದ ಗೆದ್ದಿರುವ ದಲಿತ ಶಾಸಕರಿಗೂ, ಸಂಸದ ಸುನೀಲ್ ಬೋಸ್ ಹಾಗೂ ಹೋರಾಟ ಮಾಡಿದಂತಹ ಅನೇಕ ದಲಿತ ಸಂಘಟನೆ ನಾಯಕರುಗಳಿಗೂ, ಎಸ್ಸಿ ಘಟಕದ ರಾಜ್ಯಾಧ್ಯಕ್ಷ ಆರ್. ಧರ್ಮಸೇನಾ, ಶಾಸಕ ದರ್ಶನ್ ಅವರಿಗೂ, ವಿಶೇಷವಾಗಿ ಸುಪ್ರೀಂಕೋರ್ಟ್‌ನಲ್ಲಿ ನ್ಯಾಯ ದೊರಕಿಸಿಕೊಟ್ಟಂತಹ ಸಮುದಾಯದ ನ್ಯಾಯವಾದಿಗಳಿಗೂ ದಲಿತ ಸಮುದಾಯವು ಕೃತಜ್ಞತೆ ಸಲ್ಲಿಸುತ್ತದೆ ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

ಇಬ್ಬರು ಮಹಿಳೆಯರು ನಾಪತ್ತೆ



ಜಯಮ್ಮ



ಶಾರದಮ್ಮ

ಸಾಲಿಗ್ರಾಮ, ಸೆ.5– ಸಾಲಿಗ್ರಾಮ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇಬ್ಬರು ಮಹಿಳೆಯರು ಕಾಣೆಯಾಗಿರುವ ಸಂಬಂಧ ಪ್ರಕರಣ ದಾಖಲಾಗಿದೆ. ಸಾಲಿಗ್ರಾಮ ಪಟ್ಟಣದ ಸಿಂಗ್ರಯ್ಯನ ಬೀದಿಯ ನಿವಾಸಿ ಲೇ. ಸಣ್ಣಯ್ಯ ಅವರ ಪತ್ನಿ ಜಯಮ್ಮ (68) ಕಾಣೆಯಾಗಿದ್ದು, ಇವರ ಪುತ್ರ ಗಣೇಶ್ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿದ್ದಾರೆ. ಮತ್ತೊಂದು ಪ್ರಕರಣದಲ್ಲಿ ಬಳ್ಳೂರು ಗ್ರಾಮದ ನಿವಾಸಿ ಲೇ. ರಾಜೇಗೌಡರ ಪತ್ನಿ ಶಾರದಮ್ಮ(72) ಕಾಣೆಯಾಗಿದ್ದು, ಇವರ ಮೊಮ್ಮಗ ಪವನ್ ದೂರು ದಾಖಲಿದ್ದಾರೆ. ಈ ಇಬ್ಬರು ಮಹಿಳೆಯರ ಮಾಹಿತಿ ಸಿಕ್ಕಲ್ಲಿ ಠಾಣೆ ದೂ:08223–283341, ವೃತ್ತ ನಿರೀಕ್ಷಕ ಶಶಿಕುಮಾರ್ ಅವರ ಮೊ:9480805063 ಸಂಪರ್ಕಿಸುವಂತೆ ಕೋರಲಾಗಿದೆ.

ಪತ್ರಕರ್ತರ ಸಂಘದ ಸದಸ್ಯರಿಗೆ ಜರ್ಕಿನ್ ವಿತರಣೆ

ಹೆಚ್.ಡಿ.ಕೋಟೆ, ಸೆ.5– ತಾಲೂಕಿನಲ್ಲಿ ನಿರಂತರವಾಗಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಪತ್ರಕರ್ತರು ನಿತ್ಯ ಪತ್ರಿಕೆ ವಿತರಿಸಲು ಕಷ್ಟವಾಗುತ್ತಿತ್ತು. ಇದನ್ನರಿತು ಪತ್ರಕರ್ತರ ಸಂಘದ ಸದಸ್ಯರಿಗೆ ಜರ್ಕಿನ್ ವಿತರಿಸಲಾಗಿದೆ ಎಂದು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು ತಿಳಿಸಿದರು.



ಪತ್ರಕರ್ತರ ಸಂಘದ ಸದಸ್ಯರಿಗೆ ಜರ್ಕಿನ್ ವಿತರಿಸಲಾಯಿತು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸದಸ್ಯರಿಗೆ ಜರ್ಕಿನ್ ವಿತರಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಕಳೆದ 3 ತಿಂಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಪತ್ರಕರ್ತರು ನಿತ್ಯ ಪತ್ರಿಕೆ ವಿತರಿಸಲು ಕಷ್ಟಕರವಾಗುತ್ತಿತ್ತು ಹಾಗೂ ಕೆಲವು ಸಂದರ್ಭ ಅನಾರೋಗ್ಯಕ್ಕೀಡಾಗುತ್ತಿದ್ದರು. ಆದ್ದರಿಂದ ಅದನ್ನು ಮನಗಂಡು ಸದಸ್ಯರಿಗೆ ಜರ್ಕಿನ್‌ಗಳನ್ನು ವಿತರಿಸಲಾಗಿದೆ ಎಂದರು. ಈ ವೇಳೆ ಪ್ರಧಾನ ಕಾರ್ಯದರ್ಶಿ ಎಸ್.ಆರ್.ನಾಗರಾಮ, ಸಹ ಕಾರ್ಯದರ್ಶಿ ದೊಡ್ಡಸಿದ್ದು, ಖಜಾಂಚಿ ಮಂಜು ಕೋಟೆ, ನಿರ್ದೇಶಕರಾದ ಹಂಪಾಪುರ ನಾಗೇಶ್, ಪುಟ್ಟರಾಜು, ಜಿ.ರವಿಕುಮಾರ್, ರಂಗರಾಜು, ರವಿಕುಮಾರ್ ಆರಾಧ್ಯ, ಸದಸ್ಯರಾದ ಕನ್ನಡ ಪ್ರಮೋದ್, ಶ್ರೀನಿಧಿ, ಬಸವರಾಜು, ನಿಂಗಣ್ಣ ಕೋಟೆ, ವಾಸುಕಿ ನಾಗೇಶ್, ಸುರೇಶ್, ಆನಂದ್, ರಘು, ದಾಸೇಗೌಡ, ಚಿಕ್ಕಣ್ಣೆಗೌಡ, ಶರವಣ, ಚಂದ್ರು, ಪುರುಷೋತ್ತಮ್ ಹಾಜರಿದ್ದರು.

ಬನ್ನೂರಲ್ಲಿ ಗೌರಿ–ಗಣೇಶನಿಗೆ ವಿಶೇಷ ಪೂಜೆ



ಅಪ್ಪು ಯೂತ್ ಯುವಕರ ಬಳಗದಿಂದ ರಾಹುಲ್ ಯುವ ಬ್ರಿಗೇಡ್‌ನ ರಾಹುಲ್ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಸೆ.5– ತಾಲೂಕಿನ ಬನ್ನೂರು ಪಟ್ಟಣದ ಸುಭಾಷ್ ನಗರದ ಆದಿಜಾಂಬವ ಕಾಲೋನಿಯಲ್ಲಿ ಅಪ್ಪು ಯೂತ್ ಯುವಕರ ಬಳಗದಿಂದ ಪ್ರತಿಷ್ಠಾಪಿಸಲಾಗಿದ್ದ ಗೌರಿ ಗಣೇಶ ಮೂರ್ತಿಗಳಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ರಾಹುಲ್ ಯುವ ಬ್ರಿಗೇಡ್‌ನ ರಾಹುಲ್ ಗೌರಿ–ಗಣೇಶನಿಗೆ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಅನ್ನದಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರತಿ ವರ್ಷದಂತೆ ಈ ಬಾರಿಯೂ ಸಂಪ್ರದಾಯದಂತೆ ಸುಭಾಷ್ ನಗರದಲ್ಲಿ ಗೌರಿ, ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ ಎಂದರು.

ಪುರಸಭಾ ಸದಸ್ಯ ಶಿವಣ್ಣ ಮಾತನಾಡಿದರು. ಈ ವೇಳೆ ಅಪ್ಪು ಯೂತ್ ಯುವಕರ ಬಳಗದ ಶ್ರೀಕಾಂತ್, ಗಿರಿಯಪ್ಪ, ನಾಗೇಂದ್ರ, ಸ್ವಾಮಿ, ಸಿದ್ದರಾಜು, ರವಿ, ಸುದೀಪ, ನಿತಿನ್, ಚಂದ್ರಕಾಂತ, ರಾಮದಾಸ, ವಿಜಯ್, ನಾಗರಾಜು, ಬಿ.ಎಚ್.ಹನುಮಂತಯ್ಯ, ಪ್ರಭುದೇವ, ಸೂರಿರಾಜು, ಸಾಗರ್, ಪವನ್, ಮಂಟಯ್ಯ, ಹರ್ಷ, ಧನುಷ್, ಸೂರ್ಯ, ನಾಗೇಶ್, ನಿಂಗಪ್ಪ, ಶ್ರೀಧರ, ಪ್ರದೀಪ, ಶಂಕರ, ಸುಭಾಷ್ ನಗರದ ಮುಖಂಡರು, ಇತರರು ಭಾಗವಹಿಸಿದ್ದರು.

ಗ್ರಾಪಂಗಳು ಗ್ರಾಮಗಳ ಅಭಿವೃದ್ಧಿಗೆ ಶಕ್ತಿ ಕೇಂದ್ರಗಳು

ಹಂಚೀಪುರ ಗ್ರಾಮ ಪಂಚಾಯಿತಿ ನೂತನ ಕಟ್ಟಡ ಉದ್ಘಾಟಿಸಿದ ಶಾಸಕ ಅನಿಲ್

ಸರಗೂರು, ಸೆ.5– ಗ್ರಾಪಂಗಳು ಗ್ರಾಮಗಳ ಅಭಿವೃದ್ಧಿಗೆ ಶಕ್ತಿ ಕೇಂದ್ರಗಳಿದ್ದ ಹಾಗೆ. ಗ್ರಾಪಂ ಮಟ್ಟದಲ್ಲಿ ಸದಸ್ಯರ ಯೋಜನೆಗಳೇ ಅಂತಿಮ. ಹೀಗಾಗಿ ತಮ್ಮ ವಾರ್ಡ್‌ಗಳ ಅಭಿವೃದ್ಧಿಗೆ ಪ್ರತಿ ಸದಸ್ಯರು ಶ್ರಮಿಸುತ್ತಾರೆ. ವಾರ್ಡ್ ನಿರ್ವಹಣೆ ಜವಾಬ್ದಾರಿ ಅವರ ಮೇಲಿದೆ ಎಂದು ಶಾಸಕ ಅನಿಲ್ ತಿಳಿಸಿದರು.

ತಾಲೂಕಿನ ಹಂಚೀಪುರ ಗ್ರಾಪಂ ಕಟ್ಟಡ, ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ನೂತನ ಕಟ್ಟಡ ಉದ್ಘಾಟಿಸಿ ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕ್ಷೇತ್ರದ ಅಭಿವೃದ್ಧಿಗೆ ಶಾಸಕರು ಶಕ್ತಿಕೇಂದ್ರವಾದ ವಿಧಾನಸೌಧದಲ್ಲಿ ಚರ್ಚಿಸಿ ಅನುದಾನ ತರುತ್ತಾರೆ. ಅದೇ ಮಾದರಿ ಸದಸ್ಯರು ತಮ್ಮ ಶಕ್ತಿಕೇಂದ್ರವಾದ ಗ್ರಾಪಂನಿಂದ ವಾರ್ಡ್‌ಗಳ ಅಭಿವೃದ್ಧಿಗೆ ಅನುದಾನ ತಂದು ನಿರ್ವಹಣೆ ಮಾಡುತ್ತಾರೆ. ತಮ್ಮ ವಾರ್ಡ್‌ನಲ್ಲಿನ ರಸ್ತೆ, ಚರಂಡಿ, ವಿದ್ಯುತ್ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸ ಮಾಡುತ್ತಾರೆ. ಗ್ರಾಪಂನಲ್ಲಿಯೂ ನಾನಾ ಯೋಜನೆಗಳಿದ್ದು, ಅದನ್ನು ಸದಸ್ಯರು ಕಾರ್ಯರೂಪಕ್ಕೆ ತರಬೇಕು ಎಂದು ಸಲಹೆ ನೀಡಿದರು.



ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಮಾತನಾಡಿದರು.

ಹಂಚೀಪುರ ಗ್ರಾಪಂ ವ್ಯಾಪ್ತಿಯ ಗ್ರಾಮಗಳಿಗೆ ಆರೇಳು ಬಾರಿ ಭೇಟಿ ನೀಡಿ ಗ್ರಾಮಸ್ಥರ ಅಹವಾಲು ಸ್ವೀಕರಿಸಲಾಗಿದೆ. ಗ್ರಾಮದಲ್ಲಿ ಆಗಬೇಕಾದ ಕಾಮಗಾರಿಗಳನ್ನು ಮುಂದಿನ ದಿನಗಳಲ್ಲಿ ಪೂರ್ಣಗೊಳಿಸಲಾಗುವುದು. ಮುಂಬರುವ ಪಂಚಾಯಿತಿ ಚುನಾವಣೆಯಲ್ಲಿ ಎಲ್ಲರೂ ಸ್ಪರ್ಧಿಸಿ, ಗೆಲುವು ಸಾಧಿಸಿ ಎಂದು ಶುಭ ಹಾರೈಸಿದರು. ಪಂಚಾಯಿತಿ ಗ್ರಾಮಗಳ ಅಭಿವೃದ್ಧಿ ಪೂರಕವಾಗಿ ಕೆಲಸ ಮಾಡಬೇಕು ಎಂದ ಅವರು ಗ್ರಾಪಂನಲ್ಲಿ ಜನನ, ಮರಣ ನೋಂದಣಿ, ಸೂಚನಾ ಫಲಕ, ಗ್ರಾಪಂಗೆ ಹಿರಿಯ ಅಧಿಕಾರಿಗಳು ಭೇಟಿ ನೀಡುವ ಸಮಯ, ಹೆಸರು ಬಳಸಲು ಫಲಕ. ಹೀಗೆ ಹತ್ತು ಹಲವು ಜನಪರ ಯೋಜನೆಗಳ ಬಗ್ಗೆ ಮಾಹಿತಿ ನೀಡಿರುವುದು ಸಂತಸ ತಂದಿದೆ. ಅಲ್ಲದೇ ವಿದ್ಯಾವಂತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಗ್ರಂಥಾಲಯ ನಿರ್ಮಿಸಲಾಗಿದೆ. ಇದನ್ನು ಬಳಸಿಕೊಳ್ಳಬೇಕು ಎಂದರು.

ಹಂಚೀಪುರ ಮಠದ ಚನ್ನಬಸವ ಸ್ವಾಮೀಜಿ, ದಡದಹಳ್ಳಿ ಮಠದ ಷಡಕ್ಷರಿ ಸ್ವಾಮೀಜಿ ಆಶೀರ್ವಚನ ನೀಡಿದರು. ಗ್ರಾಪಂ ಅಧ್ಯಕ್ಷೆ ರುಕ್ಮಿಣಿ ಮಾತನಾಡಿದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ವೀರಭದ್ರಪ್ಪ, ಬಸವ ಬಳಗದ ಅಧ್ಯಕ್ಷ ಗಣಪತಿ, ಗೌಡಿಕೆ ತಮ್ಮಯ್ಯಪ್ಪ, ಶಿವಣ್ಣ, ಮಹದೇವಪ್ಪ, ಅಕ್ರಮ ಸಕ್ರಮ ಸಮಿತಿ ಸದಸ್ಯ ಎಸ್.ಎಸ್.ಪ್ರಭುಸ್ವಾಮಿ, ಮೈಮುಲ್ ನಿರ್ದೇಶಕ ಕೆ.ಈರೇಗೌಡ, ಮಹೇಶ್, ಪುಟ್ಟಣ್ಣ, ಮಹದೇವಸ್ವಾಮಿ, ಪ್ರಕಾಶ್, ಉಪಾಧ್ಯಕ್ಷ ಎಂ.ನಟರಾಜು, ತಾಪಂ ಇಓ ಡಿ.ಎಸ್.ಪ್ರೇಮ್ ಕುಮಾರ್, ಸದಸ್ಯರಾದ ಎ.ಚಂದ್ರಶೇಖರ್, ಎಂ.ಗೀತಾ, ಡಿ.ಎಸ್.ಜಯರಾಜು, ಕರಿಗೌಡ, ಮಣಿ, ಮಂಜುಳಾ, ನಾಗರಾಜು, ಸತೀಶ್, ಶಿವಮ್ಮ, ಶೋಭಾ, ಪಿಡಿಓ ಬಿ.ಚನ್ನಪ್ಪ, ಕಾರ್ಯದರ್ಶಿ ನಾಗರಾಜು, ಡಿ.ಸಿ.ಸಿದ್ದಪ್ಪ, ಪಿಎಸಿಎಸ್ ಉಪಾಧ್ಯಕ್ಷ ದೇವರಾಜು, ಉಮೇಶ್, ದೇವರಾಜಸ್ವಾಮಿ, ಡಿ.ಸಂಜಯ್, ಇಂಜಿನಿಯರ್ ಸುಗಂಧರಾಜು, ಬಿಲ್ ಕಲೆಕ್ಟರ್ ಸ್ವಾಮಿ, ಎಸ್‌ಡಿಎ ಎಸ್.ವಿ.ಗಜೇಂದ್ರ ಸೇರಿದಂತೆ ಇನ್ನಿತರರಿದ್ದರು.

ಮೈಸೂರು ಭಾಗದ ಸರ್ವತೋಮುಖ ಪ್ರಗತಿಯಲ್ಲಿ 'ನಾಲ್ವಡಿ' ಪ್ರಾತಃಸ್ಮರಣೀಯರು

ನಿವೃತ್ತ ಪ್ರಾಧ್ಯಾಪಕಿ ಭ್ರಮರಾ ಬಹದ್ದೂರ್ ಗುಣಗಾನ

ಮೈಸೂರು, ಸೆ.5(ಎಸ್‌ಪಿಎನ್)– 'ಮರೆಯೋದುಂಟೇ ಮೈಸೂರು ದೊರೆಯ... ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯ' ಸಾಲಿಗೆ ತಕ್ಕಂತೆ ನಾಲ್ವಡಿ ಅವರ ಜೀವನ, ಆಡಳಿತ ಶಿಸ್ತುಬದ್ಧವಾಗಿತ್ತು ಎಂದು ಬೆಂಗಳೂರು ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕಿ ಭ್ರಮರಾ ಬಹದ್ದೂರ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ 58ನೇ ಎಂಜಿನಿಯರ್‌ಗಳ ದಿನಾಚರಣೆ ಅಂಗವಾಗಿ ಸರ್.ಎಂ.ವಿಶ್ವೇಶ್ವರಯ್ಯನವರ 164ನೇ ಜನ್ಮದಿನಾಚರಣೆ ಪ್ರಯುಕ್ತ 'ನಾಲ್ವಡಿ ಕೃಷ್ಣರಾಜ ಒಡೆಯರ್' ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ವಾಣಿವಿಲಾಸ ಜಲಾಶಯ, ಕೆಆರ್‌ಎಸ್ ಜಲಾಶಯ ನಿರ್ಮಾಣದ ಮೂಲಕ ನೀರಾವರಿ ಕ್ಷೇತ್ರದಲ್ಲಿ ಸುಧಾರಣೆ ತಂದು ಕೃಷಿಗೆ ಸಹಕಾರಿಯಾದರು. ವಿವಿಧ ಕಾರ್ಖಾನೆಗಳನ್ನು ಸ್ಥಾಪಿಸಿ ಉದ್ಯೋಗ ಮತ್ತು ಆರ್ಥಿಕ ಅಭಿವೃದ್ಧಿ ಮಾಡಿದ್ದಾರೆ. ಜಾತಿ ಪದ್ಧತಿ ನಿರ್ಮೂಲನೆ, ಮಹಿಳೆಯರ ಹಕ್ಕುಗಳ ಬಗ್ಗೆಯೂ ಕಾಳಜಿ ಹೊಂದಿದ್ದರಲ್ಲದೆ, ಅಭಿವೃದ್ಧಿ ವಿಚಾರದಲ್ಲಿ ಹಲವು ಪ್ರಥಮಗಳಿಗೆ ನಾಂದಿ ಹಾಡಿದ್ದ ಈಗಲೂ ಮೈಸೂರು ಭಾಗದಲ್ಲಿ 'ಮರೆಯೋದುಂಟೇ ಮೈಸೂರು ದೊರೆಯ...' ಈ ಹಾಡಿನ ಮೂಲಕ ಇಂದಿಗೂ ಮೈಸೂರಿನ ಜನ ಸ್ಮರಿಸುತ್ತಿದ್ದಾರೆ ಎಂದು ತಮ್ಮ ಮೊಬೈಲ್‌ನಲ್ಲಿನ ಹಾಡು ಕೇಳಿಸಿದರು.

ಮೈಸೂರು ಸಂಸ್ಥಾನದ ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ನಾಲ್ವಡಿ ಅವರ ಕೊಡುಗೆ ಅಪಾರ. ನಾಲ್ವಡಿ ಅವರು ಜನಿಸಿದ್ದು 1884ರ ಜೂ.4ರಂದು. ತಂದೆ ಚಾಮರಾಜ ಒಡೆಯರ್ ಅಕಾಲಿಕ ನಿಧನದ 1894ರ ನಂತರ ತಾಯಿ ಕೆಂಪನಂಜಮ್ಮಣ್ಣಿಯವರು 1895ರ ಫೆ.1ರಂದು 10 ವರ್ಷದ ಬಾಲಕನಾಗಿದ್ದ ಯುವರಾಜ ಕೃಷ್ಣರಾಜ ಒಡೆಯರ್‌ಗೆ ಪಟ್ಟಕಟ್ಟಿದರು. ನಾಲ್ವಡಿಯವರಿಗೆ 18 ವರ್ಷ ತುಂಬುವವರೆಗೂ ತಾಯಿ ಕೆಂಪನಂಜಮ್ಮಣ್ಣಿಯವರೇ ರಾಜ್ಯ ಪ್ರತಿನಿಧಿಯಾಗಿ ಆಳ್ವಿಕೆ ನಡೆಸಿ, ಮಹಿಳೆಯರಿಗೆ ಇಂದಿಗೂ ಮಾದರಿಯಾಗಿದ್ದಾರೆ ಎಂದರು.



58ನೇ ಎಂಜಿನಿಯರ್‌ಗಳ ದಿನಾಚರಣೆ ಅಂಗವಾಗಿ ಸರ್.ಎಂ.ವಿಶ್ವೇಶ್ವರಯ್ಯನವರ 164ನೇ ಜನ್ಮದಿನಾಚರಣೆ ಪ್ರಯುಕ್ತ 'ನಾಲ್ವಡಿ ಕೃಷ್ಣರಾಜ ಒಡೆಯರ್' ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಬೆಂಗಳೂರು ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕಿ ಭ್ರಮರಾ ಬಹದ್ದೂರ್ ಉದ್ಘಾಟಿಸಿದರು.

ನಾಲ್ವಡಿಯವರ 38 ವರ್ಷಗಳ ಭವ್ಯ ಆಡಳಿತವನ್ನು ನೆನಪಿಸುವ ಹಲವು ಸಾಕ್ಷಿಗಳು ಇಂದಿಗೂ ಮೈಸೂರಿನಲ್ಲಿವೆ. 1907ರಲ್ಲಿ ನ್ಯಾಯವಿಧಾಯಕ ಸಭೆಯನ್ನು ಸ್ಥಾಪಿಸಿದರು. ಮೈಸೂರಿನಲ್ಲಿ ನಡೆದ ಮೀಸಲಾತಿ ಚಳವಳಿಯಿಂದಾಗಿ 1927ರಲ್ಲಿ ಮಿಲ್ಲರ್ ಆಯೋಗ ರಚನೆಯಾಗಿ ಅದರ ಶಿಫಾರಸ್ಸಿನಂತೆ, ಬ್ರಾಹ್ಮಣೇತರರಿಗೆ ಶೇ 75% ಮೀಸಲಾತಿ ನೀಡಿ ಹೊಸ ಶಕೆ ಆರಂಭಿಸಿದ ಕೀರ್ತಿ ನಾಲ್ವಡಿಯವರಿಗೆ ಸಲ್ಲುತ್ತದೆ ಎಂದರು.

ತಮ್ಮ ಕಾಲಾವಧಿಯನ್ನು ದೇವದಾಸಿ ಪದ್ಧತಿ, ಗೆಜ್ಜೆಪೂಜೆ ನಿಷೇಧಿಸಿದ್ದು, ವಿಧವಾ ಶಿಕ್ಷಣಕ್ಕೆ ಪ್ರೋತ್ಸಾಹಿಸಿದ್ದರು. ಮಹಿಳೆಯರಿಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ನೀಡಲು ಕಾನೂನು ರೂಪಿಸಿದ್ದು, ಅಸ್ಪೃಶ್ಯರ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿದ ನಾಲ್ವಡಿಯವರು, ಶಿಕ್ಷಣವೇ ಎಲ್ಲರ ಅಭಿವೃದ್ಧಿಗೂ ಮೂಲ ಎಂದು ಭಾವಿಸಿ, ಅದಕ್ಕೆ ಹೆಚ್ಚು ಒತ್ತುಕೊಟ್ಟು 1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರಾರಂಭಿಸಿದರು. ಜೊತೆಗೆ ಬೆಂಗಳೂರಿನಲ್ಲಿ ಕೃಷಿ ವಿ.ವಿ ಸ್ಥಾಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ ಎಂದರು.

ಮೈಸೂರು, ಬೆಂಗಳೂರು ನಗರಗಳಲ್ಲಿ ನಿರ್ಮಾಣವಾದ ಭವ್ಯ ಕಟ್ಟಡಗಳು, ರಸ್ತೆಗಳು, ವಿದ್ಯುತ್ ದೀಪಗಳು, ಉದ್ಯಾನ ವನಗಳು, ಶ್ರೇಷ್ಠ ವಿದ್ಯಾ ಸಂಸ್ಥೆಗಳು, ವಿದ್ಯಾರ್ಥಿ ನಿಲಯಗಳು, ಅನಾಥಾಶ್ರಮಗಳು, ಛತ್ರಗಳು ಹೀಗೆ ಹತ್ತು ಹಲವು ಕಟ್ಟಡಗಳ ನಿರ್ಮಾತೃ ನಾಲ್ವಡಿಯವರೇ ಆಗಿದ್ದಾರೆ. 1940ರ ಆ.3ರಂದು ನಿಧನರಾದ ನಾಲ್ವಡಿಯವರ ಸಾಧನೆ ಇಂದಿಗೂ ಮರೆಯಲು ಸಾಧ್ಯವೇ ಇಲ್ಲ. ಹಾಗಾಗಿಯೇ ಕವಿ ಹನಸೋಗೆ ಸೋಮಶೇಖರ್ ಅವರ ಕವಿತೆ 'ಮರೆಯೋದುಂಟೆ ಮೈಸೂರು ದೊರೆಯ'.., ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯ.. ಈ ಸಾಲನ್ನು ಮರೆಯಲು ಸಾಧ್ಯವೇ ಇಲ್ಲ. ಈ ಒಂದು ಹಾಡಿನಲ್ಲಿ ನಾಲ್ವಡಿಯವರ ಎಲ್ಲಾ ಸಾಧನೆಗಳನ್ನು ವಿವರಿಸಿದ್ದಾರೆ ಎಂದರು.

ರಾಜ್ಯ ಚುಟುಕು ಸಾಹಿತ್ಯ ಪರಿಷತ್ ಸ್ಥಾಪಕ ಅಧ್ಯಕ್ಷ ಎಂ.ಜಿ.ಆರ್.ಅರಸ್ ಮಾತನಾಡಿ, ನಾಲ್ವಡಿ ಅವರು ಮಾತೃತ್ವದ ಅಂತಃಕರಣ ಹೊಂದಿದ್ದರು. ಬದುಕಿನಲ್ಲಿ ಸತ್ಯವೇ ಉನ್ನತ ಎಂಬ ಅರಿವು ಹೊಂದಿದ್ದರು, ಅದನ್ನೇ ಅಳವಡಿಸಿಕೊಂಡು ಬದುಕಿದವರು. ನಾಡಿನ ಸೌಂದರ್ಯ ವೃದ್ಧಿಯಲ್ಲಿ ಭವ್ಯ ಕಟ್ಟಡಗಳನ್ನು ನಿರ್ಮಿಸಿದ ಎಂಜಿನಿಯರ್‌ಗಳ ಸೇವೆ ಸ್ಮರಣೀಯ. ಮೈಸೂರು ಸಾಮ್ರಾಜ್ಯ ಇಷ್ಟೊಂದು ಅಭಿವೃದ್ಧಿ ಹೊಂದುವಲ್ಲಿ ರಾಜರಷ್ಟೇ, ವಿಶ್ವೇಶ್ವರಯ್ಯ ಅವರಂಥ ಎಂಜಿನಿಯರ್‌ಗಳ ಶ್ರಮವೂ ಇದೆ. ಇಲ್ಲಿ 25 ರಾಜರು ಬಂದು ಹೋಗಿದ್ದರೂ ನಾಲ್ವಡಿ ಅವರು ಪ್ರಾತಃಸ್ಮರಣೀಯರು. ಅವರು ಸಮಾಜದ ಆಮೂಲಾಗ್ರ ಬದಲಾವಣೆಗೆ ಶ್ರಮಿಸಿದ ಮಾನವೀಯ ಮೂರ್ತಿ ಎಂದರು.

ಈ ವೇಳೆ ದಿ ಇನ್ಸಿಟ್ಯೂಷನ್ ಆಫ್ ಇಂಜಿನಿಯರ್ಸ್ ಮೈಸೂರು ಘಟಕದ ಅಧ್ಯಕ್ಷ ಆರ್.ದೀಪು, ಕಾರ್ಯದರ್ಶಿ ಕೆ.ಎ.ಅನಿತಾ ವೆಂಕಟೇಶ್, ಸಂಚಾಲಕ ಎ.ಎಸ್.ಸತೀಶ್, ನಿವೃತ್ತ ಇಂಜಿನಿಯರ್ ಎಂ.ಕೆ.ನಂಜಯ್ಯ ಸೇರಿದಂತೆ ಇತರರಿದ್ದರು.

ಸೆ.14ರಿಂದ 20ರವರೆಗೆ ದಸರಾ ಚಲನಚಿತ್ರೋತ್ಸವ

•84 ಚಲನಚಿತ್ರಗಳ ಪ್ರದರ್ಶನ •ಮಾಲ್ ಆಫ್ ಮೈಸೂರ್‌ನ ಐನಾಕ್ಸ್ ಸಿನಿಮಾಸ್‌ನ 3 ಪರದೆಗಳಲ್ಲಿ ವ್ಯವಸ್ಥೆ •ಇತ್ತೀಚೆಗೆ ನಿಧನರಾದ ಅಭಿನಯ ಶಾರದೆ ಸರೋಜಾದೇವಿ ನೆನಪಲ್ಲಿ ಚಿತ್ರೋತ್ಸವ

ಮೈಸೂರು, ಸೆ.5(ಎಂಕೆ)– ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲೊಂದಾದ ದಸರಾ ಚಲನಚಿತ್ರೋತ್ಸವದಲ್ಲಿ ಈ ಬಾರಿ 84 ಚಲನಚಿತ್ರಗಳು ಪ್ರದರ್ಶನಗೊಳ್ಳಲಿವೆ.

ಸದಭಿರುಚಿಯ ಸಾಮಾಜಿಕ ಸಂದೇಶ ನೀಡುವ ಹಾಗೂ ರಾಷ್ಟ್ರ ಅಂತರರಾಷ್ಟ್ರೀಯ ಮಟ್ಟದ ಪ್ರಶಸ್ತಿ ಪುರಸ್ಕೃತ ಚಲನಚಿತ್ರಗಳು ಸೆ.14 ರಿಂದ 20 ರವರೆಗೆ ಮಾಲ್ ಆಫ್ ಮೈಸೂರಿನ ಐನಾಕ್ಸ್ ಸಿನಿ ಮಾಸ್‌ನ 3 ಪರದೆಗಳಲ್ಲಿ ಪ್ರದರ್ಶನಗೊಳ್ಳಲಿವೆ. ಮಕ್ಕಳ ಚಿತ್ರಗಳು ಹಾಗೂ ಮಹಿಳಾ ನಿರ್ದೇಶನದ ಚಿತ್ರಗಳಿಗೂ ಪ್ರಾಧಾನ್ಯತೆ ನೀಡಲಾಗಿದ್ದು, ಒಟ್ಟಾರೆ 84 ಚಲನಚಿತ್ರಗಳನ್ನು ವೀಕ್ಷಿಸುವ ಅವಕಾಶವನ್ನು ಚಿತ್ರ ರಸಿಕರಿಗೆ ನೀಡಲಾಗಿದೆ.

ಕನ್ನಡದ ಪ್ರಖ್ಯಾತ ನಟಿ, ಅಭಿನಯ ಶಾರದೆ ಹಾಗೂ ಕನ್ನಡ ಚಿತ್ರರಂಗದ ಮೊದಲ ಮಹಿಳಾ ಸೂಪರ್‌ಸ್ಟಾರ್ ದಿವಂಗತ ಬಿ.ಸರೋಜಾ ದೇವಿ ಅವರ ಸವಿ ನೆನಪಿನಲ್ಲಿ ಈ ಬಾರಿಯ ಚಲನಚಿತ್ರೋತ್ಸವ ಹಮ್ಮಿಕೊಳ್ಳಲಾಗಿದ್ದು, ಅವರ ಅಭಿನಯದ ಚಲನಚಿತ್ರವನ್ನು ಪ್ರದರ್ಶಿಸಲಾಗುತ್ತಿದೆ.

ಮಾಲ್ ಆಫ್ ಮೈಸೂರಿನಲ್ಲಿ ಸಿನಿ–ಫೋಟೋ ಪ್ರದರ್ಶನ: ಪ್ರಗತಿ ಅಶ್ವತ್ಥನಾರಾಯಣ್‌ರವರ ನೇತೃತ್ವದಲ್ಲಿ ಕನ್ನಡ ಚಿತ್ರರಂಗದ ಖ್ಯಾತ ನಿರ್ದೇಶಕರಾದ ಪುಟ್ಟಣ್ಣ ಕಣಗಲ್, ಎನ್. ಲಕ್ಷ್ಮೀನಾರಾಯಣ್, ಸಿದ್ದಲಿಂಗಯ್ಯ, ರವಿ ಅವರ ತೆರೆಯ ಹಿಂದಿನ ಶೈಲಿಯನ್ನು ಬಿತ್ತರಿಸುವ ಛಾಯಾಚಿತ್ರ ಪ್ರದರ್ಶನವನ್ನು ಸೆ.14 ರಿಂದ 18ರವರೆಗೆ ಐನಾಕ್ಸ್ ಸಿನಿಮಾಸ್ ಹೊರ ಆವರಣದಲ್ಲಿ ಆಯೋಜನೆ ಮಾಡಲಾಗಿದೆ.

'ಸು ಫ್ರಮ್ ಸೋ' ಟೀಂ ಭಾಗಿ...!

ಸೆ.13 ರಂದು ಬೆಳಿಗ್ಗೆ 11 ಗಂಟೆಗೆ ಮಾಲ್ ಆಫ್ ಮೈಸೂರಿನ ನೆಲ ಮಹಡಿಯಲ್ಲಿ ದಸರಾ ಚಲನಚಿತ್ರೋತ್ಸವಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಲಿದ್ದು, 'ಸು ಫ್ರಮ್ ಸೋ' ಖ್ಯಾತಿಯ ಸಂಧ್ಯಾ ಅರಕೆರೆ, ನಾಯಕ ನಟರಾದ ಪೃಥ್ವಿ ಅಂಬರ್, ಹಿನ್ನಲೆ ಗಾಯಕರಾದ ಜಸ್ ಕರಣ್, ನಾಗಾರ್ಜುನ್ ಶರ್ಮಾ, ನಟಿ ಅಂಜಲಿ ಭಾಗವಹಿಸಲಿದ್ದಾರೆ.

ಕಿರುಚಿತ್ರಗಳ ಪ್ರದರ್ಶನ: ಯುವಜನಾಂಗಕ್ಕೆ ಪ್ರೋತ್ಸಾಹ ನೀಡಲು ಕಿರುಚಿತ್ರ ಸ್ಪರ್ಧೆ ಏರ್ಪಡಿಸಲಾಗಿದ್ದು, ಆಯ್ಕೆಗೊಂಡ ಅತ್ಯುತ್ತಮ ಕಿರುಚಿತ್ರಗಳನ್ನು ಸಹ ಐನಾಕ್ಸ್‌ನ ದೊಡ್ಡ ಪರದೆಯಲ್ಲಿ ಪ್ರದರ್ಶಿಸಲಾಗುವುದು. ಹಾಗೆಯೇ ಸೆ.18 ರಂದು ಕಿರುಚಿತ್ರಗಳಲ್ಲಿ ಪ್ರಥಮ, ದ್ವಿತೀಯ, ತೃತೀಯ ಬಹುಮಾನಗಳನ್ನು ಹಾಗೂ ಅತ್ಯುತ್ತಮ ಸಂಕಲನಗಾರ ಹಾಗೂ ಅತ್ಯುತ್ತಮ ಛಾಯಾಗ್ರಾಹಕರಿಗೂ ಬಹುಮಾನ ವಿತರಣೆ ಮಾಡಲಾಗುತ್ತದೆ.

ಸಿನಿಪ್ರಿಯರಿಗೆ ಪಾಸ್ ವಿತರಣೆ: ಸಿನಿರಸಿಕರಿಗೆ ಅನುಕೂಲವಾಗುವಂತೆ ಪಾಸ್ ವಿತರಿಸಲಾಗುತ್ತಿದ್ದು, ವಿದ್ಯಾರ್ಥಿಗಳು 300 ರೂ. ಹಾಗೂ ಇತರರು 500 ರೂ. ನೀಡಿ ಪಾಸ್ ಪಡೆದು ನೊಂದಾಯಿಸಿ, ಚಿತ್ರೋತ್ಸವದ 7 ದಿನವೂ ಸಿನಿಮಾಗಳನ್ನು ವೀಕ್ಷಿಸಬಹುದಾಗಿದೆ. ಪಾಸ್ ಜೊತೆಯಲ್ಲಿ ಚಲನಚಿತ್ರಗಳ ಮಾಹಿತಿಯನ್ನು ಹೊಂದಿರುವ ಕಿರು ಹೊತ್ತಿಗೆಯನ್ನು ಪಡೆಯಬಹುದಾಗಿದೆ. ಮೈಸೂರಿನ ವಾರ್ತಾ ಭವನದಲ್ಲಿ ಪಾಸ್ ವಿತರಣೆ ಮಾಡಲಿದ್ದು, ಹೆಚ್ಚಿನ ಮಾಹಿತಿಗಾಗಿ ಫೇಸ್‌ಬುಕ್ ಇನ್‌ಸ್ಟಾಗ್ರಾಮ್ ಪೇಜ್‌ಗಳಾದ (MyDFF_Mysuru) ಫಾಲೋ ಮಾಡುವುದು ಹಾಗೂ 741156 4510/2 ಸಂಪರ್ಕಿಸಬಹುದಾಗಿದೆ.

ನಾಳೆ ಉಪ್ಪಾರ ಸಮುದಾಯದ ಚಿಂತನ–ಮಂಥನ ಸಭೆ

ಮೈಸೂರು, ಸೆ.5(ಜಿಎ)–ಬೆಂಗಳೂರಿನ ಭಗೀರಥ ಶೈಕ್ಷಣಿಕ ಮತ್ತು ಚಾರಿಟಬಲ್ ಟ್ರಸ್ಟ್ ವತಿಯಿಂದ ಉಪ್ಪಾರ ಸಮುದಾಯದ ಮಕ್ಕಳಿಗೆ ಶೈಕ್ಷಣಿಕ ನೆರವು, ಸಮುದಾಯದಲ್ಲಿ ಶೈಕ್ಷಣಿಕ ಪ್ರಗತಿ ಉದ್ದೇಶದಿಂದ ಸಮುದಾಯದ ನೌಕರರು, ನಿವೃತ್ತರನ್ನು ಒಂದೆಡೆ ಸೇರಿಸಿ ಅವರ ಬೆಂಬಲ, ಸಲಹೆ ಪಡೆಯುವ ಉದ್ದೇಶದಿಂದ ಸೆ.7 ರಂದು ಮೈಸೂರು ವಲಯದ ಚಿಂತನ ಮಂಥನ ಸಭೆ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ಡಿ.ಜಗನ್ನಾಥ ಸಾಗರ್ ಈ ವಿಷಯ ತಿಳಿಸಿ, ಅಂದು ಬೆಳಿಗ್ಗೆ 11ಗಂಟೆಗೆ ನಗರದ ಸರಸ್ವತಿಪುರಂನಲ್ಲಿನ ಉಪ್ಪಾರ ವಿದ್ಯಾರ್ಥಿ ನಿಲಯದಲ್ಲಿ ಸಭೆ ನಡೆಯಲಿದೆ. ನಂತರ ಮಧ್ಯಾಹ್ನ 2ಕ್ಕೆ ಟ್ರಸ್ಟ್ ಸರ್ವ ಸದಸ್ಯರ ಸಭೆ ನಡೆಯಲಿದೆ ಎಂದರು.

ಉಪ್ಪಾರ ಸಮುದಾಯದಲ್ಲಿ ಪ್ರತಿಭಾವಂತರಿದ್ದರೂ ಬಡತನದ ಕಾರಣ ಅವರು ಉನ್ನತ ವಿದ್ಯಾಭ್ಯಾಸ ಪಡೆಯಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಇದುವರೆಗೆ ರಾಜ್ಯದ 24 ಜಿಲ್ಲೆಗಳ 128 ವಿದ್ಯಾರ್ಥಿಗಳಿಗೆ ಸುಮಾರು 23 ಲಕ್ಷ ರೂ.,ಗಳಷ್ಟು ಆರ್ಥಿಕ ನೆರವು ನೀಡಲಾಗಿದೆ. ಸಮುದಾಯದ ಹೆಣ್ಣು ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸ ಪಡೆಯಲಾಗುತ್ತಿಲ್ಲ. ಇವರಿಗೆ ದೂರದ ಊರುಗಳಲ್ಲಿ ಕಾಲೇಜು ಮೊದಲಾದ ಕಡೆ ಪ್ರವೇಶ ದೊರೆತರೂ ವಿದ್ಯಾರ್ಥಿ ನಿಲಯಗಳಿಲ್ಲ. ಹೀಗಾಗಿ ಮೈಸೂರಿನ ಟ್ರಸ್ಟ್‌ನಲ್ಲಿ ಉಳಿದಿರುವ ಸುಮಾರು 42 ಲಕ್ಷ ರೂ., ನಲ್ಲಿ ಒಂದು ನಿವೇಶನ ಖರೀದಿಸಿ, ಸರ್ಕಾರದ ನೆರವಿನಿಂದ ವಿದ್ಯಾರ್ಥಿನಿಯರಿಗಾಗಿ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಇದಲ್ಲದೆ ಸಮುದಾಯದ ನೌಕರರು, ಅಧಿಕಾರಿಗಳು, ನಿವೃತ್ತರು ಸಹ ಯಾವ ರೀತಿ ಇದಕ್ಕೆ ನೆರವಾಗಬಹುದು ಎಂಬ ಸಲಹೆ ಹಾಗೂ ನೆರವು ಪಡೆಯಲು ಈ ಚಿಂತನ ಮಂಥನ ಸಭೆ ಆಯೋಜಿಸಲಾಗಿದೆ. ಹೀಗಾಗಿ ಸಮುದಾಯದವರು ಪಾಲ್ಗೊಳ್ಳಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಎ.ಟಿ.ಸೋಮಶೇಖರಪ್ಪ, ಕೃಷ್ಣಸ್ವಾಮಿ, ಸಿ.ಎ.ಮಹದೇವಶೆಟ್ಟಿ, ಡಾ.ಸುರೇಶ್, ಯಶ್ವಂತ್‌ಕುಮಾರ್ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮದ್ರಾಸಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮದರಾಸಿ(ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಬಾಘಿ–4 (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಉಸಿರು (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಘಾಟಿ (ತ+ತೆ)	2+2 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ನಮೋ ವೆಂಕಟೇಶ(ಕ) + ಬ್ಯಾಡ್‌ಗರ್ಲ್(ತ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರುಧಿರಂ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಸು ಫ್ರಂ ಸೋ (ಕ): ಬೆ.10ಕ್ಕೆ, ಮ.3.55ಕ್ಕೆ, ವಾರ್–2 (ಹಿಂ): ಮ.12.40ಕ್ಕೆ, ಕೂಲಿ (ಕ): ಸಂ.6.35ಕ್ಕೆ, ಕೂಲಿ (ತ): ರಾ.9.40ಕ್ಕೆ
ಸ್ಕ್ರೀನ್ 2	ಕೂಲಿ (ತ): ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, ವಾರ್–2 (ಹಿಂ): ಮ.1.15ಕ್ಕೆ.
ಸ್ಕ್ರೀನ್ 3	ವಾರ್–2 (ಹಿಂ): ಬೆ.10.05ಕ್ಕೆ, ಸು ಫ್ರಂ ಸೋ (ಕ): ಮ.1.20ಕ್ಕೆ, ರಾ.7.10ಕ್ಕೆ, ಕೂಲಿ (ಕ): ಸಂ.4ಕ್ಕೆ, ಕೂಲಿ (ತ): ರಾ.9.50ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಬೆ.10.15ಕ್ಕೆ, ಸಂ.4ಕ್ಕೆ, ಕೂಲಿ (ಕ): ಮ.12.45ಕ್ಕೆ, ವಾರ್–2 (ಹಿಂ): ಸಂ.6.35ಕ್ಕೆ, ರಾ.9.55ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರಲ್ಲಿ ಇಂದು, ನಾಳೆ ಸೊಪ್ಪು ಮೇಳ

ಮೈಸೂರು, ಸೆ.5– ಸೊಪ್ಪು ಪರಿಪೂರ್ಣ ಆಹಾರ. ಸೊಪ್ಪು, ರಕ್ತಹೀನತೆ, ಅಪೌಷ್ಟಿಕತೆ ಸೇರಿದಂತೆ ಅನೇಕ ಆರೋಗ್ಯ ಸಮಸ್ಯೆಗಳನ್ನು ನಿವಾರಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

ನಮ್ಮ ಸುತ್ತಲಿನ ಪರಿಸರದಲ್ಲಿ ಸಹಜವಾಗಿ ಬೆಳೆಯುವ ಅಣ್ಣೇಸೊಪ್ಪು, ಸೀಗೆಸೊಪ್ಪು, ಬೆರಕೆಸೊಪ್ಪು, ಹೊನಗೊನೆಸೊಪ್ಪು ಮುಂತಾದ ಅನೇಕ ತಳಿಗಳನ್ನು ಇಂದಿನ ಪೀಳಿಗೆ ಕಳೆ ಎಂದು ನಿರ್ಲಕ್ಷಿಸಿದೆ. ಈ ಸೊಪ್ಪಿನ ವೈವಿಧ್ಯತೆಯನ್ನು ಮತ್ತೆ ಜನಪ್ರಿಯಗೊಳಿಸುವ ಉದ್ದೇಶದಿಂದ ಸಹಜ ಸಮೃದ್ಧ, ಹುಲಿಕಾಡು ರೈತ ಉತ್ಪಾದಕರ ಕಂಪನಿ ಮತ್ತು ಐಸಿಇಆರ್–ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ, ಸುತ್ತೂರು ಇವರ ಸಹಯೋಗದಲ್ಲಿ ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ನಾಳೆ ಹಾಗೂ ನಾಳಿದ್ದು, (ಸೆಪ್ಟೆಂಬರ್ 6 ಮತ್ತು 7) 'ಸೊಪ್ಪಿನ ಮೇಳ'ವನ್ನು ಆಯೋಜಿಸಲಾಗಿದೆ.

ಸೆ.6ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಈ ಮೇಳವನ್ನು ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಪ್ರಸಾರಾಂಗ ನಿರ್ದೇಶಕ ಡಾ. ಆರ್.ಸಂತೋಷ್ ನಾಯಕ್ ಉದ್ಘಾಟಿಸಲಿದ್ದಾರೆ. ಇಲವಾಲ ಬಳಿಯ ಯಲಚಹಳ್ಳಿ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ. ಜಿ.ಜನಾರ್ಧನ್, ಶಿವಮೊಗ್ಗ ಪರಿಸರ ಅಧ್ಯಯನ ಕೇಂದ್ರದ ಸಂಶೋಧಕ ಮುರಳೀಧರ್ ಗುಂಗುರುಮಳಿ, ಹೆಗ್ಗಡದೇವನಕೋಟೆ ಹುಲಿಕಾಡು ರೈತ ಉತ್ಪಾದಕರ ಕಂಪನಿಯ ನಿರ್ದೇಶಕರಾದ ಶ್ರೀಮತಿ ನಾಗಮ್ಮ ಮುಖ್ಯ ಅತಿಥಿಗಳಾಗಿರುವರು. ಅಧ್ಯಕ್ಷತೆಯನ್ನು ಸುತ್ತೂರು ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಬಿ.ಎನ್.ಜ್ಞಾನೇಂದ್ರ ವಹಿಸಲಿದ್ದಾರೆ. ಪ್ರಸ್ತಾವನೆ ಸಹಜ ಸಮೃದ್ಧ ನಿರ್ದೇಶಕ ಜಿ.ಕೃಷ್ಣಪ್ರಸಾದ್.

ಈ ಎರಡು ದಿನಗಳ ಮೇಳದಲ್ಲಿ 150ಕ್ಕೂ ಹೆಚ್ಚು ಬಗೆಯ ಸೊಪ್ಪುಗಳ ಪ್ರದರ್ಶನ ಹಾಗೂ ಮಾರಾಟವಿರಲಿದೆ. ಬೆಳಿಗ್ಗೆ 10ರಿಂದ ರಾತ್ರಿ 8ರವರೆಗೆ ಸಾರ್ವಜನಿಕರಿಗೆ ಮುಕ್ತ ಪ್ರವೇಶವಿರುತ್ತದೆ.

ಹೆಗ್ಗಡದೇವನಕೋಟೆಯ ಕಾಡು ಹಳ್ಳಿಯ ರೈತರು 25 ವಿಧದ ಸೊಪ್ಪುಗಳನ್ನು ತರಲಿದ್ದಾರೆ. ಕನಕಪುರದ ಕೊಳಗೊಂಡನಹಳ್ಳಿ ಮಹಿಳಾ ಸಂಘದವರು ವಿಶೇಷ ಸೀಗೆಸೊಪ್ಪಿನ ಮಾರಾಟದ ಜೊತೆಗೆ ಕಳಲೆ ಸಾರಿನ ಊಟ ಸವಿಯಲು ಅವಕಾಶ ಕಲ್ಪಿಸಲಿದ್ದಾರೆ. ಉತ್ತರ ಕರ್ನಾಟಕದ ಕಿರಕಸಾಲಿ, ಗೋಕರ್ಣದ ಕೆಂಪು ಸೊಪ್ಪು ಮೇಳದ ಆಕರ್ಷಣೆ. ಸೊಪ್ಪಿನ ಜ್ಯೂಸ್, ರಾಗಿ ಮುದ್ದೆ–ಬೆರಕೆ ಸೊಪ್ಪು ಚಪ್ಪರಿಸಲು ಲಭ್ಯವಿದೆ.

ದೇಸಿ ಅಕ್ಕಿ, ಸಿರಿಧಾನ್ಯ ಮತ್ತು ಬೇಳೆಕಾಳು, ಸಾವಯುವ ಮೌಲ್ಯವರ್ಧಿತ ಪದಾರ್ಥಗಳು ಮಾರಾಟಕ್ಕೆ ಬರಲಿವೆ. ದೇಸಿ ತರಕಾರಿ ಬೀಜಗಳು ಮತ್ತು ಹಣ್ಣಿನ ಗಿಡಗಳನ್ನು ಕೊಳ್ಳಬಹುದು. ಉತ್ತರ ಭಾರತದಿಂದ ಬಂದ ಜ್ಯೂಸ್ ಬಿಲ್ವ ಗಿಡಗಳು ಸಿಗಲಿವೆ.



ಸೊಪ್ಪಿನ ಅಡುಗೆ ಸ್ಪರ್ಧೆ



ಸೊಪ್ಪುಗಳ ಬಗ್ಗೆ ಅರಿವು ಮೂಡಿಸುವುದು ಹಾಗೂ ಸೊಪ್ಪಿನ ಖಾದ್ಯಗಳನ್ನು ಪರಿಚಯಿಸುವ ಉದ್ದೇಶದಿಂದ ಸೊಪ್ಪಿನ ಅಡುಗೆ ಸ್ಪರ್ಧೆ ಏರ್ಪಡಿಸಲಾಗಿದೆ ವಿವಿಧ ಬಗೆಯ ಸೊಪ್ಪುಗಳನ್ನು ಬಳಸಿ ಸಾಂಪ್ರದಾಯಿಕ ಅಥವಾ ಹೊಸ ಬಗೆಯ ಅಡುಗೆಗಳನ್ನು ಮನೆಯಲ್ಲೇ ತಯಾರಿಸಿ, 2025ರ ಸೆ.7ರಂದು ಭಾನುವಾರ ಮಧ್ಯಾಹ್ನ 12.30ಕ್ಕೆ ಮೇಳ ಸ್ಥಳದಲ್ಲಿ ಪ್ರಸ್ತುತಪಡಿಸಬೇಕು. ತೀರ್ಪುಗಾರರು ಆಯ್ಕೆ ಮಾಡುವ ಮೂವರು ವಿಜೇತರಿಗೆ ಬಹುಮಾನ ಹಾಗೂ ಪ್ರಮಾಣ ಪತ್ರ ನೀಡಲಾಗುತ್ತದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ.

ಚಿತ್ರಕಲಾ ಸ್ಪರ್ಧೆ

5 ರಿಂದ 12 ವರ್ಷದ ಮಕ್ಕಳಿಗಾಗಿ ಸೊಪ್ಪಿನ ಮಹತ್ವದ ಬಗ್ಗೆ ಅರಿವು ಮೂಡಿಸಲು ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ. ಭಾಗವಹಿಸುವವರು ಬಣ್ಣಗಳನ್ನು ತರಬೇಕು; ಹಾಳೆಯನ್ನು ಆಯೋಜಕರೇ ಒದಗಿಸುತ್ತಾರೆ. ಸೆಪ್ಟೆಂಬರ್ 7ರ ಭಾನುವಾರ ಬೆಳಿಗ್ಗೆ 11ರಿಂದ ಮಧ್ಯಾಹ್ನ 12.30ರೊಳಗೆ ಮೇಳ ನಡೆಯುವ ಸ್ಥಳದಲ್ಲೇ ಸೊಪ್ಪು ಕುರಿತ ಚಿತ್ರ ಬಿಡಿಸಬೇಕು. ತೀರ್ಪುಗಾರರು ಆಯ್ಕೆ ಮಾಡುವ ಮೂವರು ವಿಜೇತರಿಗೆ ಬಹುಮಾನ ಹಾಗೂ ಪ್ರಮಾಣ ಪತ್ರ ನೀಡಲಾಗುತ್ತದೆ. ಮಾಹಿತಿಗೆ ಸಚಿನ್, ಮೊ. 90086 03222 ಸಂಪರ್ಕಿಸಬಹುದು.

15ನೇ ವರ್ಷದ ಪುಣ್ಯ ಸ್ಮರಣೆ



ಎನ್.ನಂಜಪ್ಪ ಮತ್ತು ಆರ್.ಸಿದ್ದಮ್ಮ

ಮರಣ: 6.9.2010

ನೀವು ನಮ್ಮನ್ನಗಲಿ ಇಂದಿಗೆ 15 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಮಗ–ಸೊಸೆ, ಹೆಣ್ಣು ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು ಬಂಧು–ಮಿತ್ರರು

HOUSE FOR RENT / LEASE

2 BHK, Fully furnished with Lift Facility 1 Room attached, preferred for companies. Near Preethi Layout, Srirampura 2nd Stage, Mysuru

9900466811, 9980270076

BROKERS EXCUSE



10 am to 8 pm · Open All Days · Master / Visa Card Accepted

ONLY LEISUREWEAR, ACTIVEWEAR, KIDSWEAR, THERMALS & SOCKS

Venues in Mysore & Hassan

Mysore : Sri Bandanthamma Kaalamma Samudaya Bhavana New Kanthraj Urs Road, Near Apollo Hospital, Kuvempu Nagara

Hassan : Sri Sringeri Shankar Math, Shankar Math Road, K.R. Puram

Org. by: Surya Agency Pvt. Ltd.

ಅಪಾರ್ಟ್‌ಮೆಂಟ್ ಮಾರಾಟಕ್ಕಿದೆ

ಪ್ರೀಮಿಯಂ ಗೇಟೆಡ್ ಕಾಂಪ್ಲೆಕ್ಸ್‌ನಲ್ಲಿರುವ 'ಸಂಕಲ್ಪ್ ಲಕ್ಸೂರಿಯಾ'ದಲ್ಲಿ ಪ್ರೀತಿಯಿಂದ ನಿರ್ಮಿಸಿ, ನಿರ್ವಹಿಸುತ್ತಿರುವ ಸುಂದರವಾದ ಅಪಾರ್ಟ್‌ಮೆಂಟ್, 2400 ಚದರಡಿಯಲ್ಲಿದ್ದು, ಗಾಲ್ಫ್ ಕ್ಲಬ್, ಕಾರಂಜಿ ಕೆರೆ, ರೇಸ್‌ಕೋರ್ಸ್ ಮತ್ತು ಲಲಿತ ಮಹಲ್ ಪ್ಯಾಲೇಸ್‌ಗೆ ಹತ್ತಿರವಿದ್ದು, ಸಂಪೂರ್ಣ ಸುಸಜ್ಜಿತವಾದ, ಹವಾ ನಿಯಂತ್ರಿತ ಮನೆ 3 ಬೆಡ್‌ರೂಂ, ಲಿವಿಂಗ್ ರೂಮ್, ದೇವರ ಮನೆ, ವಿಶಾಲವಾದ ಅಡುಗೆ ಮನೆ, ಉಪಯುಕ್ತ ಜಾಗ, ಮತ್ತು ಕೆಲಸಗಾರರ ರೂಂ, 2 ಕಾರ್‌ಗಳ ಪಾರ್ಕಿಂಗ್ ಸೌಲಭ್ಯ ಒಳಗೊಂಡಿದೆ. ಮಾಲೀಕರು ಐದು ವರ್ಷಗಳಲ್ಲಿ 2 ತಿಂಗಳಷ್ಟೇ 'ವಿಹಾರಧಾಮ'ವನ್ನಾಗಿ ಉಪಯೋಗಿಸಿರುವ ಮನೆಯಾಗಿದೆ.

ಆಸಕ್ತಿಯುಳ್ಳವರು ಮಾತ್ರ ಸಂಪರ್ಕಿಸಿ

9845050164

(ಮಧ್ಯವರ್ತಿಗಳು ಕ್ಷಮಿಸಿ)

FOR RENT

1150 SQ FT COMMERCIAL BUILDING GROUND FLOOR BEHIND SUB URBAN BUS STAND, ACHAR'S ARCADE HALLADAKERI, MYSORE-570001

Call : 98860 69018 / 98866 58009

SBIT TRAVELS

Group Tour

Kashi Yatra-6 Days

9, 12, 18, 23 Sep | 2, 6, 10, 20 Oct

9343524127

(Saraswathipuram, Mysuru)

100% TEAK WOOD

FACTORY FINISH DOORS & WINDOWS

@ FACTORY DEPOT RATES

10 YEARS WARRANTY*

9731591267

9901291267

IT PARK

DTCP Approved

SITES FOR SALE at Jayapura, Phase-1

8kms from Ring Road Junction

Starts from 1550/- per sq.ft., Only

Bank Loan Available

For site visit & details contact : 91086 06262

IT PARK Kuvempunagar, Mysore.

NOT GETTING YOUR STAR OF MYSORE & ಮೈಸೂರು ಮಿತ್ರ

Call: 98452-96447 / 99003-82840

mysilkerae

KALENI SILK INDUSTRY

FACTORY SALE

ಅಪ್ಪಟ ಚಿನ್ನದ ಜರಿಯ ಸೀರೆಗಳು

100% PURE SILK / GOLD ZARI SAREES

UP TO 30% DISCOUNT

Woven on traditional looms exclusively with pure silk from the historic region of Mysore.

KALENI SILK INDUSTRY

#263, Hebbal Industrial Area, Opp. to Annapurna Aahar Hotel, Mysore-570018

9019949145 / 9845817295 / 9019348989

ಮಾನ್ಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ನಂಜನಗೂಡು

ಓ.ಎಸ್. ನಂ. 389/2024

ವಾದಿಗಳು: 1. ರಾಮಕೃಷ್ಣ ಬಿನ್ ಲೇಟ್ ಲಿಂಗೇಗೌಡ, ವಯಸ್ಸು 70 ವರ್ಷ, ವಾಸ: ಪಣ್ಯದಹುಂಡಿ ಗ್ರಾಮ, ಕಸಬಾ ಹೋಬಳಿ, ಚಾಮರಾಜನಗರ ತಾ॥ ಮತ್ತು ಜಿಲ್ಲೆ.

2. ಹನುಮಯ್ಯ ಬಿನ್ ಲೇಟ್ ಲಿಂಗೇಗೌಡ, ವಯಸ್ಸು 65 ವರ್ಷ, ವಾಸ: ಪಣ್ಯದಹುಂಡಿ ಗ್ರಾಮ, ಕಸಬಾ ಹೋಬಳಿ, ಚಾಮರಾಜನಗರ ತಾ॥ ಮತ್ತು ಜಿಲ್ಲೆ.

3. ಮೃತ ಅಮ್ಮಣಮ್ಮ ಬಿನ್ ಲೇಟ್ ಲಿಂಗೇಗೌಡರವರ ವಾರಸುದಾರರು, (ಎ) ಆರ್. ವೆಂಕಟೇಶ್ ಬಿನ್ ಲೇಟ್ ರುದ್ರೇಗೌಡ, ವಯಸ್ಸು 62 ವರ್ಷ, ವಾಸ: ಮನೆ ನಂ. 673, ಜ್ಞಾನಗಂಗ ಸ್ಕೂಲ್ ಹತ್ತಿರ, ಕುವೆಂಪುನಗರ, ಎಂ. ಬ್ಲಾಕ್, ಮೈಸೂರು ಸಿಟಿ. (ಬಿ) ಯಶೋಧ ಕೋಂ ಲೇಟ್ ರಾಮು. ವಯಸ್ಸು 60 ವರ್ಷ, ವಾಸ: ಕಾಮಗೆರೆ ಗ್ರಾಮ, ಪಾಳ್ಯ ಹೋಬಳಿ, ಕೊಳ್ಳೇಗಾಲ ತಾಲ್ಲೂಕು.

4. ಶಾರದಮ್ಮ ಬಿನ್ ಲೇಟ್ ಲಿಂಗೇಗೌಡ, ವಯಸ್ಸು 73 ವರ್ಷ, ವಾಸ: ಪಣ್ಯದಹುಂಡಿ ಗ್ರಾಮ, ಕಸಬಾ ಹೋಬಳಿ, ಚಾಮರಾಜನಗರ ತಾ॥ ಮತ್ತು ಜಿಲ್ಲೆ,

ವಿರುದ್ಧ

ಪ್ರತಿವಾದಿಗಳು: ಮಂಜುಳ ಕೋಂ ಎಂ. ನಾಗರಾಜು, ವಯಸ್ಸು 50 ವರ್ಷ, ಲೀಲಾವತಿ ಬಡಾವಣೆ, ಗೊರವರನಹಳ್ಳಿ ರಸ್ತೆ, ಮದ್ದೂರು, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

ನೋಟಿಸ್

ಮೇಲ್ಕಂಡ ವಾದಿಗಳು ದಾವ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿ ವಿರುದ್ಧ ಮಾಲೀಕರೆಂದು ಘೋಷಣೆ ಕೋರಿ ಈ ದಾವೆಯನ್ನು ಹೂಡಿದ್ದು, ನಿಮಗೆ ನ್ಯಾಯಾಲಯದ ಮುಖಾಂತರ ಸಮನ್ಸ್ ಕಳುಹಿಸಿದರು ಸಹ ನೀವು ಪಡೆದುಕೊಂಡಿರುವುದಿಲ್ಲ. ಆದ್ದರಿಂದ ಮೇಲ್ಕಂಡ ನಿಮಗೆ ಈ ಮೂಲಕ ತಿಳಿಸುವುದೇನೆಂದರೆ, ದಿನಾಂಕ: 16–10–2025 ರಂದು ಈ ಕೇಸಿನ ಹಿಯರಿಂಗ್ ಇರುತ್ತದೆ. ಆ ದಿನ ನೀವು ತಪ್ಪದೆ ಖುದ್ದಾಗಿ ಆಗಲೀ ಅಥವಾ ವಕೀಲರ ಮೂಲಕವಾಗಲೀ ಬೆಳಿಗ್ಗೆ 11–00 ಘಂಟೆಗೆ ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ತಿಳಿಯತಕ್ಕದ್ದು. ತಪ್ಪಿದಲ್ಲಿ ಈ ದಾವೆಯನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು.

ಷೆಡ್ಯೂಲ್

ನಂಜನಗೂಡು ತಾಲ್ಲೂಕು, ದೊಡ್ಡಕೌಲಂದೆ ಹೋಬಳಿ, ಕೋಣನಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ. 102 ರಲ್ಲಿ 6 ಎಕರೆ 27 ಗುಂಟೆ ಜಮೀನಿನ ಪೈಕಿ, ರೈಲ್ವೆ ರಸ್ತೆಯಿಂದ, ದಕ್ಷಿಣಕ್ಕೆ ಇರುವ 2 ಎಕರೆ ವಿಸ್ತೀರ್ಣದ ಜಮೀನು ಮಾತ್ರ, ಸದರಿ ಜಮೀನಿನ ಚೆಕ್‌ಬಂದಿ: ಪೂರ್ವಕ್ಕೆ: ರೈಲ್ವೆ ರಸ್ತೆ ; ಪಶ್ಚಿಮಕ್ಕೆ: ಸರ್ಕಾರಿ ಹಳ್ಳ ; ಉತ್ತರಕ್ಕೆ: ವಾದಿಗಳ ಇತರೆ ಜಮೀನು ; ದಕ್ಷಿಣಕ್ಕೆ: ರೈಲ್ವೆ ರಸ್ತೆ ನಂತರ, ಸರ್ವೆ ನಂ. 102 ರಲ್ಲಿ 4 ಎಕರೆ 27 ಗುಂಟೆ ಜಮೀನು ಪ್ರತಿವಾದಿಗೆ ಸೇರಿರುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ

ಸಹಿ/– ಶಿರಸ್ತೇದಾರರು, ಗೌರವಾನ್ವಿತ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ನಂಜನಗೂಡು

ವಾದಿಗಳ ಪರ ವಕೀಲರು

ಸಹಿ/– ಎಂ. ಶಿವಲಿಂಗೇಗೌಡ, ಎಂ.ಎ.ಎಲ್.ಎಲ್.ಬಿ.,

ವಕೀಲರು, ಚಾಮರಾಜನಗರ

Site For Sale

Muda, 40x60, Police Layout, West Facing, Excellent Location, Close to 80Ft Road, Genuine Buyers Only, Broker Excuse, Price: 1.18Cr.

8971495997

DESIGNED TO MAKE EVERY SPACE BEAUTIFUL

2 BHK HOME INTERIORS @ ₹2.9 LAKHS

HOME SPACE MART

Kushalnagar • Mysuru • Bengaluru

For Site Vist : @ 91089 23123

K.L.A School of Law

Tiptur - 572201 (Karnataka)

FINAL CALL FOR SPOT ADMISSION

L.L.B

3 Years Course

(Qualification any Degree)

Approved by the BAR COUNCIL OF INDIA

NO AGE LIMIT

For Details: 8088858884

Premium Villa Sites Hunsur Town

SURAKSHA ENCLAVE. RERA, HUDA, DC Approved 20x30, 20x40, 30x40, 30x50 Site Price Rs. 850/sqft

Loan upto 80% just 4.5 Km From Bus Stand 1.5 Km From Propsd. Railway Station

9900201234

ಸಾರ್ವಜನಿಕ ಪ್ರಕಟಣೆ

ಈ ಮುಖಾಂತರ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ನಮ್ಮ ಕಕ್ಷಿದಾರರು ಇದೇ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನಿಗೆ ಸಂಬಂಧಪಟ್ಟ ಹಾಗೆ ಅದರ ಹಾಲಿ ಮಾಲೀಕರಾದ ಮಂಡ್ಯ ಜಿಲ್ಲೆ, ಮಂಡ್ಯ ನಗರ, ಸುಭಾಷ್ ನಗರ ಬಡಾವಣೆ, 2ನೇ ಅಡ್ಡರಸ್ತೆ, ಕೃಪಾ ನರ್ಸಿಂಗ್ ಹೋಂ ಹತ್ತಿರ, ಮನೆ ನಂ.2051 ರಲ್ಲಿ ವಾಸವಾಗಿರುವ ಶ್ರೀ. ಎ.ಸಿ. ಮಾದೇಗೌಡ ರವರ ಮಗನಾದ ಸುಮಾರು 57 ವರ್ಷ ವಯಸ್ಸಿನ ಶ್ರೀ. ಅರವಿಂದ್ ಎ.ಎಮ್ ರವರಿಂದ ಖರೀದಿಸುವ ಉದ್ದೇಶದಿಂದ ಸದರಿಯವರಿಂದ ಕ್ರಯ ಪತ್ರವನ್ನು ನೊಂದಾಯಿಸಿಕೊಳ್ಳಲು ತಯಾರಿರುತ್ತೇವೆ, ಆದುದ್ದರಿಂದ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳ ಸಂಬಂದಪಟ್ಟ ಹಾಗೆ ಬೇರೆ ಯಾರಿಗಾದರು ಯಾವುದೇ ರೀತಿಯಲ್ಲಾದರು ಹಕ್ಕು, ಬಾದ್ಯತೆ, ಅಧಿಕಾರ, ಆಸಕ್ತಿ ಇದ್ದಲ್ಲಿ ಇಂದಿನಿಂದ 7 ದಿನಗಳ ಕಾಲಾವಧಿಯೊಳಗೆ ಸಂಬಂಧಪಟ್ಟ ಅಸಲಿ ದಾಖಲೆಗಳೊಂದಿಗೆ ಈ ಕೆಳಕಂಡ ವಕೀಲರನ್ನು ಅವರ ಕಛೇರಿಯಲ್ಲಿ ಖುದ್ದಾಗಿ ಭೇಟಿ ಮಾಡಶಕ್ಕದ್ದು. ಒಂದು ವೇಳೆ ಆ ರೀತಿಯಾಗಿ ಯಾರು ಭೇಟಿ ಮಾಡದಿದ್ದಲ್ಲಿ ಸದರಿ ಸ್ವತ್ತುಗಳ ಮಾರಾಟ ಸಂಬಂದಪಟ್ಟ ಹಾಗೆ ಯಾರಿಗೂ ಯಾವುದೇ ರೀತಿಯಾದ ಅಭ್ಯಂತರವಿಲ್ಲವೆಂದು ಪರಿಗಣಿಸಿ ಕ್ರಯಪತ್ರವನ್ನು ನೊಂದಣಿ ಮಾಡಿಕೊಳ್ಳಲಾಗುವುದು. ಒಂದು ವೇಳೆ ಯಾರಾದರೂ ನಿಗಧಿತ ಕಾಲಾವಧಿ ಕಳೆದ ನಂತರ ಈ ಬಗ್ಗೆ ಪ್ರಶ್ನಿಸಿದ್ದಲ್ಲಿ ಅದಕ್ಕೆ ನಮ್ಮ ಕಕ್ಷಿದಾರರು ಯಾವುದೇ ರೀತಿಯಲ್ಲೂ ಹೊಣೆಯಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮಂಡ್ಯ ಜಿಲ್ಲೆ, ಪಾಂಡವಪುರ ತಾಲೂಕು, ಚಿನಕುರಳಿ ಹೋಬಳಿ, ಚೆಲುವರಸನಕೊಪ್ಪಲು ಗ್ರಾಮದ ಸರ್ವೆ ನಂ.65/2 ರಲ್ಲಿ ವಿಸ್ತೀರ್ಣ 0–20 (ಇಪ್ಪತ್ತು) ಗುಂಟೆ ಮತ್ತು ಡಿಟೋ ಗ್ರಾಮದ ಸರ್ವೆ ನಂ.65/3 ರಲ್ಲಿ ವಿಸ್ತೀರ್ಣ 0–20 (ಇಪ್ಪತ್ತು) ಗುಂಟೆ ಒಟ್ಟು ವಿಸ್ತೀರ್ಣ 1–00 [ಒಂದು] ಎಕರೆ ಖುಷ್ಕಿ ಜಮಿನಿಗೆ ಚಕ್ಕುಬಂದಿ:– ಪೂರ್ವಕ್ಕೆ :ಲಕ್ಷ್ಮಣ ರವರ ಜಮೀನು; ಪಶ್ಚಿಮಕ್ಕೆ: ಬಿ.ವಿ. ವೈಭವ್ ಮತ್ತು ಅಪ್ಸರ ಶೇಖರ್ ರವರ ಜಮೀನು: ಉತ್ತರಕ್ಕೆ :ರಸ್ತೆ; ದಕ್ಷಿಣಕ್ಕೆ :ಕಾವೇರಿ ನದಿ.

ಸಹಿ/– ದಿನೇಶ್ ಸೋಲಂಕಿ, ವಕೀಲರು,
ನಂ.1197, 12/2, ಕೃಷ್ಣರಾಜ ಬುಲೆವಾರ್ಡ ರಸ್ತೆ,
ಮೈಸೂರು ಟೆನ್ನಿಸ್ ಕೋರ್ಟ್ ಮುಂಬಾಗ,
ಚಾಮರಾಜಪುರಂ,ಮೈಸೂರು.
ಮೊ: 9343430011

ದಿನಾಂಕ: 05–09–2025, ಸ್ಥಳ : ಮೈಸೂರು

DREAM WORLD TRAVELS Mysore

Dubai 5 Nights 6 Days

(Only 8 Seats Available)

PACKAGE COST: Per Person Rs.86,000/- Incl Tax GROUP PACKAGE

DEPARTURE DATE Sept 18th 2025



For More Details Contact : 994 5242 427

ಶ್ರೀ ಮಹದೇಶ್ವರ ವಿವಿದೋದ್ದೇಶ ಸಹಕಾರ ಸಂಘ (ನಿ)

ಸ್ಥಾಪನೆ : 1991 ನೋಂದಣಿ ಸಂಖ್ಯೆ : 18193

ಕುಂಬಾರಕೊಪ್ಪಲು, ಮೈಸೂರು – 570016

ಆಹ್ವಾನ ಪತ್ರಿಕೆ

ಮೇಲ್ಕಂಡ ನಮ್ಮ ಸಂಘದ 2024–25ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ : 07–09–2025 ಭಾನುವಾರ ಬೆಳಿಗ್ಗೆ 11–00 ಘಂಟೆಗೆ ಸ್ಥಳ: ಶ್ರೀ ಮಹದೇಶ್ವರ ಸಮುದಾಯ ಭವನ ಕುಂಬಾರಕೊಪ್ಪಲು, ಮೈಸೂರು ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ.ವಿ ಸೀತಾರಾಮು ರವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಎಲ್ಲಾ ಸದಸ್ಯರಿಗೂ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದ್ದು ಪತ್ರಿಕೆ ತಲುಪದೇ ಇದ್ದಲ್ಲಿ ಇದೇ ಆಹ್ವಾನ ಪತ್ರಿಕೆ ಎಂದು ತಿಳಿದು ದಯಾಮಾಡಿ ಸದರಿ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಆಡಳಿತ ಮಂಡಳಿಯ ಆದೇಶದ ಮೇರೆಗೆ

ಸಹಿ/– ಕಾರ್ಯದರ್ಶಿ ಸಹಿ/– ಶ್ರೀ ಕೆ.ವಿ ಸೀತಾರಾಮು, ಅಧ್ಯಕ್ಷರು

ದಿ ಗ್ರಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಸ್ಥಾಪನೆ: 1923

ಚಾಮರಾಜ ಜೋಡಿ ರಸ್ತೆ, ಮೈಸೂರು–570024

ದೂರವಾಣಿ: 0821–2442864 ಮೊಬೈಲ್: 9972039899

101ನೇ ವಾರ್ಷಿಕ ಮಹಾಸಭೆಯ ಸೂಚನಾ ಪ್ರಕಟಣೆ

ಮಾನ್ಯ ಸದಸ್ಯರುಗಳೇ,

ಈ ಬ್ಯಾಂಕಿನ 2024–25 ನೇ ಸಾಲಿನ 101ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ: 07.09.2025 ರಂದು ಭಾನುವಾರ ಬೆಳಿಗ್ಗೆ 11.30 ಗಂಟೆಗೆ ಸರಿಯಾಗಿ ಮೈಸೂರು ನಗರದ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ನಡೆಸಲು ಏರ್ಪಾಡು ಮಾಡಲಾಗಿರುತ್ತದೆ.

ನಮ್ಮ ಬ್ಯಾಂಕಿನ ಅಧ್ಯಕ್ಷರಾದ

ಶ್ರೀ ಎನ್. ಶ್ರೀನಿವಾಸ ಬಿ.ಕಾಂ.,ಎಲ್.ಎಲ್.ಬಿ.

ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಿರುತ್ತದೆ.

ಈಗಾಗಲೇ ಮಾನ್ಯ ಸದಸ್ಯರುಗಳಿಗೆ ವಾರ್ಷಿಕ ಮಹಾಸಭೆಯ ಸೂಚನಾ ಪ್ರಕಟಣೆಯನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು, ಒಂದು ವೇಳೆ ಸೂಚನಾ ಪ್ರಕಟಣೆಯು ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನವೆಂದು ಪರಿಗಣಿಸಿ ಮಾನ್ಯ ಸದಸ್ಯರುಗಳು ತಮ್ಮ ಷೇರು ಪಾಸ್ ಪುಸ್ತಕವನ್ನು ಕಡ್ಡಾಯವಾಗಿ ತಂದು ಮಹಾಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ದಿನಾಂಕ: 01.09.2025

ಸಹಿ/–ಶ್ರೀ.ಟಿ.ವಿ.ಮಹೇಶ್, ಪ್ರಭಾರ ವ್ಯವಸ್ಥಾಪಕರು

ಅಧ್ಯಕ್ಷರು : ಶ್ರೀ.ಎನ್.ಶ್ರೀನಿವಾಸ

ಉಪಾಧ್ಯಕ್ಷರು : ಶ್ರೀಮತಿ. ಸುಜಾತವೆಂಕಟರಾಜು

ನಿರ್ದೇಶಕರುಗಳಾದ: ಶ್ರೀ.ಆರ್.ಅನಂತರಾಮು, ಪ್ರೊ:ಪಿ.ವಿ.ನರಹರಿ, ಶ್ರೀ.ಕೆ.ಜಿ.ಸತೀಶ್,ಶ್ರೀಮತಿ.ಎಂ.ಎ.ಹೇಮಲತ, ಶ್ರೀ.ಎಸ್.ಎನ್.ಜಗದೀಶ್, ಡಾ:ಕೆ.ವಿ.ಲಕ್ಷ್ಮೀದೇವಿ, ಡಾ:ಸುಜಾತ.ಎಸ್.ರಾವ್, ಶ್ರೀಮತಿ.ಸಿ.ಕಮಲಮ್ಮ, ಶ್ರೀ.ಎಲ್.ಸೋಮಣ್ಣ, ಶ್ರೀಮತಿ.ಆರ್.ವರಲಕ್ಷ್ಮೀ, ಶ್ರೀ.ಎ.ಬಂಗಾರಗಿರಿವಾಸ ವೃತ್ತಿಪರ ನಿರ್ದೇಶಕರಾದ: ಶ್ರೀ.ಎಂ.ಎಸ್.ರಾಜಾರಾಂ. ಶ್ರೀ.ಆರ್.ದೇವರಾಜು.

ವಿಶೇಷ ಸೂಚನೆ :

1) ದಿನಾಂಕ 07.09.2025ರಂದು ಮೇಲ್ಕಂಡ ಸ್ಥಳದಲ್ಲಿ ಬೆಳಗ್ಗೆ 9.30 ಗಂಟೆಗೆ ಪ್ರತಿಭಾ ಪುರಸ್ಕಾರ, 10.30ಕ್ಕೆ ಮಾನ್ಯ ಹಿರಿಯ ಸದಸ್ಯರುಗಳಿಗೆ ಸನ್ಮಾನ ಏರ್ಪಡಿಸಲಾಗಿದೆ ಎಂಬ ವಿಷಯವನ್ನು ಮಾನ್ಯ ಸದಸ್ಯರುಗಳ ಅವಗಾಹನೆಗಾಗಿ ತರಲಾಗಿದ್ದು ಮಾನ್ಯ ಸದಸ್ಯರು ಆಗಮಿಸಲು ಕೋರಲಾಗಿರುತ್ತೆ,

2) ಬ್ಯಾಂಕಿನ 2024–25 ನೇ ಸಾಲಿನ ಲಾಭ–ನಷ್ಟದ ತಃಖ್ತೆ, ಆಸ್ತಿ–ಜವಾಬ್ದಾರಿ ತಖ್ತೆ ಹಾಗೂ ಸನ್ನದು ಲೆಕ್ಕಿಗರು ಪರಿಶೋಧನೆ ಮಾಡಿ ನೀಡಿರುವ ವರದಿಯನ್ನು ವೆಬ್‌ಸೈಟ್ www.gcbmys.in ರಲ್ಲಿಯೂ ಸಹ ಪರಿವೀಕ್ಷಿಸಲು ಲಭ್ಯವಿರುತ್ತದೆ.

3) ಸದಸ್ಯರು/ಸದಸ್ಯರೇತರುಗಳಿಗೆ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಅಂದರೆ ಶೇಕಡ 9% ರೀತ್ಯಾ ಚಿನ್ನದಾಭರಣ ಸಾಲವನ್ನು ಮಂಜೂರು ಮಾಡುತ್ತಲಿದ್ದು, ಅವಶ್ಯಕತೆಯುಳ್ಳವರು ಪಡೆಯಬಹುದಾಗಿರುತ್ತದೆ.

4) ದಿನಾಂಕ 08.09.2025ನೇ ಸೋಮವಾರದಂದು ಬ್ಯಾಂಕಿಗೆ ರಜೆ ಘೋಷಿಸಲಾಗಿರುತ್ತೆ.

G9 projects — Vee2 Developers

Designing your Dreams

POORVA SHELTERS

Near to Lalithadripura Ring road Mysuru

Book your plot, we'll Build your dream home

20×30 | 30×40 & 20×40 | 30×50

₹ 3,999/- per sqft

8088-707-707

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಆಟೋಮೋಟಿವ್ ಆಕ್ಸೆಲ್ಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ,

ಹೂಟಗಳ್ಳಿ ಕೈಗಾರಿಕಾ ಪ್ರದೇಶ, ಮೈಸೂರು – 570018

ವಾರ್ಷಿಕ ಮಹಾಸಭೆ

ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯು ದಿನಾಂಕ 07.09.2025 ಭಾನುವಾರದಂದು ಬೆಳಿಗ್ಗೆ 10.00 ಘಂಟೆಗೆ ಸುಬ್ಬಲಕ್ಷ್ಮಿ ಸಭಾಂಗಣ, ಮಹಾಜನ ವಿದ್ಯಾ ಸಂಸ್ಥೆ, ಬೃಂದಾವನ ಆಸ್ಪತ್ರೆ ಹತ್ತಿರ, ಜಯಲಕ್ಷ್ಮಿಪುರಂ, ಮೈಸೂರು, ಇಲ್ಲಿ ನಡೆಯಲಿದೆ. ನಿರ್ದೇಶಕ ಮಂಡಳಿಯು ಸದಸ್ಯರೆಲ್ಲರಿಗೂ ಹಾರ್ದಿಕ ಸ್ವಾಗತವನ್ನು ಬಯಸುತ್ತದೆ. ಆಹ್ವಾನ ಪತ್ರಿಕೆಯನ್ನು ಸದಸ್ಯರೆಲ್ಲರಿಗೂ ಪ್ರತ್ಯೇಕವಾಗಿ ಕಳಿಸಲಾಗಿದೆ. ಒಂದು ವೇಳೆ ಆಹ್ವಾನ ಪತ್ರಿಕೆಯು ತಲುಪದಿದ್ದಲ್ಲಿ, ಇದನ್ನೇ ಆಹ್ವಾನ ಪತ್ರಿಕೆ ಎಂದು ಪರಿಗಣಿಸಿ, ಸದಸ್ಯರು ಸಭೆಗೆ ಹಾಜರಾಗಬೇಕೆಂದು ಪ್ರಾರ್ಥಿಸುತ್ತೇವೆ.

ಆಟೋಮೋಟಿವ್ ಆಕ್ಸೆಲ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ಪರವಾಗಿ

ದಿ: 05/09/2025 ಸಹಿ/– ಮುರಳೀಧರ ಭಟ್ಟ ವಿ, ಅಧ್ಯಕ್ಷರು



MYSORE RACE CLUB LIMITED

P B No. 11, Race Course Road, Mysore - 570 010

Tel. No. 2521675 E-mail: secretary@mysoreraceclub.com

REQUIRES PERSONAL ASSISTANT

We are looking for a smart, organised and proactive person to support the Senior Management in the day-to-day operations.

Responsibilities:

- Manage schedules of meetings and make arrangements.
- Handle correspondences including emails.
- Assist in preparing reports presentations and documents.
- Provide general administrative support as required.

Graduate with strong communication skills in English with excellent organizational and time management abilities, with proficiency in MS office and digital tools and ability to work independently with attention to detail with prior experience may apply with resume including salary expectation within 7 days to :

Secretary & CEO, MYSORE RACE CLUB LTD. at secretary@mysoreraceclub.com

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೃಷ್ಣರಾಜನಗರ

ಮೈಸೂರು – ಹಾಸನ ರಸ್ತೆ, ಕೆ.ಆರ್.ನಗರ, ತಾ, ಮೈಸೂರು ಜಿಲ್ಲೆ

ದೂರವಾಣಿ: 08223–262352, ಇಮೇಲ್: apmckrnagar@gmail.com

ಸಂಖ್ಯೆ: ಕೃಉಮಾಸ(ಕೃರಾನ)/429/2025–26 ದಿನಾಂಕ: 03.09.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಮಾತ್ರ)

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೃಷ್ಣರಾಜನಗರ ಇವರು ಈ ಕೆಳಕಂಡ ಕಾಮಗಾರಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಕಾಯಿದೆ 1999 ಮತ್ತು ನಿಯಮ 2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಸರ್ಕಾರದ ಆದೇಶ, ಸುತ್ತೋಲೆ ಮತ್ತು ಮಾರ್ಗಸೂಚಿ ಅನುಸಾರ ಐಟಂವಾರು ಟೆಂಡರುಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ನೋಂದಾಯಿತ ಹಾಗೂ Standard Tender Documents KW-2 Clause-3 ನಲ್ಲಿ ಅರ್ಹರಿರುವ ವಿದ್ಯುತ್ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಅಡಿಯಲ್ಲಿ ಸಲ್ಲಿಸಲು ಆಹ್ವಾನಿಸಲಾಗಿದೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ ರೂ.ಗಳಲ್ಲಿ	ಇ.ಎಂ.ಡಿ. ಮೊಬಲಗು ಶೇಕಡ 2.00ರಂತೆ (ಇ ಪೇಮೆಂಟ್) (ರೂ.ಗಳಲ್ಲಿ)	ಕೆಲಸ ಪೂರೈಸಲು ನಿಗಧಿಪಡಿಸಿದ ಅವಧಿ	ಅರ್ಹ ಗುತ್ತಿಗೆದಾರರ ದರ್ಜೆ	ಇ– ಪ್ರೋಸಸಿಂಗ್ ಫೀ (ಇ–ಪೇಮೆಂಟ್)
1	ಕೃ.ಉ.ಮಾ.ಸ, ಕೃಷ್ಣರಾಜನಗರ 2025–26ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅನುಮೋದಿತ ಸಮಿತಿಯ ಸಾಲಿಗ್ರಾಮ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಹೊಸದಾಗಿ ಬೀದಿ ದೀಪ ಅಳವಡಿಸುವ ಕಾಮಗಾರಿ. (ಐಟಂವಾರು ಟೆಂಡರ್)	ರೂ. 29,67,945=47	ರೂ. 59,400=00	3 ತಿಂಗಳು (ಮಳೆಗಾಲ ಹೊರತು ಪಡಿಸಿ)	ಕೆಡಬ್ಲ್ಯು–2, ಕ್ಲಾಸ್–3ರಲ್ಲಿ ಅರ್ಹರಿರುವ & ಲೋ.ಇ.ಯಲ್ಲಿ ನೊಂದಾಯಿತ ವಿದ್ಯುತ್ ಗುತ್ತಿಗೆದಾರರು	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಂತೆ

1) ಪ್ರೀ ಬಿಡ್ ಮೀಟಿಂಗ್ **ದಿನಾಂಕ: 12.09.2025 ರಂದು ಮಧ್ಯಾಹ್ನ 04–30 ಗಂಟೆಗೆ.** 2) ಭರ್ತಿ ಮಾಡಿದ ತಾಂತ್ರಿಕ ಮತ್ತು ಆರ್ಥಿಕ ಟೆಂಡರ್ ದಾಖಲೆಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ:22–09–2025 ಸಂಜೆ 5–00 ಗಂಟೆವರೆಗೆ.** 2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 25/09/2025 ಮದ್ಯಾಹ್ನ 4–30 ಗಂಟೆಗೆ.** 3) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 03/10/2025 ಮದ್ಯಾಹ್ನ 4.30 ಗಂಟೆಗೆ.** Tender documents may be downloaded from Government of Karnataka Public Procurement Portal **website: https://kppp.karnataka.gov.in/#/portal/portal-home** under login for Contractors. ಹೆಚ್ಚಿನ ಷರತ್ತು ಹಾಗೂ ನಿಬಂಧನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೃಷ್ಣರಾಜನಗರ

ಸಹಿ/– ಅಧ್ಯಕ್ಷರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೃಷ್ಣರಾಜನಗರ

DIPR/MYS/KAVITA/914/25-26

ಇಂದ್ರ ಕೆಫೆ'ಸ್

IC ಸ್ಥಾಪನೆ :1956

PARAS A Touch of Taste


ನಮಗೆ ಹೆಮ್ಮೆಯನ್ನು ತಂದುಕೊಟ್ಟು ಮೈಸೂರಿನ ಹಿರಿಮೆಯನ್ನು ಹೆಚ್ಚಿಸಿದ ಎಲ್ಲಾ ಖ್ಯಾತ ಗಣ್ಯರಿಗೂ ನಮ್ಮ 69ನೇ ವಾರ್ಷಿಕೋತ್ಸವದ ಹೃದಯಪೂರ್ವಕ ವಂದನೆಗಳು

ಅಪ್ಪಟ ಸಸ್ಯಹಾರಿ ರೆಸ್ಟೋರೆಂಟ್

ಬಾಯಿ ನೀರೂರಿಸುವಂತಹ ಸ್ವಾದ !

ಸೌತ್/ನಾರ್ಥ್ ಇಂಡಿಯನ್ ತಿನಿಸುಗಳು, ಸಿಹಿತಿಂಡಿ, ಸ್ವಾದಭರಿತ ತಿಂಡಿಗಳು, ಐಸ್‌ಕ್ರೀಮ್, ಫ್ರೂಟ್ ಜ್ಯೂಸ್ ಮತ್ತು ಚಾಟ್ಸ್‌ಗಳು ಇತ್ಯಾದಿ

ಅಧಿಕ ಪ್ರಮಾಣದ ಸಿಹಿತಿಂಡಿಗಳ ಪೂರೈಕೆಗೆ ಆರ್ಡರ್‌ಗಳನ್ನು ಸ್ವೀಕರಿಸುತ್ತೇವೆ



ಪಾರ್ಟಿ, ಕೂಟ ಹಾಗೂ ಇನ್ನಿತರ ಶುಭ ಸಮಾರಂಭಗಳಿಗೆ ವಿಶಾಲವಾದ ಹಾಲ್ ದೊರೆಯುತ್ತದೆ. # 1740, ಸಯ್ಯಾಜಿ ರಾವ್ ರಸ್ತೆ, ಮೈಸೂರು –1. ದೂ: 2420236 / 4268236